ಕರ್ನಾಟಕ ವಿಧಾನ ಸಭೆ

ಶುಕ್ರವಾರ, 3ನೇ ಫೆಬ್ರುವರಿ ತಿಂಗಳು 1984

ವಿಧಾನ ಸೌಧದ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ 11 ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಅವರು ಪೀಠವನ್ನು ಅಲಂಕರಿಸಿದರು.

1. ANNOUNCEMENT

Mr. Speaker.— I have received the following message from the Deputy Chairman, Legislative Council :

"As required by rule 114 of the rules of procedure and conduct of business in the Karnataka Legislative Council, I send herewith the following Bills which have been agreed to by the Legislative Council on 2nd February, 1984 without amendments :

1) The Bangalore Water Supply and Sewerage (Amendment) Bill 1983.

2) The Karnataka Credit Operations and Miscellaneous Provisions (Amendment) Bill, 1984.

3) The Karnataka Public Libraries (Amendment) Bill, 1984.

4) The Bangalore Development Authority (Amendment) Bill 1984.

5) The Karnataka Electricity (Taxation on Consumption) (Amendment) Bill, 1983.

6) The Karnataka Scheduled Castes and Scheduled Tribes (Prohibition of transfer of certain lands) (Amendment) Bill, 1984

Now, the Hon. Chief Minister to reply to the discussion on the Motion of Thanks to Governor's Address.

2. ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣ ಪ್ರಸ್ತಾವ

(ಮುಕ್ತಾಯ ಗೊಂಡಿತು)

(ಮುಖ್ಯಮಂತ್ರಿಯವರಿಂದ ಉತ್ತರ)

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಕಳೆದ ಒಂದು ವಾರದಿಂದ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಈ ಸದನದಲ್ಲಿ ಸುದೀರ್ಘವಾದಂತಹ ಚರ್ಚೆಯಾಗಿದೆ. ಈ ಚರ್ಚೆಯಲ್ಲಿ ಸರ್ಕಾರದ ನೀತಿ, ಸರ್ಕಾರದ ಕಾರ್ಯಕ್ರಮ ಮತ್ತು ಸರ್ಕಾರದ ಸಾಧನೆ ಇವುಗಳ ಮೇಲೆ ಮುಖ್ಯವಾಗಿ ಮಾನ್ಯಸದಸ್ಯರಿಂದ ಅಭಿಪ್ರಾಯ ಬರುತ್ತದೆ. ಎಂದು ನಿರೀಕ್ಷೆ ಮಾಡುವುದು ಸ್ವಾಭಾವಿಕ. ಅನೇಕ ಮಾನ್ಯ ಸದಸ್ಯರು ಈ ವಿಚಾರಗಳ ಮೇಲೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಕೆಲವರು ಸರ್ಕಾರದ ನೀತಿಯ ಬಗ್ಗೆ, ಕಾರ್ಯಕ್ರಮಗಳ ಬಗ್ಗೆ ಮತ್ತು ಸಾಧನೆಗಳ ಬಗ್ಗೆ ಮೆಚ್ಚುಗೆಯನ್ನೂ ಸಹ ವ್ಯಕ್ತ ಮಾಡಿದ್ದಾರೆ. ಆ ಎಲ್ಲ ಮಾನ್ಯ ಸದಸ್ಯರಿಗೂ ನಾನು ಕೃತಜ್ಞನಾಗಿದ್ದೇನೆ. ಅಲ್ಲದೆ ಈ ವಿಚಾರಗಳ ಬಗ್ಗೆ ಕೆಲವು ಟೀಕೆಗಳೂ ಬಂದಿವೆ. ಆ ಟೀಕೆಗಳನ್ನೂ ನಾನು ಸ್ವಾಗತಿಸುತ್ತೇನೆ. ಇದರ ಹೊರತಾಗಿ ಬೇರೆ ಬೇರೆ ವಿಚಾರಗಳ ಬಗ್ಗೆ ಈ ಸಂದರ್ಭದಲ್ಲಿ ಪ್ರಸ್ತಾಪವಾಯಿತು. ಈ ಬೇರೆ ಬೇರೆ ವಿಷಯಗಳು ನೇರವಾಗಿ ಈ ಸಭೆಯ ಮುಂದೆ ಇದ್ದಂಥ ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಡದೇ ಇದ್ದವು ಎಂದರೆ ಯಾರೂ ತಪ್ಪು ತಿಳುವಳಿಕೆ ಮಾಡುವ ಅಗತ್ಯವಿಲ್ಲ. ಚರ್ಚೆಯ ಸಮಯದಲ್ಲಿ ಇಂತಹ ಅಪ್ರಸ್ತುತ ವಿಷಯಗಳು ಬರುತ್ತವೆ. ಮುಖ್ಯವಾಗಿ ರಾಜಕೀಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಸರ್ಕಾರ ಯಾವ ರೀತಿ ಅಸ್ತಿತ್ವಕ್ಕೆ ಬಂತು ಎಂದು ಕೆಲವು ಮಾನ್ಯ

ಸದಸ್ಯರು ಬಹಳ ದೀರ್ಘವಾಗಿ ಪ್ರಸ್ತಾಪ ಮಾಡಿದ್ದಾರೆ. ಈ ಸರ್ಕಾರ ಅಸ್ತಿತ್ವದಲ್ಲಿ ಬಂದಿದ್ದು ಒಂದು ವಿಶೇಷವಾದ ಸಂದರ್ಭದಲ್ಲಿ ಮತ್ತು ವಿಶೇಷವಾದ ಪರಿಸ್ಥಿತಿಯಲ್ಲಿ ಎಂಬುದನ್ನು ನಾನು ಒಪ್ಪುತ್ತೇನೆ. ಕಳೆದ ವರ್ಷ ಆದಂತಹ ಚುನಾವಣೆಯಲ್ಲಿ ಯಾವುದೇ ಒಂದು ಪಕ್ಷಕ್ಕೂ ಸ್ಪಷ್ಟವಾದ ಬಹುಮತ ಇಲ್ಲದೆ ಇದ್ದುದರಿಂದ, ಎಲ್ಲಕ್ಕಿಂತ ಹೆಚ್ಚು ಸಂಖ್ಯೆ ಸದಸ್ಯರನ್ನು ಪಡೆದಂತಹ ಪಕ್ಷವನ್ನು ರಾಜ್ಯಪಾಲರು ಸರ್ಕಾರ ರಚನೆ ಮಾಡುವುವಕ್ಕೆ ಆಮಂತ್ರಣ ಕೊಟ್ಟರು. ಆ ಸಂದರ್ಭದಲ್ಲಿ ಇನ್ನೂ ನಾಲ್ಕು ರಾಜಕೀಯ ಪಕ್ಷಗಳು ಈ ಸರ್ಕಾರವನ್ನು ರಚಿಸುವುದರಲ್ಲಿ ತಮ್ಮ ಬೆಂಬಲವನ್ನು ಸೂಚಿಸಿದವು. ಇದು ಎಲ್ಲರಿಗೂ ತಿಳಿದಂಥ ವಿಚಾರ

ಆದರೆ ಪುನಃ ಪುನಃ ಈ ಮನೆಯಲ್ಲಿ ಜನತಾ ಪಕ್ಷದ ಸದಸ್ಯರು ಬರೀ 59 ಜನ ಅವರಿಗೆ ಬಹುಮತ ವಿಲ್ಲವೆಂದು ಹೇಳುವುದು ಸರಿಯಲ್ಲ. ನಾವು ಇವತ್ತು ನಮ್ಮ ಮಿತ್ರಪಕ್ಷಗಳ ಸಹಕಾರದೊಂದಿಗೆ ಸರ್ಕಾರವನ್ನು ರಚನೆ ಮಾಡಿದ್ದೇವೆ. ಆದರೆ ಪದೇ ಪದೇ ಈ ಮನೆಯಲ್ಲಿ ಅದರ ಬಗ್ಗೆ ಆರೋಪ ಮಾಡುವುದು ಸರಿಯಾದುದಲ್ಲ. ಮತ್ತೆ ಈ ಸದನದಲ್ಲಿ ಚರ್ಚೆ ನಡೆಯತಕ್ಕಂಥ ಕಾಲದಲ್ಲಿ ಸಹ ಆರೋಪ ಮಾಡುವುದು ಸರಿಯಾದುದಲ್ಲ. ಆ ಬಗ್ಗೆ ಮಾನ್ಯ ಸದಸ್ಯರು ತೀವ್ರವಾಗಿ ಆಗಾಗ್ಗೆ ಹೇಳ ತಕ್ಕಂಥ ಅವಶ್ಯಕತೆ ಇಲ್ಲ. ಆ ರೀತಿ ಹೇಳತಕ್ಕಂಥದ್ದನ್ನು ಒಂದು ಇತಿಹಾಸವೆಂದು ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ? ಮಾನ್ಯ ಅಧ್ಯಕ್ಷರೇ ಇನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ನಾನು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡಿದ ತಕ್ಷಣ ಒಂದು ಹೇಳಿಕೆಯಲ್ಲಿ ಸಾರ್ವಜನಿಕರ ಮುಂದೆ ಹಾಗೂ ಈ ಸದನದಲ್ಲಿ ಕೂಡ ಕೊಟ್ಟಿದ್ದೇನೆ. ಆದರೆ ಆ ಹೇಳಿಕೆಯನ್ನು ನಾನು ಏನು ಹೇಳಿದ್ದೇನೆ ಎಂದರೆ ರಾಜಕೀಯದಲ್ಲಿ ನಾವು ಒಂದು ಹೊಸ ಪ್ರಯೋಗವನ್ನು ಮಾಡುವು ದಕ್ಕೆ ಪ್ರಯತ್ನ ಮಾಡುತ್ತೇವೆಂದು. ನಮ್ಮ ದೇಶದಲ್ಲಿ ಅನೇಕ ವರ್ಷಗಳಿಂದ ರಾಜಕೀಯ ವಾತಾವರಣ ಅತ್ಯಂತ ಕಲುಷಿತವಾಗಿದೆಯೆಂದು ನಾನು ಹೇಳಿದ್ದೇನೆ. ಮತ್ತು ರಾಜಕೀಯದಲ್ಲಿ ಇವತ್ತು ಮೌಲ್ಯ ನಿಷ್ಠೆಯ ರಾಜಕೀಯ ಹೊರಟು ಹೋಗಿ ದ್ರವ್ಯನಿಷ್ಠೆ ರಾಜಕೀಯ ಜಾರಿಗೆ ಬಂದಿದೆ. ಆಡಳಿತದಲ್ಲಿ ಮತ್ತು ರಾಜಕೀಯದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ. ಇವತ್ತಿನ ದಿವಸ ಜನತೆಯಲ್ಲಿ ಪ್ರಜಾಪ್ರಭುತ್ವದ ಬಗ್ಗೆ ನಂಬಿಕೆ ಕಡಿಮೆಯಾಗುತ್ತಿದೆ. ಆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ನಾವು ಉಂಟು ಮಾಡ ಬೇಕಾದರೆ ಮೌಲ್ಯ ನಿಷ್ಠೆಯ ರಾಜಕೀಯ ಮತ್ತು ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ತೊಡೆದು ಹಾಕುವಂತಹ ಒಂದು ಹೊಸ ಪ್ರಯೋಗವನ್ನು ಮಾಡುತ್ತೇನೆಂದು ನಾನು ಹೇಳಿದ್ದೆ. ನಮ್ಮ ಜನತಾ ಸರ್ಕಾರ ಅಧಿಕಾರ ವಹಿಸಿಕೊಂಡ ಒಂದು ವರ್ಷದಲ್ಲಿ ನಾವು ಮಾಡಿದಂಥ ಸಾಧನೆಯ ಬಗ್ಗೆ ಪ್ರಸ್ತಾಪ ಮಾಡಲು ನನಗೆ ಬಹಳ ಸಂತೋಷವಾಗುತ್ತಿದೆ. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಎಲ್ಲಾ ಭ್ರಷ್ಟಾಚಾರ ನಿರ್ಮೂಲನವಾಗಿದೆ ಎಂದು ಆಗಲಿ ಅಥವಾ ಮೌಲ್ಯ ನಿಷ್ಠೇ ರಾಜಕೀಯ ಬಂದಿದೆಯೆಂದು ಆಗಲಿ ಹೇಳುವುದಕ್ಕೆ ನಾನು ತಯಾರಾಗಿಲ್ಲ. ಆದರೆ ಪ್ರತಿಯೊಂದು ರಾಷ್ಟ್ರದಲ್ಲಿಯೂ ಕೂಡ ಪ್ರತಿಯೊಂದು ಮಟ್ಟದಲ್ಲಿಯೂ ಕೂಡ ನಾವು ಇದನ್ನು ಸಂಪೂರ್ಣವಾಗಿ ಜಾರಿಗೆ ತಂದಿದ್ದೇವೆಂದು ಯಾರೂ ಹೇಳುವುದಕ್ಕೆ ಆಗುವುದಿಲ್ಲ. ಆ ರೀತಿ ಕೇವಲ ಒಂದೇ ಒಂದು ವರ್ಷದಲ್ಲಿ ಮಾಡುವುದಕ್ಕೂ ಕೂಡ ಸಾಧ್ಯವಿಲ್ಲ. ಕಳೆದ ವರ್ಷ ರಾಜ್ಯದಲ್ಲಿ ಯಾವ ಪರಿಸ್ಥಿತಿ ಇತ್ತೋ ಅದಕ್ಕಿಂತ ಒಳ್ಳೆಯ ಪರಿಸ್ಥಿತಿ ಯನ್ನು ನಾವು ರಾಜ್ಯದಲ್ಲಿ ನಿರ್ಮಾಣ ಮಾಡಿದ್ದೇವೆ. ಮತ್ತು ನಮ್ಮ ಯೋಜನೆಗಳು ಎಲ್ಲಾ ಮಟ್ಟದಲ್ಲಿಯೂ ಕೂಡ ಗುಣಾತ್ಮಕವಾಗಿ ಇವೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ ನಾವು ಅಧಿಕಾರವನ್ನು ವಹಿಸಿಕೊಂಡಂತಹ ಕಾಲದಲ್ಲಿ ರಾಜ್ಯ ಬಹಳ ಕ್ಲಿಷ್ಟ ಪರಿಸ್ಥಿತಿ ಯಲ್ಲಿತ್ತು. ರಾಜ್ಯದಲ್ಲಿ ಒಂದು ಅನಿಶ್ಚಿತತೆಯ ವಾತಾವರಣ ಉಂಟಾಗಿತ್ತು. ಅದನ್ನು ನಮ್ಮ ಸರ್ಕಾರ ಬಂದ ಮೇಲೆ ಹೋಗಲಾಡಿಸುವುದಕ್ಕೆ ಸರ್ವ ಪ್ರಯತ್ನವನ್ನು ಸಹ ಮಾಡುತ್ತಿದೆ. ನಾನು ಮೊದಲೇ ಹೇಳಿದ ಹಾಗೆ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡಿಕೊಂಡು ಬರುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಸಹ ಮಾಡುತ್ತೇವೆ. ಮತ್ತೆ ಜನತೆಯು ಯಾವ ಒಂದು ತೀರ್ಮಾನವನ್ನು ಕೊಡುತ್ತಾರೋ ಆ ಒಂದು ತೀರ್ಮಾನಕ್ಕೆ ನಾವು ಸದಾ ಬದ್ಧರಾಗಿರುತ್ತೇವೆ. ಜನತೆಯು ಕೊಟ್ಟಂತಹ ತೀರ್ಮಾನದ ಪ್ರಕಾರ ನಾವು ಈ ರಾಜ್ಯದಲ್ಲಿ ಹೊಸ ಸರ್ಕಾರವನ್ನು ರಚನೆ ಮಾಡುವುವಕ್ಕೆ ಸಾಧ್ಯ ವಾಯಿತು. ಈ ಸರ್ಕಾರ ಇರಬೇಕು ಅಥವಾ ಈ ಸರ್ಕಾರ ಹೋಗಬೇಕು ಎನ್ನುವುದನ್ನು ನಿಶ್ಚಯ ಮಾಡುವುದು ಜನತೆ ಹೊರತು ಬೇರೆ ಯಾರೂ ಅಲ್ಲ. ಬೇರೆ ಯಾರಿಗೂ ಆ ಒಂದು ಅಧಿಕಾರವಿಲ್ಲ. ಆದರೆ ಈಗಾಗಲೇ ಕೆಲವು ಜನ ಮಾನ್ಯ ಸದಸ್ಯರು ಹಾಗೂ ಹಿರಿಯ ನಾಯಕರು ಹೇಳಿಕೆಗಳನ್ನು ಕೊಟ್ಟು, ಕರ್ನಾಟಕ ರಾಜ್ಯದಲ್ಲಿ ಜನತಾ ಸರ್ಕಾರವನ್ನು ಉರುಳಿಸುವುದು ನಮ್ಮ ಆಜನ್ಮ ಸಿದ್ಧ ಹಕ್ಕು ಎಂದು ಹೇಳಿಕೆಯನ್ನು ಕೊಟ್ಟರು. ಮತ್ತೆ ಈ ಸರ್ಕಾರ ಒಂದೇ ಒಂದು ವಾರದಲ್ಲಿ ಬಿದ್ದು ಹೋಗುತ್ತದೆ, ನಾಲ್ಕು ದಿವಸಗಳಲ್ಲಿ ಬಿದ್ದು ಹೋಗುತ್ತದೆ. ಎನ್ನತಕ್ಕಂಥ ಅಪಪ್ರಚಾರವನ್ನು ಜನತೆಯ ಮನಸ್ಸಿನಲ್ಲಿ ಉಂಟು ಮಾಡಿದರು. ಆದರೆ ಇಂಥ ಹೇಳಿಕೆಗಳಿಂದ ನಾವು ಯಾರೂ ಕೂಡ ಆಶ್ಚರ್ಯ ಪಡಬೇಕಾಗಿಲ್ಲ. ಇನ್ನು ನಮ್ಮ ರಾಜ್ಯದ ಆರ್ಥಿಕಪರಿಸ್ಥಿತಿಯ ಬಗ್ಗೆ ನಾವು ಪ್ರಸ್ತಾಪ ಮಾಡುವುದಾದರೆ ನಾನು ಮೊದಲೇ

ಹೇಳಿದ ಹಾಗೆ ನಾವು ಅಧಿಕಾರಕ್ಕೆ ಬಂದ ತಕ್ಷಣ ರಾಜ್ಯದಲ್ಲಿ ಬಹಳ ಕ್ಲಿಷ್ಟ ಪರಿಸ್ಥಿತಿ ಇತ್ತು. 1982ನೇ ಜೂನ್ ತಿಂಗಳಿಗೆ ಸುಮಾರು 75 ಕೋಟಿ ರೂಪಾಯಿಗಳ ಓವರ್ ಡ್ರಾಫ್ಟನ್ನು ತುಂಬಬೇಕಾದಂಥ ಪ್ರಸಂಗ ಬಂದಿದ್ದರಿಂದ ನಾವು ಆ 75 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಕೆಲವು ಷರತ್ತುಗಳಿಗೆ ಒಳಗಾಗಿ ಪಡೆಯಬೇಕಾಯಿತು. ಕೇಂದ್ರ ಸರ್ಕಾರದಿಂದ ನಾವು ಪಡೆದಂಥ ಹಣವನ್ನು 1983ನೇ ಮಾರ್ಚ್ ತಿಂಗಳೊಳಗಾಗಿ ವಾಪಸ್ಸು ಕೊಡಬೇಕಾಗಿತ್ತು. ಆದರೆ ನಾವು ಅಧಿಕಾರವನ್ನು ವಹಿಸಿಕೊಂಡಿದ್ದು ಜನವರಿ 10ನೇ ತಾರೀಖು. ಆದರೆ ನಾವು ಕೇಂದ್ರ ಸರ್ಕಾರದ ಹಣವನ್ನು ತೀರಿಸತಕ್ಕಂಥ ಪ್ರಸಂಗ ಬಂದಿದ್ದರಿಂದ ನಮ್ಮ ರಾಜ್ಯದ ಅಭಿವೃದ್ಧಿ ಯೋಜನೆಗಳ ಮೇಲೆ ಸ್ವಲ್ಪ ಮಟ್ಟಿಗೆ ಪರಿಣಾಮವನ್ನುಂಟು ಮಾಡಿತ್ತು. ಆದರೆ ನಾವು ಕಳೆದ ಸಾರಿ ಮಂಡಿಸಿದಂಥ ಬಜೆಟ್‌ನಲ್ಲಿ ಸುಮಾರು 45 ಕೋಟಿ ರೂಪಾಯಿಗಳಷ್ಟು ಖೋತ ಬಜೆಟ್ ಇತ್ತು. ಆದರೂ ಕೂಡ ಅದನ್ನು ಸರಿಮಾಡಿಕೊಂಡು ಸುಮಾರು 475 ಕೋಟಿ ರೂಪಾಯಿಗಳ ಬಜೆಟ್‌ನ್ನು ಈ ಸದನದಲ್ಲಿ ಮಂಡಿಸಿದ್ದೆವು. ನಮ್ಮ ರಾಜ್ಯದ ಅಭಿವೃದ್ಧಿ ಕೆಲಸಗಳಿಗೆ, ಮತ್ತು ಅಭಿವೃದ್ಧಿ ಯೋಜನೆಗಳಿಗೆ ಯಾವುದೇ ರೀತಿಯ ಕುಂದು ಬರದಂತೆ ನೋಡಿಕೊಳ್ಳುವುದಕ್ಕಾಗಿ ಬಜೆಟ್‌ನಲ್ಲಿ ಸುಮಾರು 100ಕೋಟಿ ರೂಪಾಯಿಗಳನ್ನು ಹೆಚ್ಚು ಮಾಡಿದೆವು. ರೈತರಿಗೆ ಸುಮಾರು 70–75ಕೋಟಿ ರೂಪಾಯಿಗಳಷ್ಟು ವಿವಿಧ ರೀತಿಯ ರಿಯಾಯಿತಿಗಳನ್ನು ಕೊಟ್ಟಿದ್ದರಿಂದ ಸರ್ಕಾರ ಹೆಚ್ಚಿನ ಹೊರೆಯನ್ನು ಹೊರಬೇಕಾಯಿತು. ಶಹರಗಳಲ್ಲಿ ವಾಸಮಾಡತಕ್ಕ ಸಾಮಾನ್ಯ ಜನರಿಗೆ ಸ್ವಲ್ಪಮಟ್ಟಿಗಾದರೂ ಸಹಾಯವಾಗಬೇಕು ಎನ್ನುವ ಉದ್ದೇಶದಿಂದ ಅಕ್ಕಿಯ ಮೇಲಿನ ಸಬ್ಸಿಡಿಯನ್ನು ಕೊಟ್ಟಿದ್ದರಿಂದ ಸುಮಾರು 28 ಕೋಟಿ ರೂಪಾಯಿಗಳು ಮತ್ತಷ್ಟು ಹೆಚ್ಚು ಭಾರ ಈ ಸರ್ಕಾರದ ಮೇಲೆ ಬಂತು. ದುರ್ದೈವದಿಂದ 1982 ಕೊನೆಯ ಭಾಗದಿಂದ 1983ರ ಜೂನ್‌ವರೆಗೆ ಅಭಾವ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಬಂತು. 19 ಜಿಲ್ಲೆಗಳ ಪೈಕಿ 16 ಜಿಲ್ಲೆಗಳಲ್ಲಿ ಅತ್ಯಂತ ತೀವ್ರವಾದ ರೀತಿಯಲ್ಲಿ ಬರಗಾಲ ಬಂತು. ಅದಕ್ಕಾಗಿ ನಾವು ಸುಮಾರು 80ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ಪರಿಸ್ಥಿತಿ ಬಂತು. ನಮ್ಮ ಯೋಜನಾಗಾತ್ರವನ್ನು ಹೆಚ್ಚು ಮಾಡುವ ಉದ್ದೇಶದಿಂದ ಮತ್ತು ಸಮಾಜದ ವಿವಿಧ ವರ್ಗಗಳಿಗೆ ಪರಿಹಾರವನ್ನು ಕೊಡುವ ಮತ್ತು ಸಬ್ಸಿಡಿ ಕೊಡತಕ್ಕ ಕಾರಣದಿಂದ ಅಭಾವ ಪರಿಸ್ಥಿತಿಯನ್ನು ಎದುರಿಸತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರಿಂದ ಸುಮಾರು 300 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣದ ಭಾರವನ್ನು ಹೊರತಕ್ಕ ಪ್ರಸಂಗ ಬಂತು. ಇದು ಆರ್ಥಿಕವಾಗಿ ಮತ್ತು ಆಡಳಿತ ದೃಷ್ಟಿಯಿಂದಲೂ ಕೂಡ ಸ್ವಲ್ಪ ಮಟ್ಟಿಗೆ ಕಷ್ಟವಾದ ಪರಿಸ್ಥಿತಿ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ನಮ್ಮ ರಾಜ್ಯದ ಸರ್ಕಾರಿ ಕರ್ಮಚಾರಿಗಳು ಸ್ವಭಾವತಃ ಒಳ್ಳೆಯವರು, ಪ್ರಾಮಾಣಿಕರು ಮತ್ತು ದಕ್ಷರು. ಬಹಳ ಕಾಲದಿಂದಲೂ ಇಂತಹ ಒಂದು ಪರಂಪರೆಯ ಆಡಳಿತ ಮೈಸೂರಿನಲ್ಲಿತ್ತು. ಹಳೆಯ ಮೈಸೂರಿನ ಆಡಳಿತ ಕೀರ್ತಿ, ದಕ್ಷತೆ, ಅದರ ಯೋಗ್ಯತೆ, ಅದರ ಗುಣ ಇಡೀ ದೇಶದಲ್ಲಿಯೇ ಹರಡಿತ್ತು. ನಮ್ಮ ರಾಜ್ಯ ಏಕೀಕರಣವಾದ ಮೇಲೆ ಬೇರೆ ಬೇರೆ ಭಾಗಗಳಿಂದ ಬಂದಂತಹ ಸರ್ಕಾರಿ ಸಿಬ್ಬಂದಿವರ್ಗದವರು, ಈ ಒಂದು ಗುಣಗಳಲ್ಲಿ ಯಾವುದೇ ರೀತಿಯಲ್ಲೂ ಕಡಿಮೆ ಇದ್ದವರು ಆಗಿರಲಿಲ್ಲ. ಕಳೆದ ಕೆಲವು ವರ್ಷಗಳಿಂದ ಆಡಳಿತವನ್ನು ರಾಜಕೀಯವಾಗಿ ಉಪಯೋಗಿಸತಕ್ಕ ಭ್ರಷ್ಟಾಚಾರಕ್ಕಾಗಿ ಉಪಯೋಗಿಸತಕ್ಕ ಒಂದು ಕೆಟ್ಟ ಪ್ರವೃತ್ತಿಯನ್ನು ಬೆಳೆಸಿಕೊಂಡು ಬಂದಿದ್ದರಿಂದ ಸ್ವಲ್ಪ ಮಟ್ಟಿಗೆ ಆಡಳಿತದ ಮೇಲೂ ದುಷ್ಪರಿಣಾಮ ಆಯಿತು. ಹೀಗೆ ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಆಡಳಿತ ದೃಷ್ಟಿಯಿಂದ ಕ್ಲಿಷ್ಟವಾದಂತಹ ಕಠಿಣವಾದಂತಹ ಪರಿಸ್ಥಿತಿ ಇದ್ದಾಗ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂತು. ಈ ಒಂದು ವರ್ಷದ ಅವಧಿಯಲ್ಲಿ ಈ ಸರ್ಕಾರ ಏನು ಮಾಡಿದೆ ಎಂದು ಹೇಳುವ ಬಗ್ಗೆ ಒಂದು ಸಂಕ್ಷಿಪ್ತವಾದಂತಹ ವರದಿಯನ್ನು ಈ ಸದನಕ್ಕೆ ಕೊಡತಕ್ಕದ್ದು ನನ್ನ ಕರ್ತವ್ಯ. ಈ ಸರ್ಕಾರ ಹುಟ್ಟಿದ ಲಾಗಾಯ್ತು, ಎರಡು ತಿಂಗಳುಗಳಿಂದ ನಾನ್ ಪರ್‌ಫಾರ್ಮೆನ್ಸ್ ಗೌರ್ನಮೆಂಟ್ ಎಂದು ಟೀಕೆ ಮಾಡುತ್ತಿದ್ದಾರೆ. This is the Government of non-performance ಎಂದು ಹೇಳುತ್ತಿದ್ದಾರೆ. ಹಾಗಾದರೆ ಈ ಸರ್ಕಾರ ಕೆಲಸ ಮಾಡಲಿಲ್ಲವೆ? ಅಥವಾ ಏನಾದರೂ ಚೂರುಪಾರು ಕೆಲಸ ಮಾಡಿದೆಯೋ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಪರ್‌ಫಾರ್ಮೆನ್ಸ್‌ನ್ನು ಅಳೆಯತಕ್ಕ ಎರಡು ಅಳತೆಗೋಲುಗಳಿವೆ. ಮೊದಲನೆಯದು ಅಂಕಿಸಂಖ್ಯೆಗಳ ಆಧಾರದ ಮೇಲೆ ಮತ್ತು ನಮ್ಮ ಸಾಧನೆಗಳ ಬಗ್ಗೆ ತಿಳಿಯುವುದು. ಅಂಕಿ ಸಂಖ್ಯೆಗಳನ್ನು ತಿಳಿಯುವುದು ಕೇವಲ ವೆಚ್ಚದ ದೃಷ್ಟಿಯಿಂದ ಅಷ್ಟೆ ಅಲ್ಲ, ಫಿಜಿಕಲ್ ಅಜೀವ್‌ಮೆಂಟ್ ದೃಷ್ಟಿಯಿಂದಲೂ ಕೂಡ ತಿಳಿಯಬೇಕಾಗುತ್ತದೆ. ಇನ್ನೊಂದು ಅಳತೆಗೋಲು ಸಾಮಾನ್ಯ ಜನರ ಅಭಿಪ್ರಾಯ ಸಾಮಾನ್ಯ ಜನರ ಅಭಿಪ್ರಾಯ ಅದು ತನ್ನಿಂದತಾನೇ ಮೂಡತಕ್ಕದ್ದಲ್ಲ. ಜನರು ನೋಡುತ್ತಾರೆ, ಕೇಳುತ್ತಾರೆ, ಅನುಭವಿಸುತ್ತಾರೆ. ಈ ಮೂಲದಿಂದ ಜನರ ಅಭಿಪ್ರಾಯ ಮೂಡುತ್ತದೆ. ಅದನ್ನು ಕೇವಲ ಪ್ರಚಾರದರಾಟೆಯಿಂದ ಮೂಡಿಸುತ್ತೇವೆಂದು ಹೇಳಿದರೆ ಅದು ಯಾವುದೂ ಸಾಧ್ಯವಾಗುವುದಿಲ್ಲ. ಸಾಮಾನ್ಯ ಜನತೆಯ ಅಭಿಪ್ರಾಯದ ಅಳತೆಗೋಲನ್ನು ಒಮ್ಮೆ ಉಪಯೋಗಿಸಿಕೊಂಡು ಸರ್ಕಾರದ ಬಗ್ಗೆ, ಅದರ ಸಾಧನೆಯ ಬಗ್ಗೆ ಅಳತೆ ಮಾಡುವುದಾದರೆ ಈಗ ಎರಡು ಮೂರು

ತಿಂಗಳ ಹಿಂದೆ ಒಂದು ರ್ಯಾಂಡಮ್ ಸರ್ವೆ ನಡೆಯಿತು, ಪಾರ್ಲಿಮೆಂಟರಿ ಅಸೋಸಿಯೇಷನ್‌ರವರು ಮಾಡಿದರು. ಶೇಕಡ 78ರಷ್ಟು ಜನರು ಈ ಸರ್ಕಾರ ಒಳ್ಳೆಯದು ಎಂದು ಹೇಳಿದ್ದಾರೆ. ಈ ಸರ್ಕಾರ ಒಳ್ಳೆಯ ಕೆಲಸ ಮಾಡುತ್ತಿದೆ ಎನ್ನತಕ್ಕ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಕಳೆದ ಜನವರೀ 10ನೇ ತಾರೀಖಿಗೆ ನಮ್ಮ ಸರ್ಕಾರ ಬಂದು ಒಂದು ವರ್ಷವಾಯಿತು. ನಮ್ಮ ದೇಶದ ಎಲ್ಲಾ ಪ್ರಮುಖ ಪತ್ರಿಕೆಗಳು, ರಾಷ್ಟ್ರೀಯ ಪತ್ರಿಕೆಗಳು ತಮ್ಮ ಸಂಪಾದಕೀಯ ಲೇಖನಗಳನ್ನು ಬರೆದಿದ್ದಾರೆ. ನಮ್ಮ ರಾಜ್ಯದ ಹೊರತಾಗಿ ಪೂರ್ವ ಭಾರತ, ಪಶ್ಚಿಮ ಭಾರತ, ಉತ್ತರ ಭಾರತ, ದಕ್ಷಿಣ ಭಾರತದ ಯಾವುದೇ ಪತ್ರಿಕೆಗಳನ್ನು ನೀವು ಓದಿ ನೋಡಿ, ಅದರಲ್ಲಿರತಕ್ಕ ಸಂಪಾದಕೀಯ ನಮ್ಮ ಸರ್ಕಾರದ ಒಂದು ವರ್ಷದ ಸಾಧನೆಯ ಬಗ್ಗೆ ಒಂದೂ ಅಪವಾದ ಇಲ್ಲದಂತೆ ಈ ಸರ್ಕಾರದ ಸಾಧನೆಯ ಬಗ್ಗೆ, ಸರ್ಕಾರದ ಯೋಗ್ಯತೆಯ ಬಗ್ಗೆ ಈ ಸರ್ಕಾರದ ಗುಣದ ಬಗ್ಗೆ ಒಳ್ಳೆಯ ಮಾತನ್ನು ಹೇಳಿದ್ದಾರೆಯೇ ಹೊರತು ಯಾವುದರಲ್ಲೂ ಕೂಡ ಕೆಟ್ಟ ಮಾತು ಬಂದಿಲ್ಲ. ಟೈಮ್ ಆಫ್ ಡೆಕ್ಕನ್ ಅದರಲ್ಲೂ ಕೂಡ ಈ ಸರ್ಕಾರದ ಬಗ್ಗೆ ಒಳ್ಳೆಯ ಸಂಪಾದಕೀಯ ಬರೆದಿದ್ದಾರೆ. ಒಂದು ವರ್ಷದಲ್ಲಿ ಈ ಸರ್ಕಾರ ಎಲ್ಲವನ್ನು ಮಾಡಿದೆಯೆಂದು ಹೇಳುವವನು ನಾನಲ್ಲ.

ನಮ್ಮ ನಿಲುವು ಈ ತರಹ ಇದ್ದರೆ ಮಾತ್ರ ನಮ್ಮ ಇತಿಮಿತಿಗಳ ಅರಿವು ನಮಗೆ ಆಗುತ್ತದೆ. ನಮ್ಮ ದೋಷದ ಬಗ್ಗೆ ಕಲ್ಪನೆ ಬರುತ್ತದೆ. ಅದು ಇಲ್ಲದೆ ಹಾಗೆ ಮಾಡಿದ್ದೇವೆ. ಹೀಗೆ ಮಾಡಿದ್ದೇವೆ ಎಂದು ಬೆನ್ನು ಚಪ್ಪರಿಸಿಕೊಳ್ಳತಕ್ಕ ವ್ಯಕ್ತಿ ನಾನಲ್ಲ. ಬೆನ್ನು ತಟ್ಟಿಕೊಳ್ಳತಕ್ಕಂಥ ಸ್ವಭಾವ ಇಲ್ಲಿ ಯಾರಿಗೂ ಇಲ್ಲ. ಅದಕ್ಕಾಗಿ ನಾನು ಕೆಲವು ಅಂಕಿ ಅಂಶಗಳನ್ನು ಮಾತ್ರ ಮಾನ್ಯ ಸಭೆಗೆ ಕೊಡುತ್ತೇನೆ. ಪ್ರತಿಯೊಂದು ಇಲಾಖೆಯ ಬಗ್ಗೆ, ಪ್ರತಿಯೊಂದು ದೊಡ್ಡ ದೊಡ್ಡ ಯೋಜನೆಗಳ ಬಗ್ಗೆ ಕಾರ್ಯಸಾಧನೆ ಕುರಿತಾದ ವಿವರವಾದಂಥ ಮಾಹಿತಿಯನ್ನು ನಾನು ಬಡ್ಜೆಟ್ ಮಂಡನೆ ಮಾಡತಕ್ಕಂಥ ಸಂದರ್ಭದಲ್ಲಿ ಈ ಸದನದ ಮುಂದೆ ಇಡುತ್ತೇನೆ. ಆಗ ಅತ್ಯಂತ ವಿಮರ್ಶಾತ್ಮಕ ದೃಷ್ಟಿಯಿಂದ ಮಾನ್ಯ ಸದಸ್ಯರು ಅದನ್ನು ನೋಡಬಹುದು. ಈಗ ನಾನು ಇಡತಕ್ಕ ಮಾಹಿತಿ ಕೇವಲ ಕೆಲವೇ ವಿಚಾರಗಳ ಬಗ್ಗೆ ಮಾತ್ರ. ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ನಮ್ಮ ಸರ್ಕಾರದ ಅತೀ ದೊಡ್ಡ ಅಭಿವೃದ್ಧಿ ಕೆಲಸಕ್ಕೆ ಸಂಬಂಧಪಟ್ಟಂತೆ ಎರಡು ಖಾತೆಗಳ ಬಗ್ಗೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವು ಯಾವುವೆಂದರೆ ಲೋಕೋಪಯೋಗಿ ಮತ್ತು ನೀರಾವರಿ ಹಾಗೂ ವಿದ್ಯುಚ್ಛಕ್ತಿ 1981-1982 ಮತ್ತು 1983 ಈ ಮೂರು ವರ್ಷಗಳ ಅಂಕಿಗಳನ್ನು ಇಲ್ಲಿ ಕೊಡಬಯಸುತ್ತೇನೆ. ನಾನು ಈ ಅಂಕಿಗಳನ್ನು ಕೊಡುವಾಗಅದು ಆಯಾ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟಿದ್ದು ಅಲ್ಲ. ಆರ್ಥಿಕ ವರ್ಷ ಏಪ್ರಿಲ್ ತಿಂಗಳಿನಿಂದ ಮಾರ್ಚ್ ಕೊನೆಯವರೆಗೆ ಆಗುತ್ತದೆ. ನಾವು ಅಧಿಕಾರಕ್ಕೆ ಬಂದಿದ್ದು ಜನವರಿ ತಿಂಗಳಿನಲ್ಲಿ. ಆದ್ದರಿಂದ ಜನವರಿಯಿಂದ ಡಿಸೆಂಬರ್‌ವರೆಗೆ ಒಂದು ವರ್ಷ ಪೂರೈಸಿದಂತೆ ನಾನು ಕೊಡತಕ್ಕಂಥ ಅಂಕಿ ಅಂಶಗಳು ಜನವರಿಯಿಂದ ಡಿಸೆಂಬರ್ ತಿಂಗಳವರೆಗೆ ಸಂಬಂಧಪಟ್ಟಿದ್ದಾಗಿರುತ್ತದೆ. 1981ನೇ ಇಸವಿಯದ್ದು ಎಷ್ಟು, 1982ನೇ ಇಸವಿಯದ್ದು ಎಷ್ಟು ಮತ್ತು 1983ನೇ ಇಸವಿಯದ್ದು ಎಷ್ಟು ಸಾಧನೆ ಎಂಬುದನ್ನು ಈ ಅಂಕಿಗಳು ಸೂಚಿಸುತ್ತವೆ. ಮೊದಲಿಗೆ ಕನ್‌ಸ್ಟ್ರಕ್ಷನ್ ಮತ್ತು ಬಿಲ್ಡಿಂಗ್ಸ್ ಪ್ಲಾನ್‌ನಲ್ಲಿ 1981ನೇ ಇಸವಿಯಲ್ಲಿ 14ಕೋಟಿ 76ಲಕ್ಷ, 1982ನೇ ಇಸವಿಯಲ್ಲಿ 15ಕೋಟಿ, 1983ನೇ ಇಸವಿಯಲ್ಲಿ 18ಕೋಟಿ 90ಲಕ್ಷ. ನಾನ್ ಪ್ಲಾನ್‌ನಲ್ಲಿ 1981ರಲ್ಲಿ 19 ಕೋಟಿ 80ಲಕ್ಷ (ಇಪ್ಪತ್ತು ಕೋಟಿ ಅಂತ ಇಟ್ಟುಕೊಳ್ಳಿ) 1982ನೇ ಇಸವಿಯಲ್ಲಿ 22ಕೋಟಿ ಮತ್ತು 1983ನೇ ಇಸವಿಯಲ್ಲಿ 25ಕೋಟಿ, ಬಿಲ್ಡಿಂಗ್‌ನಲ್ಲಿ, ಪ್ಲಾನ್‌ನಲ್ಲಿ 1981ನೇ ಇಸವಿಯಲ್ಲಿ 6 ಕೋಟಿ 72ಲಕ್ಷ. 1982ನೇ ಇಸವಿಯಲ್ಲಿ 9ಕೋಟಿ, 1983ನೇ ಇಸವಿಯಲ್ಲಿ 12 ಕೋಟಿ 23ಲಕ್ಷ. ಬಿಲ್ಡಿಂಗ್ ನಾನ್ ಪ್ಲಾನ್‌ನಲ್ಲಿ 1981ನೇ ಇಸವಿಯಲ್ಲಿ 15.5ಕೋಟಿ, 1982ನೇ ಇಸವಿಯಲ್ಲಿ 18ಕೋಟಿ, 1983ನೇ ಇಸವಿಯಲ್ಲಿ 22.5ಕೋಟಿ. ನಾನು ಈಗ ಹೇಳಿರತಕ್ಕಂಥಾದ್ದು ಖರ್ಚು ಆದದ್ದು. ಆಮೇಲೆ ಫಾರ್ಮೇಶನ್ ಆಫ್ ರೋಡ್ಸ್ 1981ನೇ ಇಸವಿಯಲ್ಲಿ 485ಕಿಲೋ ಮೀಟರ್, 1982ರಲ್ಲಿ 356. ಕಿಲೋಮೀಟರ್, 1983ನೇ ಇಸವಿಯಲ್ಲಿ 467 ಕಿಲೋಮೀಟರ್ ಮಿನಿಮಮ್ ನೀಡ್ಸ್ ಪ್ರೋಗ್ರಾಂ ಹಳ್ಳಿಗಳಿಗೆ ರಸ್ತೆ ಮಾಡಿಸುವುದು. 1981ರಲ್ಲಿ 54ರಸ್ತೆಗಳು, 1982ರಲ್ಲಿ 43 ರಸ್ತೆಗಳು ಮತ್ತು 1983ರಲ್ಲಿ 72ರಸ್ತೆಗಳು. ಆ ಮೇಲೆ ದೊಡ್ಡ ದೊಡ್ಡ ಕಟ್ಟಡಗಳು. 1981ರಲ್ಲಿ 41 ದೊಡ್ಡ ಕಟ್ಟಡಗಳು, 1982ರಲ್ಲಿ 52 ಮತ್ತು 1983ರಲ್ಲಿ 71 ಕಟ್ಟಡಗಳು. ಹೊಸದಾಗಿ ನಾವು ಬಡ್ಜೆಟ್ಟಿನಲ್ಲಿ ಸೇರಿಸಿಕೊಂಡಂಥ ಕೆಲಸ. 1881ರಲ್ಲಿ 32 ಹೊಸ ರಸ್ತೆಗಳು, 1982ರಲ್ಲಿ 483 ರಸ್ತೆಗಳು, ಮತ್ತು 1983ರಲ್ಲಿ 774 ಹೊಸ ರಸ್ತೆಗಳು. ಸೇತುವೆಗಳು 1981ರಲ್ಲಿ 16. 1982ನೇ ಇಸವಿಯಲ್ಲಿ 178 ಮತ್ತು 1983ರಲ್ಲಿ 255. ಪೂರನೆಯದು ಕಟ್ಟಡಗಳು 1981ರಲ್ಲಿ 166, 1982ರಲ್ಲಿ 204 ಮತ್ತು 1983ನೇ ಇಸವಿಯಲ್ಲಿ 224. ನೀರಾವರಿ ಮೇಜರ್ ಮತ್ತು ಮೈನರ್ 1981ರಲ್ಲಿ ಎರಡಕ್ಕೂ ಸೇರಿ 116ಕೋಟಿ, 1982ರಲ್ಲಿ 121 ಕೋಟಿ ಮತ್ತು 1983ರಲ್ಲಿ 130ಕೋಟಿ. ಇದು ಫೈನಾನ್ಸಿಯಲ್ ಎಕ್ಸ್‌ಪೆಂಡಿಚರ್ ಆದದ್ದು. ನೀರಾವರಿ ಪೊಟೆನ್‌ಶಿಯಲ್ ಎಷ್ಟು ಪ್ರದೇಶ ಭೂಮಿಗೆ ನೀರಾವರಿ ಸೌಕರ್ಯ ಒದಗಿಸಿರುವುದು ಅಂದರೆ

1981ರಲ್ಲಿ ಫಿಸಿಕಲ್ ಅಚೀವ್‌ಮೆಂಟ್ 41, 240 ಹೆಕ್ಟೇರ್‌ಗಳು, 1982ರಲ್ಲಿ 43,100 ಹೆಕ್ಟೇರ್‌ಗಳು 1983ರಲ್ಲಿ 70,470 ಹೆಕ್ಟೇರ್‌ಗಳು. ಎಲೆಕ್ಟ್ರಿಫಿಕೇಶನ್ ಹಳ್ಳಿಗಳಿಗೆ 1981ರಲ್ಲಿ 127 ಲಕ್ಷ ಖರ್ಚು ಮಾಡಿ 1,100 ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಪೂರೈಕೆ ಆಗಿದೆ. 1982ರಲ್ಲಿ 141 ಲಕ್ಷ ಖರ್ಚು ಮಾಡಿ 1,200 ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಪೂರೈಕೆಯಾಗಿದೆ. 1883ರಲ್ಲಿ 140ಲಕ್ಷ ಖರ್ಚು ಮಾಡಿ 1,400 ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಪೂರೈಕೆಯಾಗಿದೆ. ಪಂಪುಸೆಟ್ಟುಗಳು 1981ರಲ್ಲಿ 12 ಕೋಟಿ ಖರ್ಚು ಮಾಡಿ 21ಸಾವಿರ ಹೊಸ ಪಂಪುಸೆಟ್ಟುಗಳನ್ನು ಒದಗಿಸಲಾಗಿದೆ. 1982ರಲ್ಲಿ 17ಕೋಟಿ ಖರ್ಚುಮಾಡಿ 24 ಸಾವಿರ ಪಂಪುಸೆಟ್ಟುಗಳು, 1983ರಲ್ಲಿ 30.5 ಸಾವಿರ ಪಂಪುಸೆಟ್ಟುಗಳಿಗೆ 19ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಎಲೆಕ್ಟ್ರಿಫಿಕೇಶನ್ ಆಫ್ ಹರಿಜನ ಬಸ್ತಿ 1981ನೇ ಇಸವಿಯಲ್ಲಿ 211, 1982ರಲ್ಲಿ 227, 1983ನೇ ಇಸವಿಯಲ್ಲಿ 400. ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣ ಪರಿಶಿಷ್ಟವರ್ಗದವರಿಗೆ — ಸ್ಪೆಶಲ್ ಕಾಂಪೋನೆಂಟ್ ಸ್ಕೀಮ್‌ನಲ್ಲಿ 1981ನೇ ಇಸವಿಯಲ್ಲಿ ಒಂದೂ ಇಲ್ಲ. 1982ರಲ್ಲೂ ಕೂಡ ಒಂದೂ ಇಲ್ಲ. 1983ರಲ್ಲಿ 213. ಟ್ರೈಬಲ್ ಕಾಲೋನೀಸ್ —ಸ್ಪೇಶಲ್ ಕಾಂಪೋನೆಂಟ್ ಪ್ಲಾನ್‌ನಲ್ಲಿ 1981ರಲ್ಲಿ 14, 1982ರಲ್ಲಿ 26, 1983ರಲ್ಲಿ 28. ಇದು ನಾನ್ ಪರ್ ಫಾರ್ಮಿಂಗ್ ಗವರ್ನಮೆಂಟಾ? ಆಮೇಲೆ ಪವರ್ ಜನರೇಶನ್ 1981ನೇ ಇಸವಿಯಲ್ಲಿ 78.5ಕೋಟಿ ಖರ್ಚು ಮಾಡಿದ್ದರೆ 1982ನೇ ಇಸವಿಯಲ್ಲಿ 96ಕೋಟಿ ಮತ್ತು 1983ರಲ್ಲಿ 109 ಕೋಟಿ ರೂಪಾಯಿ ಖರ್ಚಾಗಿದೆ.

ಆಮೇಲೆ 1983ನೇ ಇಸವಿಯಲ್ಲಿ 109 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ.

ಶ್ರೀ ವಿ. ಎಸ್. ಆಚಾರ್.— ಎಷ್ಟು ಕೆಲಸವಾಗಿದೆ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಸೂಪಾ ಕಾಂಕ್ರಿಟೈಸೇಷನ್ ಬಗ್ಗೆ ಹೇಳುವುದಾದರೆ 1981ನೇ ಇಸವಿಯಲ್ಲಿ 1.5 ಲಕ್ಷ ಕ್ಯುಬಿಕ್ ಮೀಟರ್ ಅಷ್ಟು ಕೆಲಸವಾಗಿದೆ, 1982ನೇ ಇಸವಿಯಲ್ಲೂ ಕೂಡ 1.5 ಲಕ್ಷ ಕ್ಯೂಬಿಕ್ ಮೀಟರ್ ಅಷ್ಟು ಕೆಲಸವಾಗಿದೆ. 1983ನೇ ಇಸವಿಯಲ್ಲಿ 1 ಲಕ್ಷ 90 ಸಾವಿರ, ಹತ್ತಿರ ಹತ್ತಿರ 2 ಲಕ್ಷದವರೆಗೆ ಕೆಲಸವಾಗಿದೆ. ಇನ್ನೂ ಇದರ ಬಗ್ಗೆ ವಿವರಣೆ ಬೇಕು ಎಂದರೆ ಈ ಪುಸ್ತಕದಲ್ಲಿ ಸಿಕ್ಕುತ್ತದೆ, ನಾನು ಹೆಚ್ಚು ಡೀಟೈಲ್ಸ್‌ಗೆ ಹೋಗಬೇಕಾದ್ದಿಲ್ಲ.

ಇನ್ನು ಹಳ್ಳಿಗಳಿಗೆ ನೇರವಾಗಿ ಸಂಬಂಧಪಟ್ಟಂತೆ ಹೇಳಬೇಕಾದರೆ, ರೂರಲ್ ಡೆವಲಪ್‌ಮೆಂಟ್ ಮತ್ತು ಕೋ ಆಪರೇಷನ್ ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳೋಣ. ಇದು ಹಳ್ಳಿಗಳಿಗೆ ಸಂಬಂಧ ಪಟ್ಟದ್ದು. ನಾನು ಈ ಬಗ್ಗೆ ಅಂಕಿ ಸಂಖ್ಯೆಗಳನ್ನು ಓದುತ್ತೇನೆ ಎಂದು ದಯವಿಟ್ಟು ಯಾರೂ ಕೂಡ ಬೇಸರಪಟ್ಟುಕೊಳ್ಳಬೇಡಿ ಎಂದು ಹೇಳುತ್ತೇನೆ. ನಮ್ಮ ಸರ್ಕಾರದ ನಾನ್ ಪರ್‌ಫಾರ್‌ಮೆನ್ಸ್ ಬಗ್ಗೆ ಹಗಲೂ ರಾತ್ರಿ ಪ್ರಚಾರ ಆದದ್ದೇ ಆದದ್ದು. ಇದರ ಬಗ್ಗೆ ಎಷ್ಟು ಪರ್‌ಫಾರ್‌ಮೆನ್ಸ್ ಆಗಿದೆ ಎನ್ನುವುದನ್ನು ನೋಡೋಣ. ಇದು ಹೋದಸಾರಿಗಿಂತ ಕಡಿಮೆ ಆಗಿದೆಯೋ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚಾಗಿ ಆಗಿದೆಯೋ ನೋಡೋಣ.

ಶ್ರೀ ಎನ್. ಚಿಕ್ಕೇಗೌಡ.— ಹೋದ ವರ್ಷದ ಅಂಕಿಸಂಖ್ಯೆಗಳು ಪತ್ರಿಕೆಗಳಲ್ಲಿ ಬಂದಿವೆಯಲ್ಲಾ.

ಶ್ರೀ ರಾಮಕೃಷ್ಣ ಹೆಗಡೆ.— ಹೋದ ವರ್ಷದ್ದು ತಾವು ಅಂಕಿಸಂಖ್ಯೆ ಕೊಟ್ಟರೆ ಹೋದ ವರ್ಷದ ಪರ್‌ಫಾರ್‌ಮೆನ್ಸನ್ನೂ ಜೊತೆಗೆ ಈ ವರ್ಷದ್ದು ಪರ್‌ಫಾರ್‌ಮೆನ್ಸನ್ನೂ ಕೂಡ ಕಂಪೇರ್ ಮಾಡಿ ನೋಡೋಣ.

ಶ್ರೀ ವಿ. ಧನಂಜಯ ಕುಮಾರ್.— ಸ್ವಾಮಿ, ಈ ಸರ್ಕಾರದ ಬಗ್ಗೆ ನಾನ್‌ಪರ್‌ಫಾರ್‌ಮೆನ್ಸ್ ಬಗ್ಗೆ ಹಗಲೂ ರಾತ್ರಿ ಪ್ರಚಾರ ಆದದ್ದೇ ಆದದ್ದು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರಲ್ಲಾ, ಆ ಪ್ರಚಾರಕ್ಕೆ ಎಷ್ಟು ಖರ್ಚಾಯಿತು ಅನ್ನುವುದರ ಬಗ್ಗೆ ಲೆಕ್ಕ ಕೊಡಬೇಕಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಈಗ ನಾವು ಗ್ರಾಮೀಣ ಪ್ರದೇಶಗಳಲ್ಲಿ ಕೈಗೊಂಡಂಥಾ ಕೆಲವು ವಿಚಾರಗಳ ಬಗ್ಗೆ ಮಾತ್ರ ಹೇಳುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಬಯೋಗ್ಯಾಸ್ ಬಗ್ಗೆ ಹೇಳುತ್ತೇನೆ. 1981ನೇ ಇಸವಿಯಲ್ಲಿ 6 ಲಕ್ಷ ಖರ್ಚು ಮಾಡಿ, 763 ಬಯೋಗ್ಯಾಸ್, 1982ನೇ ಇಸವಿಯಲ್ಲಿ 27 ಲಕ್ಷ ಖರ್ಚು ಮಾಡಿ 1300 ಬಯೋಗ್ಯಾಸ್, 1983ನೇ ಇಸವಿಯಲ್ಲಿ 26.5 ಲಕ್ಷ ಖರ್ಚು ಮಾಡಿ 5942 ಬಯೋಗ್ಯಾಸ್ ಕೆಲಸ ಆಗಿದೆ.

ಇನ್ನು ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಬಗ್ಗೆ ಹೇಳುವುದಾದರೆ 1981ನೇ ಇಸವಿಯಲ್ಲಿ 3 ಕೋಟಿ ರೂಪಾಯಿ ಖರ್ಚಾಗಿದೆ, 1982ನೇ ಇಸವಿಯಲ್ಲೂ ಸಹ ಮೂರು ಕೋಟಿ ರೂಪಾಯಿ ಖರ್ಚಾಗಿದೆ, 1983ನೇ ಇಸವಿಯಲ್ಲಿ 4 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ.

ಇನ್ನು ವಾಟರ್ ಸಪ್ಲೈ ಬಗ್ಗೆ ಹೇಳುವುದಾದರೆ, 1981ನೇ ಇಸವಿಯಲ್ಲಿ 12 ಕೋಟಿ ರೂಪಾಯಿ ಖರ್ಚು ಮಾಡಿ 7,800 ಬೋರ್‌ವೆಲ್ ಆಗಿದೆ, 1982ನೇ ಇಸವಿಯಲ್ಲಿ 16 ಕೋಟಿ ರೂಪಾಯಿ ಖರ್ಚು ಮಾಡಿ 8,900 ಬೋರ್‌ವೆಲ್ ಆಗಿದೆ, 1983ನೇ ಇಸವಿಯಲ್ಲಿ 28 ಕೋಟಿ ರೂಪಾಯಿ ಖರ್ಚು ಮಾಡಿ 16,600 ಕೊಳವೆ ಬಾವಿಗಳು ಆಗಿವೆ. ಇನ್ನು ಪೈಪ್‌ವಾಟರ್ ಸಪ್ಲೈ ಕೆಲಸ ಮುಗಿಸಿರತಕ್ಕಂಥಾದ್ದು

1981ನೇ ಇಸವಿಯಲ್ಲಿ 4 ಕೋಟಿ ರೂಪಾಯಿ ಖರ್ಚುಮಾಡಿ 165 ಹಳ್ಳಿಗಳಿಗೆ ಕೊಟ್ಟಿದ್ದೇವೆ. 1982ನೇ ಇಸವಿಯಲ್ಲಿ 7.5 ಕೋಟಿ ರೂಪಾಯಿ ಖರ್ಚುಮಾಡಿ 259 ಹಳ್ಳಿಗಳಿಗೆ ಕೊಟ್ಟಿದ್ದೇವೆ, 1983ನೇ ಇಸವಿಯಲ್ಲಿ ಇಲ್ಲಿಯವರೆಗೆ ಖರ್ಚು ಆದದ್ದು, ಇನ್ನೂ ಕೂಡ ಬಿಲ್ ಬರುತ್ತಾ ಇದೆ, ಇನ್ನೂ ಪೂರ್ತಾ ಪೇಮೆಂಟ್ ಮಾಡಿಲ್ಲಾ, ನವೆಂಬರ್ ತಿಂಗಳಿನವರೆಗೆ 7 ಕೋಟಿ ರೂಪಾಯಿ ಖರ್ಚು ಮಾಡಿ 291 ಹಳ್ಳಿಗಳಿಗೆ ಕೊಟ್ಟಿದ್ದೇವೆ.

ಇನ್ನು ಸರಕಾರೀ ಇಲಾಖೆಯಲ್ಲಿ ವ್ಯವಸಾಯಗಾರರಿಗೆ ಕೊಟ್ಟಂಥ ಸಾಲಗಳ ಬಗ್ಗೆ ಹೇಳಬೇಕಾದರೆ ಅದರಲ್ಲಿ ನಾವು ಹರಿಜನ ಗಿರಿಜನರಿಗೆ ಕೊಟ್ಟಂಥಾ ಸಾಲಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಷಾರ್ಟ್‌ಟರ್ಮ್ ಲೋನ್ ಮುಖಾಂತರ ಕೊಟ್ಟದ್ದು ಹೇಳುತ್ತೇನೆ. 1981ನೇ ಇಸವಿಯಲ್ಲಿ 65 ಕೋಟಿ ರೂಪಾಯಿ, ಅದರಲ್ಲಿ ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್‌ಗೆ ಅದೂ ಹರಿಜನರಿಗೆ ಕೊಟ್ಟಿರತಕ್ಕಂಥಾದ್ದು 11ಕೋಟಿ ರೂಪಾಯಿಗಳು. 1982ನೇ ಇಸವಿಯಲ್ಲಿ 12ಕೋಟಿ ರೂಪಾಯಿ, ಇದರಲ್ಲಿ ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್‌ಗೆ ಅದರಲ್ಲೂ ಹರಿಜನ ಗಿರಿಜನರಿಗೆ 8 ಕೋಟಿ ರೂಪಾಯಿ ಕೊಟ್ಟಿದೆ. 1983ನೇ ಇಸವಿಯಲ್ಲಿ ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್‌ಗೆ, 31 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಅದರಲ್ಲಿ ಹರಿಜನ ಗಿರಿಜನರಿಗೆ 20 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಮತ್ತೆ ಹೇಳಬೇಕಾದರೆ 1982ನೇ ಇಸವಿಯಲ್ಲಿ 8 ಕೋಟಿ 90 ಲಕ್ಷ ಕೊಟ್ಟಿದೆ, 1983ನೇ ಇಸವಿಯಲ್ಲಿ 20 ಕೋಟಿ ರೂಪಾಯಿ ಕೊಟ್ಟಿದೆ.

ಇನ್ನು ಎರಡನೆಯದಾಗಿ ಮೀಡಿಯಂ ಟರ್ಮ್ ಲೋನ್ಸ್ ಬಗ್ಗೆ ಹೇಳುತ್ತೇನೆ. 1982ನೇ ಇಸವಿಯಲ್ಲಿ ಹರಿಜನರಿಗೆ 71 ಲಕ್ಷ ಕೊಟ್ಟಿದೆ. 1983ನೇ ಇಸವಿಯಲ್ಲಿ 1.5 ಕೋಟಿ ರೂಪಾಯಿ ಕೊಟ್ಟಿದೆ.

ಇನ್ನು ಲಾಂಗ್ ಟರ್ಮ್ ಲೋನ್ಸ್ ಬಗ್ಗೆ ಹೇಳುವುದಾದರೆ 1981ನೇ ಇಸವಿಯಲ್ಲಿ ಕೇವಲ 36 ಲಕ್ಷ ಕೊಟ್ಟಿದೆ, 1983ನೇ ಇಸವಿಯಲ್ಲಿ 1.5 ಕೋಟಿ ರೂಪಾಯಿ ಕೊಟ್ಟಿದೆ.

ಇನ್ನು ರೈತರಿಗೆ ರಿಯಾಯಿತಿ ಕೊಟ್ಟಿರುವ ಬಗ್ಗೆ ಹೇಳಬೇಕಾದರೆ 1980–81ನೇ ಇಸವಿಯಲ್ಲಿ ಒಟ್ಟು ವ್ಯವಸಾಯಗಾರರಿಗೆ ಸರ್ಕಾರ ಕನ್‌ಸೆಷನ್ ಕೊಟ್ಟಿರುವುದರ ಸಂಖ್ಯೆ 12 ಸಾವಿರ ಇದ್ದರೆ, 1982ನೇ ಇಸವಿಯಲ್ಲಿ ಏನೂ ಇಲ್ಲ. 1983ನೇ ಇಸವಿಯಲ್ಲಿ 10 ಲಕ್ಷ ರೈತರಿಗೆ ಈ ಒಂದು ರಿಯಾಯಿತಿ ಸಿಕ್ಕಿದೆ. ಈ ವ್ಯವಸಾಯಗಾರರಿಗೆ ನಾವು ಕೊಟ್ಟಂಥಾ ಸೋಡಿ ಬಗ್ಗೆ ಹೇಳುವುದಾದರೆ 1981ನೇ ಇಸವಿಯಲ್ಲಿ ರಿಕವರಿ 53 ಪರ್ಸೆಂಟ್ ಇದ್ದರೆ 1983ನೇ ಇಸವಿಯಲ್ಲಿ ಶೇಕಡಾ 59 ಪರ್ಸೆಂಟ್ ಆಗುತ್ತದೆ. ಅಲ್ಲಿಗೆ ರಿಕವರಿ ಶೇಕಡಾ 74ರಷ್ಟು ಆಗಿದೆ.

ಇನ್ನು ಕೈಗಾರಿಕಾ ಇಲಾಖೆಯ ವಿಚಾರದ ಬಗ್ಗೆ ಹೇಳುತ್ತೇನೆ. ಈ ಹೊಸ ಕೈಗಾರಿಕೆಯ ಬಗ್ಗೆ ನಾವು ಒಂದು ನೀತಿಯನ್ನು ಕೈಗೊಂಡ ಮೇಲೆ ಏನಾಗಿದೆ ಅನ್ನುವುದರ ಬಗ್ಗೆ ಮಾನ್ಯ ಸದಸ್ಯರು ತಿಳಿದುಕೊಳ್ಳುವುದಕ್ಕೆ ಇಚ್ಛೆ ಇದೆ ಎಂದು ನಾನು ಭಾವಿಸುತ್ತೇನೆ. 1981ನೇ ಇಸವಿಯಲ್ಲಿ ಸಣ್ಣ ಉದ್ದಿಮೆಗಳು 3300 ರಿಜಿಸ್ಟರ್ ಆಗಿದ್ದರೆ 1982ನೇ ಇಸವಿಯಲ್ಲಿ 6 ಸಾವಿರ. 1983ನೇ ಇಸವಿಯಲ್ಲಿ ನವಂಬರ್‌ವರೆಗೆ ಸುಮಾರು 11 ಸಾವಿರ ಸಣ್ಣ ಉದ್ದಿಮೆಗಳು ರಿಜಿಸ್ಟರ್ ಆಗಿವೆ ಅನ್ನುವ ಮಾತನ್ನು ಹೇಳಬಯಸುತ್ತೇನೆ.

ಇನ್ನು ಸ್ಟೇಟ್ ಸಬ್ಸಿಡಿ ಕೊಟ್ಟಿರುವ ಬಗ್ಗೆ ಹೇಳಬೇಕಾದರೆ 1981ನೇ ಇಸವಿಯಲ್ಲಿ 1 ಕೋಟಿ 25 ಲಕ್ಷ ಕೊಟ್ಟಿದ್ದರೆ, 1982ನೇ ಇಸವಿಯಲ್ಲಿ 1 ಕೋಟಿ 82 ಲಕ್ಷ 1983ನೇ ಇಸವಿಯಲ್ಲಿ 2 ಕೋಟಿ 46 ಲಕ್ಷ ಕೊಟ್ಟಿದ್ದೇವೆ. ಅಲ್ಲಿಗೆ ಹತ್ತಿರ ಹತ್ತಿರ ಎರಡೂವರೆ ಕೋಟಿ ಸ್ಟೇಟ್ ಸಬ್ಸಿಡಿ ಕೊಟ್ಟಹಾಗಾಯಿತು.

ಇನ್ನು ಕರ್ನಾಟಕ ಫೈನಾನ್ಸ್ ಕಾರ್ಪೊರೇಷನ್‌ನ ಸಂಸ್ಥೆಯಿಂದ ಹೊಸ ಉದ್ಯಮಗಳಿಗೆ 1982ನೇ ಇಸವಿಯಲ್ಲಿ 43 ಕೋಟಿ ರೂಪಾಯಿಗಳು ಸಿಕ್ಕಿದ್ದರೆ, 1983ನೇ ಇಸವಿಯಲ್ಲಿ 45 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಸ್ಮಾಲ್ ಇಂಡಸ್ಟ್ರೀಸ್ ಲೋನ್ ಸ್ಯಾಂಕ್ಷನ್ ಮಾಡಿರುವುದು	1982ನೇ	ಇಸವಿಯಲ್ಲಿ	30ಕೋಟಿ	ರೂ.ಗಳು
	1983ನೇ	"	33ಕೋಟಿ	"
ಬ್ಯಾಕ್‌ವರ್ಡ್ ಏರಿಯಾಸ್ ಲೋನ್ ಸ್ಯಾಂಕ್ಷನ್ಡ್—	1982ನೇ	"	18ಕೋಟಿ	"
ಮಾಡಿರುವುದು.	1983ನೇ	"	21ಕೋಟಿ	"
ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ —	1981ನೇ	"	390.	
ಫ್ರೀ ಮೆಟ್ರಿಕ್ ಹಾಸ್ಟೆಲ್ಸ್—	1982ನೇ	"	401.	
	1983ನೇ	"	564.	
ನಂಬರ್ ಆಫ್ ಗ್ರ್ಯಾಂಟ್ ಇನ್ ಏಡ್ ಹಾಸ್ಟೆಲ್ಸ್ —	1981ನೇ	"	165.	
	1982ನೇ	"	167.	
	1983ನೇ	"	189.	
Number of students benefitted —	1981ನೇ	"	37 ಸಾವಿರ	
	1982ನೇ	"	34 "	

	1983ನೇ	,,	44 ,,
New Hostels —	1981ನೇ	,,	ಏನೂ ಇಲ್ಲ.
	1982ನೇ	,,	11
	1983ನೇ	,,	163
P. G. Centre —	1981ನೇ	,,	1
	1982ನೇ	,,	1
	1983ನೇ	,,	3
Number of students benefitted under Award Merit Scholarship —	1981ನೇ	,,	21 ಸಾವಿರ
	1982ನೇ	,,	20 ಸಾವಿರ
	1983ನೇ	,,	35 ಸಾವಿರದ 400
Residential Ashram School —	1981ನೇ	,,	77
	1982ನೇ	,,	112
	1983ನೇ	,,	122
ಹೊಲಿಗೆ ಯಂತ್ರಗಳ ಸರಬರಾಜು —	1981ನೇ	,,	895
	1982ನೇ	,,	ಏನೂ ಇಲ್ಲ.
	1983ನೇ	,,	1,969
Scheduled Caste, Scheduled Tribe— Development Corporation Loan Sanctioned	1981ನೇ	,,	80 ಲಕ್ಷ
	1982ನೇ	,,	1 ಕೋಟಿ 67 ಲಕ್ಷ
	1983ನೇ	,,	3 ಕೋಟಿ 81 ಲಕ್ಷ
Number of Family benefitted —	1981ನೇ	,,	4 ಸಾವಿರದ 78
	1982ನೇ	,,	7 ಸಾವಿರದ 800
	1983ನೇ	,,	14 ಸಾವಿರದ 267

ಈ ಇಲಾಖೆಯಲ್ಲಿ ಹೊಸದಾಗಿ ಕೆಲವು ನಿರ್ಣಯಗಳನ್ನು ನಾವು ತೆಗೆದುಕೊಂಡಿದ್ದೇವೆ. Two new schemes namely, supply of dress and books to the scheduled caste students other than hostels and amenities to boarders in private hostels have been sanctioned....

ಇದು ಹೊಸ ಎರಡು ಯೋಜನೆಗಳು. ಇದು 18 ಲಕ್ಷ ಖರ್ಚಿನಿಂದ ಕೂಡಿದ್ದಾಗಿದೆ. ಇದರಿಂದ ಸುಮಾರು ಹತ್ತು ಸಾವಿರ ಮಕ್ಕಳಿಗೆ ಅನುಕೂಲವಾಗುತ್ತದೆ. ಇನ್ನು ಹೈಸ್ಕೂಲು ವಿದ್ಯಾರ್ಥಿಗಳಿಗೆ 75 ರಿಂದ 100 ರೂಪಾಯಿಗಳವರೆಗೆ ಹೆಚ್ಚು ಮಾಡಿದ್ದೇವೆ. ಆಶ್ರಮ ಮತ್ತು ರೆಸಿಡೆನ್ಸಿಯಲ್ ಸ್ಕೂಲಿನಲ್ಲಿ ಇರತಕ್ಕಂಥ ವಿದ್ಯಾರ್ಥಿಗಳಿಗೆ 45 ರೂಪಾಯಿಗಳಿಂದ 65 ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ. ಹೆಣ್ಣು ಮಕ್ಕಳಿಗಾಗಿ ಹೊಸದಾಗಿ 14 ಹಾಸ್ಟೆಲ್‌ಗಳನ್ನು ಸರ್ಕಾರ ಮಂಜೂರಾತಿ ಮಾಡಿದೆ.

Scholarship and financial assistance to physically handicapped. 1982ನೇ ಇಸವಿಯಲ್ಲಿ 1 ಲಕ್ಷ 87 ಸಾವಿರ ರೂಪಾಯಿಗಳು 1983ನೇ ಇಸವಿಯಲ್ಲಿ 4 ಲಕ್ಷ 50 ಸಾವಿರ ರೂಪಾಯಿಗಳು

Pre School children feeding Programme. 1981ನೇ ಇಸವಿಯಲ್ಲಿ 114 ಲಕ್ಷ ಖರ್ಚ ಮಾಡಿದ್ದರೆ 1982ನೇ ಇಸವಿಯಲ್ಲಿ ಕೇವಲ 55ಲಕ್ಷವನ್ನು ಖರ್ಚ ಮಾಡಿದ್ದಾರೆ, 1983ರಲ್ಲಿ 1 ಕೋಟಿ 15 ಲಕ್ಷ ಖರ್ಚು ಆಗಿದೆ. Centrally sponsored scheme— Integrated Child Development Service 1981ರಲ್ಲಿ 31 ಲಕ್ಷ ರೂಪಾಯಿಗಳು, 1982ರಲ್ಲಿ 25 ಲಕ್ಷ 73 ಸಾವಿರ ರೂಪಾಯಿಗಳು, 1983ರಲ್ಲಿ 1 ಕೋಟಿ 10 ಲಕ್ಷ ರೂಪಾಯಿಗಳು. Integrated Child Development Service–1981ರಲ್ಲಿ 22 ಲಕ್ಷ ರೂಪಾಯಿಗಳು, 1982ರಲ್ಲಿ 27ಲಕ್ಷ ರೂಪಾಯಿಗಳು, 1983ರಲ್ಲಿ 62ಲಕ್ಷ ರೂಪಾಯಿಗಳು. ಮಾನ್ಯ ಅಧ್ಯಕ್ಷರೇ, ಇದು ಇಷ್ಟು ನಮ್ಮ ಅಭಿವೃದ್ಧಿ ಕೆಲಸಗಳ ವಿಚಾರದಲ್ಲಿ ಮತ್ತು ಮಾಡಿದಂಥ ಸಾಧನೆಗಳ ಬಗ್ಗೆ ನಾನು ತುಲನಾತ್ಮಕವಾಗಿ ವಿವರಗಳನ್ನು ಕೊಟ್ಟಿದ್ದೇನೆ. ಇನ್ನು ಒಂದನ್ನು ಅಂದರೆ ಮಿನಿಮಮ್ ನೀಡ್ಸ್ ಪ್ರೋಗ್ರಾಮ್ ಇದು ನಮ್ಮ ಪ್ರಧಾನ ಮಂತ್ರಿಗಳಿಗೆ ಅತ್ಯಂತ ಪ್ರಿಯವಾದ ಒಂದು ಕಾರ್ಯಕ್ರಮ. ಹಾಗೂ ಇದು ಬಹಳ ಬಡವರಿಗೆ, ಕಡುಬಡವರಿಗೆ ಅನುಕೂಲವಾಗುವ ಒಂದು ಕಾರ್ಯಕ್ರಮ. ಇದರಲ್ಲಿ 1981ರಲ್ಲಿ 45 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಒದಗಿಸಿದ್ದಾಗೆ, ಖರ್ಚಾದುದು 38 ಕೋಟಿ ರೂಪಾಯಿಗಳು. 1982ರಲ್ಲಿ 70 ಕೋಟಿ ರೂಪಾಯಿಗಳು ಬಜೆಟ್ಟಿನಲ್ಲಿ ಒದಗಿಸಿದ್ದರೆ, 60 ಕೋಟಿ ರೂಪಾಯಿಗಳಷ್ಟು ಖರ್ಚಾಗಿದೆ. 1983ರಲ್ಲಿ 100 ಕೋಟಿ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಒದಗಿಸಿ

ದ್ದರೆ, 100 ಕೋಟಿಗೂ ಹೆಚ್ಚಾಗಿ ಖರ್ಚು ಆಗುತ್ತದೆ. ಹಿಂದಿನ 2 ವರ್ಷಗಳಲ್ಲಿ ಇದರಲ್ಲಿ ಹಣ ಖರ್ಚಾಗದೆ ಉಳಿದಿದ್ದು, ಅಂದರೆ ಒಂದು ವರ್ಷ 3 ಕೋಟಿ ರೂಪಾಯಿಗಳು ಮತ್ತೊಂದು ವರ್ಷ 5 ಕೋಟಿ ರೂಪಾಯಿಗಳು ಲ್ಯಾಪ್ಸ್ ಆಗಿದೆ.

ಅಧ್ಯಕ್ಷರೇ, ಮತ್ತೊಂದು ಆರೋಪವನ್ನು ವಿರೋಧ ಪಕ್ಷದ ಸದಸ್ಯರು ಮಾಡಿದ್ದಾರೆ. ಅದು ಏನೆಂದರೆ, ಕಾಯಿದೆ ಮತ್ತು ಶಿಸ್ತಿನ ವಿಚಾರದ ಬಗ್ಗೆ. ಡಾ॥ ರಾಜಕುಮಾರ್ ಅಭಿಮಾನಿಗಳ ಸಂಘದವರು ಬೆಂಗಳೂರು ಬಂದ್ ಮಾಡಿದಾಗ ಆ ವಿಚಾರ ಇಲ್ಲಿ ಪ್ರಸ್ತಾಪಕ್ಕೆ ಬಂದಾಗ ಈ ಮಾತನ್ನು ಹೇಳಿದರು. ಈಗ ನಿನ್ನೆ ತಾನೇ ಮುಕ್ತಾಯಗೊಂಡ ರೈತರ ರಸ್ತೆ ರೋಕೋ ಮತ್ತು ರೈಲ್ ರೋಕೋ ಚಳುವಳಿ ಬಂದ್ ಆದಾಗಲೂ ಈ ಒಂದು ಟೀಕೆಯನ್ನು ನಮ್ಮ ಸರ್ಕಾರದ ಮೇಲೆ ಮಾಡಿದರು. ನನಗೆ ಗೊತ್ತುಂಟು. ಈ ಸರ್ಕಾರದ ಮೇಲೆ ಯಾವುದಾದರೂ ಒಂದು ಗೂಬೆಯನ್ನು ಕೂರಿಸಬೇಕೆಂದು ಇವರು ಪ್ರಯತ್ನ ಮಾಡಿದರು. ಮೊದಲನೆಯದಾಗಿ, ಈ ಸರ್ಕಾರ ದಿವಾಳಿ ತೆಗೆದಿದೆ ಎಂದು ಹೇಳಿದ್ದಾಯಿತು. ಆರ್ಥಿಕ ಆಧಾರದ ಮೇಲೆ ಈ ಸರ್ಕಾರವನ್ನು ಡಿಸ್‌ಮಿಸ್ ಮಾಡಲು ಸಾಧ್ಯವೇ ಎಂದು ಹೇಳತಕ್ಕಂಥ ಪ್ರಯತ್ನ ನಡೆಯಿತು, ಅದು ಆಗಲಿಲ್ಲ. ಅದಾದಮೇಲೆ ಲಾ ಅಂಡ್ ಆರ್ಡರ್ ಪ್ರಾಬ್ಲಮ್‌ನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಿಲ್ಲವೆಂದು ಹೇಳಿ, ಜಮ್ಮು ಕಾಶ್ಮೀರ್ ಸರ್ಕಾರದ ಮೇಲೆ ದಿನೇ ದಿನೇ ಆರೋಪ ಇವತ್ತು ನಡೆಯುತ್ತಿದೆ. ಈ ರೀತಿಯಾದ ಪ್ರಯತ್ನ ಇಲ್ಲಿ ಸಹ ಮಾಡಬೇಕು ಎಂದು ನಡೆಯಿತು. ಆ ಒಂದು ಪರಿಸ್ಥಿತಿಯನ್ನು ಉಂಟು ಮಾಡಲಿಕ್ಕೆ ಕೆಲವು ರಾಜಕೀಯ ಶಕ್ತಿಗಳು ಬೇಕಾದಷ್ಟು ಪ್ರಯತ್ನವನ್ನು ಮಾಡಿದರು. ಅದು ಕೋಮುವಾರು ವಿಚಾರವಾಗಿರಲಿ, ವಿದ್ಯಾರ್ಥಿಗಳನ್ನು ಎತ್ತಿಕಟ್ಟತಕ್ಕ ವಿಚಾರವಾಗಲಿ, ಅಥವಾ ಬೇರೆ ಬೇರೆ ವರ್ಗದವರನ್ನು ಎತ್ತಿಕಟ್ಟುವ ವಿಚಾರವಾಗಲಿ, ನಡೆಯಿತು. ಆದರೆ ಇವತ್ತಿನವರೆಗೂ ಆ ಪ್ರಯತ್ನ ಯಶಸ್ವಿಯಾಗಲಿಲ್ಲ. ನಮ್ಮ ಧೋರಣೆ ಈ ವಿಚಾರದಲ್ಲಿ ಸ್ಪಷ್ಟವಾಗಿದೆ. ಎಲ್ಲಿಯವರೆಗೆ ಸಮಾಜದ ಯಾವುದೇ ಒಂದು ವರ್ಗದವರಾಗಿರಲಿ, ಅವರು ಶಾಂತಿಯುತವಾಗಿ ಚಳುವಳಿ ಮಾಡುತ್ತಾರೋ ಅಲ್ಲಿಯವರೆಗೂ ಯಾವುದೇ ತರಹದ ಆತಂಕವನ್ನು ನಾವು ಅವರಿಗೆ ಒಡ್ಡುವುದಿಲ್ಲ. ಸಮಸ್ಯೆಗಳು ಇದ್ದಾವೆ, ಆ ಸಮಸ್ಯೆಗಳನ್ನು ವ್ಯಕ್ತಪಡಿಸತಕ್ಕ ಹಕ್ಕು, ಅದು ಜನ್ಮಸಿದ್ಧವಾದ ಹಕ್ಕು. ಶಾಂತಿಯುತವಾಗಿ ಚಳುವಳಿ ಅಥವಾ ಸತ್ಯಾಗ್ರಹ ಮಾಡತಕ್ಕದ್ದು ಕೂಡ ಜನ್ಮಸಿದ್ಧವಾದ ಹಕ್ಕು. ಈ ತರಹ ಒಂದು ದಾರಿಯಲ್ಲಿಯೇ ನಾವು ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ ಎನ್ನುವುದನ್ನು ಎಂದೂ ಮರೆಯುವ ಹಾಗಿಲ್ಲ. ಎಲ್ಲಿಯವರೆಗೆ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ, ಸಾರ್ವಜನಿಕರಿಗೆ ಮತ್ತು ಖಾಸಗಿಯವರ ಆಸ್ತಿಪಾಸ್ತಿಗಳಿಗೆ ಹಾನಿಯಾಗದ ರೀತಿಯಲ್ಲಿ ಮತ್ತು ಯಾರಿಗೂ ಸಾವು ನೋವಾಗದ ರೀತಿಯಲ್ಲಿ ಯಾರೇ ಆಗಲಿ ಚಳುವಳಿ ಮಾಡುತ್ತಾರೋ, ಅಂಥಹವರಿಗೆ ನಾವು ಪೋಲೀಸರ ತಂಡವನ್ನು ಉಪಯೋಗಿಸುವುದಿಲ್ಲ. ಇದನ್ನು ಮೊದಲು ಹೇಳಿದ್ದೇನೆ, ಇವತ್ತು ಮತ್ತೊಂದು ಸಲ ಹೇಳುತ್ತಿದ್ದೇನೆ. ಅವರು ಕಾರ್ಮಿಕರೇ ಆಗಿರಲಿ, ರೈತರೇ ಆಗಿರಲಿ, ವಿದ್ಯಾರ್ಥಿಗಳೇ ಆಗಿರಲಿ, ಅಥವಾ ಸರ್ಕಾರೀ ನೌಕರರೇ ಆಗಿರಲಿ, ಯಾರೇ ಆಗಿರಲಿ ನಮ್ಮ ಸರ್ಕಾರದ ಧೋರಣೆ ಏನೆಂದರೆ ಯಾರಿಗೆ ಏನೇ ಸಮಸ್ಯೆ ಇರಲಿ, ಅವರ ಸಮಸ್ಯೆಯ ವಿರುದ್ಧ ನಾವು ಮುಖ ತಿರುಗಿಸಿಕೊಂಡು ಹೋಗತಕ್ಕವರಲ್ಲ. ಅವರ ಜೊತೆಗೆ ಮಾತನಾಡಲಿಕ್ಕೆ ಯಾವಾಗಲೂ ಸಿದ್ಧವಿರತಕ್ಕ ಸರ್ಕಾರ ಇದು. ಯಾವುದೇ ಸಮಸ್ಯೆ ಇದ್ದರೂ ಎಂಥಾ ಕಠಿಣ ಸಮಸ್ಯೆ ಇದ್ದರೂ ಕೂಡ ಸಂಬಂಧಪಟ್ಟ ಎರಡು ಕಡೆಯ ಪಕ್ಷದವರು ಕೂತು ತೀರ್ಮಾನಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳತಕ್ಕ ನಂಬಿಕೆ ನಮಗಿದೆ. ಅದೇ ರೀತಿಯ ಧೋರಣೆಯನ್ನು ಅನುಸರಿಸುತ್ತಿದ್ದೇವೆ. ಮೊನ್ನೆ ಎರಡು ಘಟನೆಗಳ ವಿಚಾರದಲ್ಲಿಯೂ ಕೂಡ ಪತ್ರಿಕೆಗಳಲ್ಲಿ ಟೀಕೆ ಬಂದಿದೆ. ಈ ಸರ್ಕಾರ ಒಂದು ಬಿಗುವಾದಂಥಹ ಧೋರಣೆಯನ್ನು ವಹಿಸಲಿಲ್ಲ ಎಂದು ಬಂದಿದೆ. ಬಿಗುವಾದಂಥ ಧೋರಣೆ ಎಂದರೆ ಏನು ? ಬಿಗುವಾದಂಥ ಧೋರಣೆ ಎಂದರೆ ಗೋಲೀಬಾರ್ ಮಾಡುವುದೇ ಅಥವಾ ಸಿಕ್ಕಾಪಟ್ಟೆ ಲಾಠಿಚಾರ್ಜು ಮಾಡುವುದೆ? ಈ ರೀತಿಯಾದ ಒಂದು ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಂತ ಹಿತಸಾಧನೆಗೆ ಉಪಯೋಗಿಸಿಕೊಳ್ಳಬೇಕು ಎನ್ನತಕ್ಕ ಉದ್ದೇಶ ಕೆಲವರಿಗೆ ಇರುತ್ತದೆ. ಮೊನ್ನೆ ನಡೆದ ಈ ಎರಡು ಘಟನೆಯಲ್ಲಿ ಸರ್ಕಾರೀ ಸಿಬ್ಬಂದಿ ವರ್ಗ ಅದು ಯಾವುದೇ ಖಾತೆಗೆ ಸಂಬಂಧ ಪಟ್ಟಿದ್ದಿರಲಿ, ಮುಖ್ಯವಾಗಿ ಪೋಲೀಸ್ ಖಾತೆ ತೋರಿಸಿದಂಥ ಚಾಕಚಕ್ಯತೆ ಅವರ ತಾಳ್ಮೆ ನಿಜವಾಗಿಯೂ ಕೂಡ ಶ್ಲಾಘನೀಯವಾದುದೆಂದು ಹೇಳುತ್ತೇನೆ. ಈ ಘಟನೆಗಳಿಂದ ಸಾರ್ವಜನಿಕರಿಗೆ ತೊಂದರೆ ಆಯಿತು ನಿಜ, ಆದರೆ ಸಾರ್ವಜನಿಕರೂ ಕೂಡ ಇದನ್ನು ತಿಳಿದುಕೊಳ್ಳುತ್ತಾರೆ. ಯಾರು ಒಂದು ಮಿತಿಮೀರಿ ಹೋಗುತ್ತಾರೋ, ಆಗ ಅಂಥವರನ್ನು ಸಾರ್ವಜನಿಕರೇ ನಿಗ್ರಹಿಸುತ್ತಾರೆ ಎನ್ನತಕ್ಕ ನಂಬಿಕೆ ನನಗಿದೆ. ಈ ರೈತರ ಚಳುವಳಿಯನ್ನು ನಾವು ತೆಗೆದುಕೊಂಡರೂ ಕೂಡ ನಾವು ಅತ್ಯಂತ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಹೆಣಗಳು ಬೀಳಲಿಲ್ಲ, ನೂರಾರು ಸಂಖ್ಯೆಯಲ್ಲಿ ಜನರಿಗೆ ಹೊಡೆತ ಬೀಳಲಿಲ್ಲ, ಇದು ಸಾರ್ವಜನಿಕರ ಅಭಿಪ್ರಾಯಕ್ಕೆ ಸಿಕ್ಕಂತ ಒಂದು ದೊಡ್ಡ ಜಯ ಎಂದು ತಿಳಿದುಕೊಳ್ಳುತ್ತೇನೆ. ನಮ್ಮ ಸರ್ಕಾರದ ಧೋರಣೆ ಈ ಲಾ ಅಂಡ್ ಆರ್ಡರ್ ಪರಿಸ್ಥಿತಿಯಲ್ಲಿ ಎಷ್ಟರ ಮಟ್ಟಿಗಿದೆ ಎಂದು ಹೇಳುವುದನ್ನು ಅಂಕಿಸಂಖ್ಯೆಗಳಿಂದ

ನೋಡಬಹುದಾಗಿದೆ.

ಮೊದಲನೆಯದಾಗಿ ಮೂರು ಮುಖ್ಯವಾದ ಉಗ್ರವಾದ **ಕಾಯಿದೆಗಳಿವೆ.** ಅದರ ಕೆಳಗೆ ಎಷ್ಟು ಜನರನ್ನು ಬಂಧಿಸಿದ್ದೇವೆಂದು ಹೇಳುವುದಕ್ಕೆ ಬಯಸುತ್ತೇನೆ.

ಕಾಫಿ ಪೋಸಾದಲ್ಲಿ ದಸ್ತಗಿರಿ ಆದವರ ಸಂಖ್ಯೆ :—1981ನೇ ಇಸವಿಯಲ್ಲಿ–6, 1982ನೇ ಇಸವಿಯಲ್ಲಿ–14, 1983ನೇ ಇಸವಿಯಲ್ಲಿ–18.

2) ಪ್ರಿವೆನ್‌ಷನ್ ಆಫ್ ಬ್ಲಾಕ್ ಮಾರ್ಕೆಟಿಂಗ್ ಅಂಡ್ ಎಸೆನ್ಷಿಯಲ್ ಕಮಾಡಿಟೀಸ್ ಆ್ಯಕ್ಟ್ ಕೆಳಗೆ ಬಂಧಿತರಾಗಿರತಕ್ಕವರು:—1981—8, 1882—7, 1983—ಇಲ್ಲ.
ನಾವು 1983ರಲ್ಲಿ ಈ ಕಾಯಿದೆ ಕೆಳಗ ಯಾರನ್ನೂ ಬಂಧಿಸಿಲ್ಲ.

3) ನ್ಯಾಷನಲ್ ಸೆಕ್ಯೂರಿಟಿ ಕೆಳಗೆ ಬಂಧಿತರಾಗಿರತಕ್ಕವರು:—1981–5, 1982–5, 1983–ಇಲ್ಲ 1983ರಲ್ಲಿ ನಾವು ಇದುವರೆಗೂ ಈ ಆ್ಯಕ್ಟ್ ಕೆಳಗೆ ಯಾರನ್ನೂ ಬಂಧಿಸಿಲ್ಲ. ನಾನು ಒಂದು ಸಂದರ್ಭದಲ್ಲಿ ಹೇಳಿದ್ದು ನಿಜ, ನಾನು ಹೇಳಿದ್ದು ಏನೆಂದರೆ ಕೆಲವು ದುಷ್ಟ ಶಕ್ತಿಗಳು ಅತಿ ಸಾಮಾನ್ಯವಾದಂಥ ರೀತಿಯಲ್ಲಿ ವರ್ತನೆ ಮಾಡಿದ್ದೇ ಆದರೆ ಬುದ್ಧಿಪೂರ್ವಕವಾಗಿ ಲಾ ಅಂಡ್ ಆರ್ಡರ್ ಪರಿಸ್ಥಿತಿಯನ್ನು ಹದಗೆಡಿಸತಕ್ಕ ಸಂದರ್ಭದಲ್ಲಿ ತೊಡಗಿದರೆ ಆಗ ನಾನು ಹೇಳಿದ್ದು ಹೌದು,–"ನೀವೇ ಏನು ಔಷಧಿಯನ್ನು ಮಾಡಿ ಇಟ್ಟಿದ್ದೀರಿ", ಆ ಔಷಧಿಯ ರುಚಿಯನ್ನು ತೋರಿಸುತ್ತೇನೆ ಅಂತ ಹೇಳಿದ್ದು ನಿಜ. ನೀವೇ ಮಾಡಿ ಇಟ್ಟಂತ ಔಷಧಿ ಇದೆ, ಆ ಔಷಧಿಯ ರುಚಿಯನ್ನು ನಿಮಗೆ ತೋರಿಸುತ್ತೇನೆ ಎಂದು ಹೇಳಿದ್ದು ಉಂಟು. ಆದರೆ ಸೈದ್ಧಾಂತಿಕವಾಗಿ ನಮ್ಮ ಸರ್ಕಾರ ಅದಕ್ಕೆ ವಿರೋಧ ಇದೆ. ಯಾವುದೇ ಒಬ್ಬ ವ್ಯಕ್ತಿಯನ್ನು ವಿಚಾರಣೆಗೆ ಒಳಪಡಿಸದೆ ದಸ್ತಗಿರಿ ಮಾಡಿ ಜೈಲಿನಲ್ಲಿ ಇಡತಕ್ಕ ನೀತಿಗೆ ನಮ್ಮ ಸರ್ಕಾರ ವಿರೋಧವಾಗಿದೆ. ಇದನ್ನು ಮೊದಲೂ ಹೇಳಿದೆ, ಇವತ್ತೂ ಹೇಳುತ್ತಿದ್ದೇನೆ. ಆದರೆ ಇದು ಏನೋ ಒಂದು ಸೈದ್ಧಾಂತಿಕ ದೌರ್ಬಲ್ಯ ಎಂದು ಯಾರೂ ತಿಳಿದುಕೊಳ್ಳಕೂಡದು. ಇದು ದುರ್ಬಲತೆ ಅಲ್ಲ. ಈ ವಿಷಯವನ್ನು ನಾನು ಸ್ಪಷ್ಟಮಾಡಲಿಕ್ಕೆ ಬಯಸುತ್ತೇನೆ.

ಆಮೇಲೆ ಪೋಲೀಸ್ ಫೈರಿಂಗ್ (ಗೋಲೀಬಾರ್) 1981ನೇ ಇಸವಿಯಲ್ಲಿ 24, 1982ನೇ ಇಸವಿಯಲ್ಲಿ 30, 1983ನೇ ಇಸವಿಯಲ್ಲಿ 113ಆಗಿದೆ. ಈ 13ರಲ್ಲಿ 7 ಸಲ ಬರೀ ಆಕಾಶದಲ್ಲಿ ಗುಂಡು ಹಾರಿಸಲಾಯಿತು.

ಸತ್ತವರ ಸಂಖ್ಯೆ 1981ರಲ್ಲಿ 27, 1982ರಲ್ಲಿ 24, 1983ರಲ್ಲಿ 16.

ಶ್ರೀ ಹೆಚ್. ಡಿ. ಚೌಡಯ್ಯ.—ಹತ್ತಿರ ಹತ್ತಿರ ಬಂದಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಇದು ರೈತರ ಮೇಲೆ ಮಾಡಿದ್ದಲ್ಲ. ಕಮ್ಯುನಲ್ ಡಿಸ್ಟರ್‌ಬೆನ್ಸ್ ಆದಾಗ ಆಗಿರುವುದು. ಬಳ್ಳಾರಿಯಲ್ಲಿ ಆಯಿತು ನಿಜ, ರೈತರ ಮೇಲೆ ಮಾಡಿದ್ದಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಿಂದೆ ಸತ್ತವರೆಲ್ಲರೂ ಕೂಡಾ ರೈತರಲ್ಲ. ಗೋಲೀಬಾರ್ ಎಲ್ಲವೂ ಕೂಡಾ ರೈತರ ಮೇಲೆ ಆದುದಲ್ಲ. ಹಿಂದೆ ಎಸೆನ್‌ಷಿಯಲ್ ಕಮಾಡಿಟೀಸ್ ಆಕ್ಟ್‌ನಲ್ಲಿ, ಕಮ್ಯುನಲ್ ಡಿಸ್ಟರ್‌ಬೆನ್ಸ್‌ನಲ್ಲಿ ಗೋಲೀಬಾರ್ ಆಗಿದೆ. ಈವನ್ ಲಾ ಅಂಡ್ ಆರ್ಡರ್ ಪ್ರಾಬ್ಲಮ್‌ನಲ್ಲೂ ಗೋಲೀಬಾರ್ ಆಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಗಾಯಗೊಂಡವರ ಸಂಖ್ಯೆ 1982ನೇ ಇಸವಿಯಲ್ಲಿ 108, 1983ನೇ ಇಸವಿಯಲ್ಲಿ 54, ನಾನು ಗೋಲೀಬಾರ್ 1983ನೇ ಇಸವಿಯಲ್ಲಿ ಆದಂಥ ಸಂದರ್ಭ ಏನು ಎಂದು ಹೇಳುತ್ತಿದ್ದೆ. ಎರಡು ಸಲ ಕಮ್ಯೂನಲ್ ಅಜಿಟೇಷನ್‌ನಲ್ಲಿ, ಒಂದು ಸಲ ಲೇಬರ್ ಅಜಿಟೇಷನ್‌ನಲ್ಲಿ, ವೈಟ್‌ಫೀಲ್ಡ್‌ನಲ್ಲಿ ಗೋಲೀಬಾರ್ ಮಾಡಿದ್ದು, ಯಾರೂ ಸಾಯಲಿಲ್ಲ. ಹುಸಿ ಗುಂಡು ಹಾರಿಸಿದ್ದು. ಎರಡು ಸಲ ಬಳ್ಳಾರಿಯಲ್ಲಿ ಆದದ್ದು. ಆಮೇಲೆ ಒಂದು ಸಲ ಅಲ್ಲ, ಎರಡು ಸಲ ಸ್ಯಾಂಡಲ್‌ವುಡ್ ಸ್ಮಗಲಿಂಗ್‌ನಲ್ಲಿ ಆದದ್ದು. ಹಿಂದೆ ಇದರ ಬಗ್ಗೆ ಯಾವ ಸರಕಾರವೂ ಗುಂಡು ಹಾರಿಸಿರಲಿಲ್ಲ. ಇದೆಲ್ಲಾ ಸೇರಿಸಿ 13 ಸಲ ಆಗಿದೆ.

ಶ್ರೀ ಎಸ್. ಬಂಗಾರಪ್ಪ.—ಹಿಂದೆ ಸ್ಮಗಲಿಂಗ್ ಇರಲಿಲ್ಲ. ಆದ್ದರಿಂದ ಗುಂಡು ಹಾರಿಸಲಿಲ್ಲ. ಈಗ ನಿಮ್ಮ ಸರ್ಕಾರದಲ್ಲಿ ಸ್ಮಗಲಿಂಗ್ ಶುರುವಾಗಿದೆ. ಸ್ಮಗಲಿಂಗ್ ಮಾಡುವವರೆಲ್ಲಾ ಕಾಂಗ್ರೆಸ್‌ನವರು ಎಂದು ಹೇಳಬೇಡಿ.

ಶ್ರೀ ರಾಮಕೃಷ್ಣ ಹೆಗಡೆ.— ಒಂದು ಸಲ ಚೇಸಿಂಗ್ ದಿ ಕ್ರಿಮಿನಲ್ಸ್, ಆದೂ ಸೇರಿದೆ.

ಶ್ರೀ ಎಂ. ರಾಮಪ್ಪ.—ಬಳ್ಳಾರಿಯಲ್ಲಿ 7 ಜನ ಸತ್ತಿರುವುದು ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.— ಅದನ್ನೂ ಸೇರಿಸಿ ಹೇಳಿದೆ. ಚೇಸಿಂಗ್ ದಿ ಕ್ರಿಮಿನಲ್ಸ್ ಒಂದು ಸಲ, 1982ನೇ ಇಸವಿಯಲ್ಲಿ ಕಮ್ಯುನಲ್ ರಯಟ್ಸ್ ಮೇಲೆ 5 ಸಲ ಗೋಲೀಬಾರ್ ಆಯಿತು. ಲಾಂಗ್ವೇಜ್ ಅಜಿಟೇಷನ್‌ನಲ್ಲಿ 5 ಸಲ ಗೋಲೀಬಾರ್ ಆಯಿತು. ಮುಷ್ಕರದಲ್ಲಿ 3 ಸಲ ಆಯಿತು. ರೈತರ ಮುಷ್ಕರದಲ್ಲಿ 2 ಸಲ ಗೋಲೀಬಾರ್ ಆಯಿತು. ಮತ್ತು ಪೊಲಿಟಿಕಲ್ ಅಜಿಟೇಷನ್ ಮೇಲೆ ಒಂದು ಸಲ ಆಯಿತು. ಹೀಗೆ ಒಟ್ಟು 30 ಸಲ ಗೋಲೀಬಾರ್ ಆಗಿದೆ. ಆಮೇಲೆ ಸಿವಿಲ್ ರೈಟ್ಸ್ ಆ್ಯಕ್ಟ್ ಪ್ರಕಾರ

ಹರಿಜನರ ಮೇಲೆ ದೌರ್ಜನ್ಯಗಳಾಗಿರುವ ಬಗ್ಗೆ ಒಂದು ವಿಚಾರ ಬಂದಿದೆ. ಇದು 1981ನೇ ಇಸವಿಯಲ್ಲಿ 581 ಕೇಸಸ್, 1982ನೇ ಇಸವಿಯಲ್ಲಿ 674 ಕೇಸಸ್, 1983ನೇ ಇಸವಿಯಲ್ಲಿ 509 ಕೇಸಸ್, ಅಂದರೆ ಇದರಲ್ಲೂ ಕೂಡಾ, ಇಂತಹ ಕೇಸ್‌ಗಳು ಕಡಿಮೆಯಾಗಿದೆ ಎಂಬುದನ್ನು ತೋರಿಸುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬುಕ್ ಮಾಡಲಿಲ್ಲ. ಹರಿಜನರ ಮೇಲೆ ದೌರ್ಜನ್ಯ ಜಾಸ್ತಿಯಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾವು ಯಾವುದೇ ಕೇಸನ್ನು ಬುಕ್ ಮಾಡದೆ ಮಾಡಿಲ್ಲ; ಹಿಂದೆ ಯಾವ ಸರ್ಕಾರವೂ ಮಾಡಿಲ್ಲ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ.—ಹಳ್ಳಿಗಳಿಗೆ ಹೋಗಿ, ಅಲ್ಲಿ ಏನಾಗುತ್ತಿದೆ ಎಂದು ಗೊತ್ತಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಆಮೇಲೆ ಹರಿಜನರ ಮೇಲೆ, ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ಆದರೆ ಅದಕ್ಕೆ ಪ್ರಮುಖವಾದ ಜವಾಬ್ದಾರಿತನವನ್ನು ಡೆಪ್ಯುಟಿ ಕಮಿಷನರ್ ಮೇಲೆ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಮೇಲೆ ಹೇರತಕ್ಕಂಥ ಒಂದು ಆಜ್ಞೆಯನ್ನು, ಹಿಂದಿನ ಯಾವ ಸರ್ಕಾರವೂ ಹೊರಡಿಸಿರಲಿಲ್ಲ. ಅದನ್ನು ಈ ಸರಕಾರ ಹೊರಡಿಸಿದೆ. ಅದಕ್ಕೆ ಅವರನ್ನು ಜವಾಬ್ದಾರರನ್ನಾಗಿ ಮಾಡುತ್ತೇವೆ.

ಶ್ರೀ ಕೆ. ಶಿವಮೂರ್ತಿ.—ಒಂದು ಕಡೆ ಡಿ. ಸಿ. ಅವರನ್ನು ಇಟ್ಟರೆ ತಾನೇ ?

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, 1981—416, 1982—369 1923—179 (ನವಂಬರ್ ಕೊನೆಯೊಳಗೆ)

ಶ್ರೀ ಕೆ. ಶಿವಮೂರ್ತಿ.—ಅವರಿಗೆ ಅನುಕೂಲವಾಗಿರುವುದನ್ನು ಮಾತ್ರ ಕೊಡುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮುಖ್ಯ ಮಂತ್ರಿಗಳೇ, ಎಲ್ಲಾ ಇಲಾಖೆಗಳದ್ದೂ ಅಚ್ಚು ಹಾಕಿಸಿ ಕೊಟ್ಟುಬಿಡಿ.

ಶ್ರೀ ರಾಮಕೃಷ್ಣ ಹೆಗಡೆ. —ಅಷ್ಟನ್ನೂ ಅಚ್ಚು ಹಾಕಿಸಿ ಕೊಡುತ್ತೇನೆ.

ಶ್ರೀ ಎಸ್ ಸೂರ್ಯನಾರಾಯಣರಾವ್.—ಕೆಲವು ಡಿಪಾರ್ಟ್‌ಮೆಂಟ್‌ದು, ತಮಗೆ ಅನುಕೂಲವಾಗಿರುವುದನ್ನು ಮಾತ್ರ ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ, ಅದಕ್ಕೆ ಅಚ್ಚು ಹಾಕಿಸಿ ಕೊಡಿ.

ಶ್ರೀ ಎನ್. ಜಿ. ನಾಯಕ್.—ನಮಗೆ ಪುಸ್ತಕ ಒದಗಿಸಿ ಬಿಟ್ಟರೆ ನಾವು ಮನೆಯಲ್ಲಿ ಓದಿಕೊಳ್ಳುತ್ತೇವೆ. ಮಾನ್ಯ ಮುಖ್ಯ ಮಂತ್ರಿಗಳು ಏತಕ್ಕೆ ಇಷ್ಟು ಕಷ್ಟ ಬೀಳುತ್ತಿದ್ದಾರೆ.

ಅಧ್ಯಕ್ಷರು.—ನೀವೂ ಅದೇ ಕೆಲಸ ಮಾಡಬೇಕಾಗಿತ್ತು. ಏತಕ್ಕೆ ಇಷ್ಟೊಂದು ಶ್ರಮ ತೆಗೆದುಕೊಂಡಿರಿ ?

ಶ್ರೀ ಬಿ. ಬಿ. ಚಿಮ್ಮನ ಕಟ್ಟಿ.—ಮಾನ್ಯ ಮುಖ್ಯ ಮಂತ್ರಿಗಳು ಕೊಡತಕ್ಕಂಥ ಅಂಕಿಅಂಶಗಳು ನಮಗೆ ಬಹಳ ಸಹಕಾರಿಯಾಗುತ್ತವೆ ನಿಜ, ಆದರೆ ನಮ್ಮ ಭಾವನೆ ಏನೆಂದರೆ ತಮಗೆ ಅನುಕೂಲವಾಗತಕ್ಕಂಥ, ಸರ್ಕಾರಕ್ಕೆ ಒಳ್ಳೆಯ ಹೆಸರು ಬರತಕ್ಕಂಥ ಅಂಕಿ ಅಂಶಗಳನ್ನು ಮಾತ್ರ ಕೊಟ್ಟರೆ ಸಾಲದು.

ಅಧ್ಯಕ್ಷರು.—ನಿಮಗೆ ಯಾವುದು ಬೇಕು ಹೇಳಿ

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಜನತಾ ಮನೆಗಳನ್ನು ಕಟ್ಟಿಸಿರತಕ್ಕಂಥಾದ್ದು, ಭೂಮಿಗಳನ್ನು ಹಂಚಿರತಕ್ಕಂಥಾದ್ದು, ಎಲ್ಲಾ ಅಂಕಿಸಂಖ್ಯೆಗಳನ್ನು ಕೊಟ್ಟರೆ ಸಮಾಧಾನವಾಗುತ್ತದೆ. ಒಳ್ಳೆಯ ಕೆಲಸ ಮಾಡಿದ್ದರೆ ಶಹಭಾಸ್‌ಗಿರಿ ಕೊಡುತ್ತೇವೆ

ಶ್ರೀ ವೈ. ರಾಮಕೃಷ್ಣ —ತಮಗೆ ಅನುಕೂಲವಾದದ್ದನ್ನು ಮಾತ್ರ ಕೊಡುತ್ತಿದ್ದೀರಿ. ಸೈಟ್ಸ್ ಎಷ್ಟು ಕೊಟ್ಟಿದ್ದಾರೆ, ಜನತಾ ಮನೆಗಳನ್ನು ಎಷ್ಟು ಕಟ್ಟಿಸಿ ಕೊಟ್ಟಿದ್ದಾರೆ ಅದೆಲ್ಲಾ ಫಿಗರ್ಸ್ ಕೊಡಿ.

ಶ್ರೀ ಎಂ. ಎಸ್. ಕೃಷ್ಣನ್.—ಹರಿಜನರಿಗೆ, ಬೇರೆಯವರಿಗೆ ಕೊಟ್ಟಿರತಕ್ಕ ವಸತಿ ಸೌಕರ್ಯ, ಲ್ಯಾಂಡ್ ಗ್ರಾಂಟ್ಸ್ ಎಲ್ಲಾ ಕೊಡಬೇಕು.

ಶ್ರೀ ಭೀಮಣ್ಣ ಖಂಡ್ರೆ —ಈಗ ಶ್ರೀ ರಾಮಕೃಷ್ಣ ಅವರು ಹೇಳಿರುವುದು ನ್ಯಾಯ, ತಮಗೆ ಅನುಕೂಲ ಆಗಿದ್ದು ಮಾತ್ರವಲ್ಲ, ಎಲ್ಲಾ ಬರಲಿ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಈಗ ಅಷ್ಟೂ ಡಿಪಾರ್ಟ್‌ಮೆಂಟ್‌ನದು ಬರುತ್ತದೆ. ಅಷ್ಟೂ ಓದಬೇಕೆಂದರೆ ಓದುತ್ತೇನೆ. ಅಷ್ಟೂ ಡಿಪಾರ್ಟ್‌ಮೆಂಟ್ಸ್‌ಗೆ ಸಂಬಂಧಪಟ್ಟ ಅಂಕಿಅಂಶಗಳನ್ನು ನಮ್ಮ ಬಜೆಟ್ ಸ್ಪೀಚ್ ಜೊತೆಗೆ ಮಾನ್ಯ ಸದಸ್ಯರೆಲ್ಲರಿಗೂ ನಾನು ಕೊಡುತ್ತೇನೆ.

ಭೀಮಣ್ಣ ಖಂಡ್ರೆ.—ನಿಮಗೆ ಬೇಕಾಗಿರುವುದನ್ನು ಮಾತ್ರ ಓದಬೇಡಿ.

ಶ್ರೀ ಎಸ್. ಬಂಗಾರಪ್ಪ.—ಎಲ್ಲಾ ಡಿಪಾರ್ಟ್‌ಮೆಂಟ್‌ನದೂ ಓದಿ, ಚೆನ್ನಾಗಿ ಓದುತ್ತಾರೆ ಓದಲಿ ಬಿಡಿ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದೇ ಸಂದರ್ಭದಲ್ಲಿ ಕಾರ್ಮಿಕ ಕ್ಷೇತ್ರದಲ್ಲಿ ಏನಾಗಿದೆ ಎನ್ನತಕ್ಕಂಥಾದ್ದನ್ನು ಹೇಳುತ್ತೇನೆ. ಕಾರ್ಮಿಕ ಕ್ಷೇತ್ರದಲ್ಲಿ ಸ್ಟ್ರೈಕ್ಸ್ ಮತ್ತು ಲಾಕೌಟ್ಸ್ ಆಗಿರುವುದನ್ನು ಹೇಳುತ್ತೇನೆ.

1981ನೇ ಇಸವಿಯಲ್ಲಿ ಮುಷ್ಕರ 21, ಲಾಕೌಟ್ 11.
1982ನೇ ಇಸವಿಯಲ್ಲಿ ಮುಷ್ಕರ 37, ಲಾಕೌಟ್ 5.
1983ನೇ ಇಸವಿಯಲ್ಲಿ ಮುಷ್ಕರ 26, ಲಾಕೌಟ್ 1.

ಶ್ರೀ ಎಂ. ಎಸ್. ಕೃಷ್ಣನ್.—ಮುಚ್ಚಿಕೊಂಡು ಹೋಗಿರುವುದನ್ನೂ ಸಹ ಹೇಳಿ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಈಗ ಹೊಸದಾಗಿ ಸಸ್ಪೆನ್‌ಷನ್ ಆಫ್ ವರ್ಕ್ ಎಂದು ಮಾಡಿದ್ದಾರೆ. ಅದನ್ನು ಹೇಳಿ.

ಶ್ರೀ ರಾಮಕೃಷ್ಣಹೆಗ್ಗಡೆ.—ಮುಚ್ಚಿದ್ದರ ಬಗ್ಗೆ ಬೇಕಾದರೆ ಪ್ರತ್ಯೇಕವಾಗಿ ಕೊಡೋಣ. ಶಿಕ್ಷಣ ಇಲಾಖೆ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ.

ಶ್ರೀ ಕೆ. ಶಿವಮೂರ್ತಿ.—ನಕಲಿ ಹತ್ತಿ ಬೀಜ ಮಾರುವವರು, ನಕಲಿ ಗೊಬ್ಬರ ಮಾರುವವರು, ಬ್ಲಾಕ್ ಮಾರ್ಕೆಟಿಯರ್ಸ್, ರೈಸ್ ಸ್ಮಗ್ಲರ್ಸ್, ಖೋಟಾನೋಟು ಮಾಡುವವರು ಅವರ ಬಗೆಗೆ ಮಾಹಿತಿ ಇಡಲಿ.

ಅಧ್ಯಕ್ಷರು.—ಇದು ಆಮೇಲೆ ಕೇಳಿ.

ಶ್ರೀ ಜಿ. ಎಂ. ಕಾನಡೆ.—ಒಳ್ಳೆಯ ಕೆಲಸ ಮಾಡಿದ್ದನ್ನು ಮಾತ್ರ ಹೇಳುತ್ತಿದ್ದಾರೆ. ಅದೇ ರೀತಿ ಕೆಟ್ಟ ಕೆಲಸ ಮಾಡಿರುವುದನ್ನೂ ಹೇಳಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಈಗ ಮಾನ್ಯ ಮುಖ್ಯಮಂತ್ರಿಗಳು ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ ಬಹಳ ಸಂತೋಷ. ನಾನು ಹೇಳುತ್ತಿರುವುದು ಅಧ್ಯಕ್ಷರಿಗೆ ಕೇಳುತ್ತಿಲ್ಲವಲ್ಲಾ;

ಅಧ್ಯಕ್ಷರು.—ನಾನು ಕರೆಯದಿದ್ದರೂ ಮಾತನಾಡುತ್ತಿದ್ದೀರಲ್ಲಾ, ಅವರ ಮಾತು ಕೇಳಿಸುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.— ಬಹಳ ಸಂತೋಷ, ಹಾಗೆ ಅಂಕಿ ಅಂಶಗಳನ್ನು ಕೊಡುವಾಗ ಒಳ್ಳೆಯ ಅಕ್ಕಿ ಬೆಲೆ ಒಂದು ಕೇಜಿಗೆ 2ರೂಪಾಯಿಗಳು ಇತ್ತು. ಅನಂತರ ಫೈನ್ ರೈಸ್ ಬೆಲೆ 2-10 ರೂಪಾಯಿಗಳು ಇತ್ತು. ಈಗ 2-30 ರೂಪಾಯಿಗಳು ಮಾಡಿದ್ದೀರಲ್ಲಾ, ಆ ಬಗ್ಗೆ 1981, 1982 ಹಾಗೂ 1983ರ ಸಾಲಿನ ಅಂಕಿಅಂಶಗಳನ್ನೂ ಕೊಡಿ ಆಮೇಲೆ ಬಸ್‌ದರವನ್ನು ಹೆಚ್ಚು ಮಾಡಿರುವ ಬಗ್ಗೆಯೂ ಸ್ವಲ್ಪ ಅಂಕಿ ಅಂಶಗಳನ್ನು ಕೊಡುವುದು ಒಳ್ಳೆಯದು.

ಅಧ್ಯಕ್ಷರು.— ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಪೂರ್ತಿ ಮಾಡಿದ ಮೇಲೆ ನಂತರ ವಿವರಣೆಯನ್ನು ಕೇಳಿ. ನೀವು ಮಧ್ಯೆ ಮಧ್ಯೆ ಹೀಗೆ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಎಂ ರಾಮಪ್ಪ.— ವಿವರಣೆಯನ್ನು ನಂತರ ಕೇಳಿ ಅಂತ ಹೇಳಿಬಿಟ್ಟು ಮುಖ್ಯಮಂತ್ರಿಗಳು ಉತ್ತರ ಹೇಳಿದ ಮೇಲೆ ಅಡ್ಜರ್ನ್ ಅಂತ ಹೇಳಿಬಿಡುತ್ತೀರಿ. ಆವಾಗ ನಮಗೆ ವಿವರಣೆಯನ್ನು ಕೇಳುವಂತಹ ಅವಕಾಶ ಎಲ್ಲಿರುತ್ತದೆ

ಶ್ರೀ ಎಸ್. ಬಂಗಾರಪ್ಪ.— ಅವರಿಗೆ ಬೇಕಾದುದನ್ನೆ ಹೇಳಿದ್ದಾರೆ. ಕರ್ನಾಟಕ ಜನತೆ ಕೇಳುತ್ತಿದ್ದಾರೆ.

ಅಧ್ಯಕ್ಷರು — ನಿಮಗೆ ಇಷ್ಟ ಬಂದದ್ದನ್ನು ಕೇಳುವುದೂ ಕ್ರಮವಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ.— ಜನತೆ ಸಾಕಷ್ಟು ಕೇಳಿದ್ದಾರೆ. ಈಗ ಹೇಳತಕ್ಕಂತಹದ್ದೂ ಕೂಡ ಜನತೆಗೋಸ್ಕರ.

ಶ್ರೀ ಎಸ್. ಬಂಗಾರಪ್ಪ.— 1983ನೇ ಜನವರಿ ಮೊದಲ ವಾರದಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದಾಗ ಒಂದು ತೆಂಗಿನಕಾಯಿ ಬೆಲೆ 1-50ರೂ. ಇತ್ತು. ಆದರೆ ಇವತ್ತು 6 ರಿಂದ 7 ರೂಪಾಯಿಗಳಾಗಿವೆಯಲ್ಲಾ, ಅದರ ಬಗ್ಗೆಯೂ ಹೇಳಬೇಕು.

ಶ್ರೀ ಕೆ. ಶಿವಮೂರ್ತಿ.— ರೋಸ್ಟರ್ ಸಿಸ್ಟಂನಲ್ಲಿ ಎಷ್ಟು ಹರಿಜನ ಗಿರಿಜನರಿಗೆ ಪ್ರಮೋಷನ್ ಕೊಟ್ಟಿದ್ದಾರೆ? ಎಷ್ಟು ಜನರಿಗೆ ಹೊಸದಾಗಿ ಕೆಲಸ ಕೊಟ್ಟಿದ್ದಾರೆಂಬುದರ ಬಗ್ಗೆಯೂ ಹೇಳಬೇಕು.

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.— ಆಡಳಿತ ಪಕ್ಷದ ಸದಸ್ಯರಿಗೆ ಸ್ವಲ್ಪ ಬಾಯಿ ಚಟ. ಈ ಕಡೆ ಬಂದು ಕುಳಿತುಕೊಳ್ಳಲು ಹೇಳಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಮಧ್ಯ ಮಧ್ಯದಲ್ಲಿ ಈ ರೀತಿ ಮಾಡತಕ್ಕಂತಹದ್ದು ಸಂಪ್ರದಾಯಕ್ಕೂ ವಿರೋಧವಾದುದು, ಮತ್ತೆ ಶಿಷ್ಟಾಚಾರಕ್ಕೂ ವಿರೋಧವಾದುದು.

ಶ್ರೀ ಕೆ. ಶಿವಮೂರ್ತಿ.— ಅಲ್ಲ ಸ್ವಾಮಿ ....

ಶ್ರೀ ರಾಮಕೃಷ್ಣ ಹೆಗಡೆ.— ಸುಮ್ಮನೆ ಕುಳಿತುಕೊಂಡು ಕೇಳುವುದು ಇದ್ದರೆ ಕೇಳಿ. ಇಲ್ಲದಿದ್ದರೆ ಹೋಗಿ. ಏನಿದು? ಅವರಿಗೆ ಅನುಭವ ಇದೆಯೇ? ಅಲ್ಲ ಸ್ವಾಮಿಯಂತೆ ನಾನು ಉತ್ತರವನ್ನು ಪೂರ್ತಿ ಮಾಡಿದ ಮೇಲೆ ನೀವು ಒಂದು ಸಾವಿರ ಪ್ರಶ್ನೆಯನ್ನು ಕೇಳಿ ನಾನು ಅದಕ್ಕೆ ಉತ್ತರ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.— ಶಾಸನ ಸಭೆಯಲ್ಲಿ ನಡೆದುಕೊಳ್ಳತಕ್ಕಂತಹ ರೀತಿ ಇದಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ,...............

ಶ್ರೀ ಎಸ್. ಬಂಗಾರಪ್ಪ.— ಮುಖ್ಯ ಮಂತ್ರಿಗಳು ಒಂದು ಹೇಳಿದರು. ಬೇಕಾದರೆ ಕೇಳಿ. ಬೇಡದಿದ್ದರೆ ಹೋಗಿ ಅಂತ.

(ಗೊಂದಲ)

ಶ್ರೀ ವೈ. ಕೆ. ರಾಮಯ್ಯ.— ಅಲ್ಲಿ ಗಲಾಟೆ ಮಾಡಿದರೆ ಸೈಲೆನ್ಸ್ ಅಂತ ನಮ್ಮ ಕಡೆಗೆ ತಾವು ಕೈ ತೋರಿಸುತ್ತಿದ್ದೀರಲ್ಲಾ ಅದು ನನಗೆ ಅರ್ಥವಾಗಲಿಲ್ಲ.

ಶ್ರೀ ಕೆ. ಶಿವಮೂರ್ತಿ.— ಹೇಳಿದ್ದನ್ನು ಕೇಳುವುದಕ್ಕಲ್ಲ ಬಂದಿರುವುದು.

ಅಧ್ಯಕ್ಷರು — ಶಾಸನ ಸಭೆಯ ಕೆಲವು ನಿಯಮಗಳಿವೆ. ಅದರಂತೆ ನಾವು ಹೋಗೋಣ. ಮುಖ್ಯಮಂತ್ರಿಗಳ ಉತ್ತರ ಆದ ಮೇಲೆ ಅವರ ಉತ್ತರದಲ್ಲಿ ನಿಮಗೆ ಅಸಮಾಧಾನ ಇದ್ದರೆ ನಂತರ ವಿವರಣೆಯನ್ನು ಕೇಳಿ. ನಾನು ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕೆ. ಶಿವಮೂರ್ತಿ.— ಅವರು ತಮಗೆ ಅನುಕೂಲವಾದದ್ದನ್ನು ಮಾತ್ರ ಅಧಿಕಾರಿಗಳಿಂದ ತರಿಸಿಕೊಂಡು ಅದನ್ನು ಇಲ್ಲಿ ಓದುತ್ತಿದ್ದಾರೆ. ಈ ರಾಜ್ಯದ ಹರಿಜನ-ಗಿರಿಜನರಿಗೆ, ಹಿಂದುಳಿದವರ್ಗದವರಿಗೆ ಎಷ್ಟು ಜನರಿಗೆ ಕೆಲಸವನ್ನು ಕೊಟ್ಟಿದ್ದಾರೆ? ಅದನ್ನೂ ಹೇಳಬೇಕು.

ಶ್ರೀ ಕೆ.ಜಿ. ಮಹೇಶ್ವರಪ್ಪ.— ನಿಮ್ಮ ತಲೆ ಸರಿಯಾಗಿ ಇದೆಯೇ?

ಶ್ರೀ ಎಂ. ರಾಮಪ್ಪ.— ಮುಖ್ಯಮಂತ್ರಿಗಳು ಉತ್ತರ ಹೇಳಿದ ಮೇಲೆ ತಾವು ಅಡ್ಜರ್ನ್ ಅಂತ ಹೇಳಿಬಿಟ್ಟು ಹೋಗಿಬಿಟ್ಟರೆ ನಾವು ಕೇಳುವುದಕ್ಕೆ ಅವಕಾಶ ಇಲ್ಲದ ಹಾಗೆ ಆಗಿಬಿಡುತ್ತದೆ.

ಅಧ್ಯಕ್ಷರು.— ಹೀಗೆಲ್ಲಾ ಆಪಾದನೆ ಮಾಡತಕ್ಕಂತಹದ್ದು ಸರಿಯೇ? ಇದು ನಿಮಗೆ ಇರತಕ್ಕಂತಹ ಅನುಭವಕ್ಕೆ ಇನ್ನೂ ಸ್ವಲ್ಪ ಕಡಿಮೆಯಾಯಿತು ಅಂತ ನನಗನ್ನಿಸುತ್ತಿದೆ. ನನಗೆ ಗೊತ್ತಿದೆ ಯಾವಾಗ ವಿವರಣೆಯನ್ನು ಕೇಳುವುದಕ್ಕೆ ಅವಕಾಶ ಕೊಡಬೇಕೆಂಬುದು.

ಶ್ರೀ ಜಿ. ನಾರಾಯಣ ಕುಮಾರ್.— ಮಾನ್ಯ ಅಧ್ಯಕ್ಷರೇ ....

ಅಧ್ಯಕ್ಷರು.—ನಾನು ನಿಂತುಕೊಂಡಿರುವಾಗ ನೀವು ನಿಂತುಕೊಂಡಿರುವುದು ಕ್ರಮ ಅಲ್ಲ ಎಂಬುದು ಮೊದಲು ತಿಳಿದುಕೊಂಡರೆ ಎಲ್ಲಾ ಸರಿಹೋಗುತ್ತದೆ. ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಅವರ ಉತ್ತರ ಪೂರ್ತಿಯಾದ ಮೇಲೆ ವಿವರಣೆಯನ್ನು ಕೇಳುವುದಕ್ಕೆ ಮಾನ್ಯ ಸದಸರಿಗೆ ಅವಕಾಶ ಇದ್ದೇ ಇದೆ.

ಶ್ರೀ ಕೆ. ಶಿವಮೂರ್ತಿ.—ಅಧಿಕಾರಿಗಳು ಬರೆದುಕೊಟ್ಟದ್ದನ್ನು ಇಲ್ಲಿ ಬಂದು ಓದುತ್ತಿದ್ದಾರೆ ಅಷ್ಟೆ.

ಅಧ್ಯಕ್ಷರು.— ಉತ್ತರ ಬೇಡ ಎಂದರೆ ನಿಲ್ಲಿಸಿ ಬಿಡೋಣ. ಆದರೆ ಈ ರೀತಿ ಮಾಡುವುದು ಸರಿಯಲ್ಲ.

(ಗೊಂದಲ)

ಏನು ಇದು, ಪದೇಪದೇ ಎದ್ದು ನಿಲ್ಲುವುದು ಯಾವ ಸಂಪ್ರದಾಯ? ಶಾಸನ ಸಭೆಯಲ್ಲಿ ನಡೆದುಕೊಳ್ಳತಕ್ಕ ನಡವಳಿಕೆಯನ್ನು ಬೇರೆಯವರಿಗೆ ಕಲಿಸಬೇಕಾದ ಜನ ಹೀಗೆ ನಡೆದುಕೊಂಡರೆ ಸರಿಯಾಗುವುದಿಲ್ಲ. ಮುಖ್ಯ ಮಂತ್ರಿಗಳು ಉತ್ತರಿಸಿದ ಮೇಲೆ ಏನು ಕ್ಲಾರಿಫಿಕೇಷನ್ ಬೇಕು ಕೇಳಿ. ಇಡೀ ದಿವಸವನ್ನು ಅದಕ್ಕಾಗಿ ಇಡಲಾಗಿದೆ.

ಒಬ್ಬ ಮಾನ್ಯ ಸದಸ್ಯರು.— ಸಂಪ್ರದಾಯ ಶಿಷ್ಟಾಚಾರ ಹೇಳುವವರು, ಬೇಕಾದರೆ ಕೇಳಿ ಬೇಡವಾದರೆ ಹೋಗಿ ಎಂದು ಹೇಳುವುದು ಸರಿಯೇ?

ಅಧ್ಯಕ್ಷರು.— ಹೀಗೆ ನಡೆದುಕೊಳ್ಳುವುದು ಸರಿಯೆ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.— ಈ ರೀತಿ ಎದ್ದೆದ್ದು ಗಲಾಟೆ ಮಾಡಿದರೆ ಸಭೆ ನಡೆಯುತ್ತದೆಯೇ?

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ನಾನು ಇದುವರೆಗೆ ಯಾವುದೇ ರೀತಿಯ ರೋಪ್ ಮಾಡತಕ್ಕ ಮಾತನ್ನು ಆಡಿಲ್ಲ. ಆಡುವ ಪ್ರಸಂಗ ಬಂದರೆ ಆಡುತ್ತೇನೆ. ಅದಕ್ಕೇನು ಅನುಮತಿ ತೆಗೆದುಕೊಳ್ಳಬೇಕಾಗಿಲ್ಲ.

ಒಬ್ಬ ಮಾನ್ಯ ಸದಸ್ಯರು.— ಈಗ ಆಡಿಬಿಟ್ಟಿದ್ದಾರಲ್ಲ. ಅದಕ್ಕೆ ನಮ್ಮ ಅಬ್‌ಜಕ್ಷನ್............

(ಗೊಂದಲ)

ಅಧ್ಯಕ್ಷರು.— ಇದು ಏನು?

ಶ್ರೀ ರಾಮಕೃಷ್ಣ ಹೆಗಡೆ.— ಯಾವುದೇ ಚರ್ಚೆಯ ಪ್ರಮುಖ ನಿಯಮ ಏನೆಂದರೆ ಒಬ್ಬರು ಮಾತನಾಡುವಾಗ ಅದನ್ನು ಎಲ್ಲರೂ ಕೇಳಬೇಕು; ಅದಾದ ಮೇಲೆ ಪ್ರಶ್ನೆ ಇದ್ದರೆ ಕೇಳಬೇಕು. ಅವರಿಗೆ ಒಂದು ಸಾವಿರ ಪ್ರಶ್ನೆ ಇದ್ದರೂ ಕೇಳಲಿ, ಉತ್ತರ ಕೊಡುತ್ತೇನೆ. ಹೇಳಬೇಕಾದುದನ್ನು ಹೇಳಿ ಹಾಗೆಯೇ ಹೊರಟು ಹೋಗುತ್ತೇನೆಂದು ಭಾವಿಸಿದ್ದಾರೆಯೇ ?

ಶ್ರೀ ಎಂ ವೀರಪ್ಪಮೊಯಿಲಿ.— ಇಲ್ಲಿಯವರೆಗೆ ನಡೆದದ್ದು ಅಷ್ಟೇ.

ಶ್ರೀ ರಾಮಕೃಷ್ಣ ಹೆಗಡೆ. — ಎಲ್ಲಿ ಎಂದು ಆ ರೀತಿ ಆಗಿದೆ?

(ಗೊಂದಲ)

ಮೊಯಿಲಿಯವರು ಹೇಳಿದ ಹಾಗೆ ಮಾಡಲಿಕ್ಕೆ ನಾನು ಇಲೀನೂ ಅಲ್ಲ, ಮೊಯಿಲಿನೂ ಅಲ್ಲ.

ಶ್ರೀ ಎಸ್. ಬಂಗಾರಪ್ಪ.— ಹುಲಿಯಂತೂ ಅಲ್ಲವೇ ಅಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.— ಇಲಿಯೂ ಅಲ್ಲ, ಮೊಯಿಲಿಯೂ ಅಲ್ಲ ಅಂದರೆ ಬಹುಶಃ ದುಷ್ಟ ಕ್ರಿಮಿ ಇರಬಹುದು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಹಾಗಾದರೆ ಏನು ಎಂದು ಅರ್ಥವಾಗಲಿಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.— ನಾನು ಹೇಳುವುದನ್ನು ಬಂಗಾರಪ್ಪನವರು ಅರ್ಥ ಮಾಡಿಕೊಳ್ಳ ಬೇಕಾದರೆ ಇನ್ನೂ ಸ್ವಲ್ಪ ದಿವಸ ಬೇಕು.

ಶ್ರೀ ಎಸ್. ಬಂಗಾರಪ್ಪ — ಗುಳ್ಳೇನರಿ ಆದರೆ ಅರ್ಥ ಮಾಡಿಕೊಳ್ಳುವುದಕ್ಕೆ ಬಹಳ ದಿವಸ ಬೇಕು.

ಒಬ್ಬ ಮಾನ್ಯ ಸದಸ್ಯರು. — ಗುಳ್ಳೇನರಿ ಯಾರು?

(ಗೊಂದಲ)

ಅಧ್ಯಕ್ಷರು.— ಎಲ್ಲರೂ ಏತಕ್ಕೆ ನಿಂತುಕೊಂಡಿದ್ದೀರಿ; ಕುಳಿತುಕೊಳ್ಳಿ.

ಶ್ರೀ ಎಂ. ಎಸ್ ಕೃಷ್ಣನ್.— ಈ ಪದ ಪ್ರಯೋಗಗಳಲ್ಲಿ ಪಾರ್ಲಿಮೆಂಟರಿ ಯಾವುದು ಅನ್ ಪಾರ್ಲಿಮೆಂಟರಿ ಯಾವುದು ಎಂಬುದು ಪ್ರಶ್ನೆ ಅಲ್ಲ. ಪದಪ್ರಯೋಗ ಮಾಡುವಾಗ ಆ ಕಡೆಯವ ರಾಗಲೀ, ಈ ಕಡೆಯವರಾಗಲೀ ಯೋಚನೆ ಮಾಡಬೇಕು. ಇಲ್ಲಿ ನರಿ-ಗುಳ್ಳೆನರಿ ಎಂಬುದನ್ನೆಲ್ಲ ನಾವು ಎಂದೂ ಕೇಳಿರಲಿಲ್ಲ. ಅದು ಸಭೆಗೆ ಗೌರವತರತಕ್ಕದ್ದು ಅಲ್ಲ. ಆದ್ದರಿಂದ ದಯವಿಟ್ಟು ಅದನ್ನು ಕಡತದಿಂದ ತೆಗೆಸಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಅವರು ಮೊಯಿಲಿ ಅನ್ನಬಹುದೇ, ಅದಕ್ಕೆ ನಾವು ಗುಳ್ಳೇನರಿ ಅಂದೆವು.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್.— ಇಲಿಗಳಲ್ಲಿ ಸೊಂಡಿಲಿ ಮೂಗಿಲಿ ಅಂಥ ಹಲವಾರು ನಮೂನೆಯ ಇಲಿಗಳಿವೆ. ಆ ಪೈಕಿ ಮೊಯಿಲಿ ಯಾವುದು ಅಂಥ ಹೇಳಲಿಲ್ಲ.

ಶ್ರೀ ಎಸ್. ಬಂಗಾರಪ್ಪ.— ನರಿಗಳಲ್ಲಿ ಸಹಾ ಸಾದಾ ನರಿ ಇತ್ಯಾದಿ ಬೇರೆ ಬೇರೆ ತರಹದ ನರಿ ಗಳಿವೆ. ಆ ಪೈಕಿ ನಾನು ಗುಳ್ಳೇನರಿ ಎಂದು ಹೇಳಲಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.— ನಮ್ಮಲ್ಲಿ ಹೆಗ್ಗಣ ಎಂದು ಇದೆ. ಅದರಲ್ಲಿ ಇದು ಯಾವ ಹೆಗ್ಗಣ?

ಒಬ್ಬ ಮಾನ್ಯ ಸದಸ್ಯರು.— ಇಲಿಗಿಂತ ಹೆಗ್ಗಣ ದೊಡ್ಡದು. ಆ ಕಡೆ ಸದಸ್ಯರಿಗೆ ಸಭಾ ನಾಯಕರು ಉತ್ತರಿಸುವಾಗ ನಮ್ಮನ್ನಂತೂ ಕಂಟ್ರೋಲ್ ಮಾಡುವ ಹಕ್ಕು ಇದೆ. ಆದರೆ ಪದೇ ಪದೇ ಆ ಕಡೆ ಸದಸ್ಯರು ಮಾತನಾಡುವ ಪರಿಸ್ಥಿತಿಯಲ್ಲಿ........

(ಗೊಂದಲ)

ಶ್ರೀ ಭೀಮಣ್ಣ ಖಂಡ್ರೆ.— ಹಿರಿಯ ಸದಸ್ಯರಾಗಿ ತಾವೇ ಹೀಗೆ ಮಾತನಾಡಿದರೆ ಬೇರೆಯವರು ಹೇಗೆ ಮಾತನಾಡಬೇಕು?

ಅಧ್ಯಕ್ಷರು.— ಹೀಗೆ ಸಭೆಯನ್ನು ನಡೆಸಬೇಕೆಂಬುದು ಸದನದ ಎಲ್ಲ ಸದಸ್ಯರ ತೀರ್ಮಾನವಾದರೆ ಹಾಗೇ ನಡೆಯಲಿ.

ಕೆ.ಹೆಚ್. ರಂಗನಾಥ್.— ಸುಮ್ಮನೇ ಕೂತವರು ಬಹಳ ಜನರಿದ್ದಾರೆ. ಎಲ್ಲಾ ಸದಸ್ಯರು ಎಂದರೆ ನಾವೂ ಸೇರುತ್ತೇವೆ.

ಅಧ್ಯಕ್ಷರು.— ಸುಮ್ಮನೆ ಕೂತವರೂ ಸಹ ಇರುವುದರಿಂದ ನನಗೆ ಹೇಳುವುದಕ್ಕೆ ಅವಕಾಶ ಇದೆ. ಕರ್ನಾಟಕ ರಾಜ್ಯದ ಶಾಸನ ಸಭೆಗೆ ಅತ್ಯಂತ ಗೌರವ ಇದೆ. ಅದನ್ನು ಉಳಿಸಿಕೊಂಡು ಹೋಗಬೇಕೆಂದು ನನ್ನ ಪ್ರಾರ್ಥನೆ. ಈ ರೀತಿ ಲಘುವಾಗಿ ನಡೆದುಕೊಂಡು ಹೋದರೆ ಸಭೆ ನಡೆಸುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ. ಒಂದು ತೀರ್ಮಾನ ಆಗಬೇಕು. ಇದೇ ರೀತಿ ಚರ್ಚೆಯನ್ನು ನಡೆಸಬೇಕೆಂದು ಇದ್ದರೆ ಹೇಳಲಿ. ಏಕೆಂದರೆ ಇನ್ನು ಮುಂದೆ ಇದೇ ರೀತಿಯ ಪದ್ಧತಿಯನ್ನು ಅನುಸರಿಸೋಣ. ಯಾವುದೇ ಒಂದು ಪ್ರಚೋದನಾತ್ಮಕ ಶಬ್ದ ಬಳಸದೆ ಪುನಃ ಮಧ್ಯದಲ್ಲಿ ಎದ್ದುನಿಂತರೆ ಅದರ ಉದ್ದೇಶ ಸ್ಪಷ್ಟವಾಗುತ್ತದೆ, ಅದರಲ್ಲಿ ಏನಾದರೂ ಉದ್ದೇಶ ಅಡಗಿದೆ ಎಂದು. ನಾನು ಅಂಕಿ ಸಂಖ್ಯೆಗಳ ಸಮೇತ ಉತ್ತರ ಹೇಳುತ್ತಿದ್ದೇನೆ. ಬೇರೆಯವರ ಮೇಲೆ ಆರೋಪ ಅಥವಾ ಪ್ರಚೋದಾತ್ಮಕ ಶಬ್ದ ಬಳಸಿ ಓಡಿ ಹೋಗುವವನು ನಾನು ಅಲ್ಲ. ಹಾಗೆ ಓಡಿ ಹೋಗುವುದಕ್ಕೆ ನಾನು ಇಲಿಯೂ ಅಲ್ಲ, ಮೊಯಿಲಿಯೂ ಅಲ್ಲ ಎಂದು ಹೇಳಿದೆ. ನಾನು ಅವರಿಗೆ ಇಲಿ ಎಂದು ಕರೆದನೆ? ಅವರು ಹೆಗ್ಗಣ, ಗುಳ್ಳೆನರಿ ಅಂಥ ಬೇಕಾದರೆ ಕರೆಯಲಿ; ಆ ರೀತಿ ಕರೆದರೆ ನಾನೇನೂ ಅದು ಆಗುವುದಿಲ್ಲ. ಅವರು ಮೊಯಿಲಿ ಅಲ್ಲದೆ ಬೇರೆ ಆಗಿದ್ದರೆ ಆ ಮಾತು ಬೇರೆ.

ಶ್ರೀ ಎಂ.ಎಸ್. ಕೃಷ್ಣನ್. — ಬಂಗಾರಪ್ಪನವರು ರಣಹದ್ದು, ಗುಳ್ಳೆನರಿ ಎಂದೆಲ್ಲ ಕರೆದರು. ನಾಳೆ ಇನ್ನು ಏನು ಕರೆಯುತ್ತಾರೆ ನೋಡಬೇಕು.

ಶ್ರೀ ಎಸ್. ಬಂಗಾರಪ್ಪ.— ಅವರು ಹಿಂದೆ ರಣಹದ್ದು ಎಂಬ ಪದ ಪ್ರಯೋಗ ಮಾಡಿದ್ದರಿಂದ, ಅವರ ಪದ ಪ್ರಯೋಗವನ್ನೇ ಹಿಂದಕ್ಕೆ ಕೊಟ್ಟಿದ್ದೇನೆ. ನನಗೆ ಅಂಥ ಪದಗಳನ್ನು ಉಪಯೋಗಿಸುವ ರೂಢಿ ಇಲ್ಲ. ಅವರು ಉಪಯೋಗ ಮಾಡಿದ್ದರಿಂದ ನಾನು ಉಪಯೋಗ ಮಾಡಬೇಕಾಯಿತು.

ಶ್ರೀ ರಾಮಕೃಷ್ಣ ಹೆಗಡೆ — ಉಪಯೋಗ ಮಾಡಿ, ಚಿಂತೆ ಇಲ್ಲ. ದೆಹಲಿಯಿಂದ ರಣಹದ್ದು ಬಂದಿವೆ ಎಂದು ಹೇಳಿದೆ, ಆ ರೀತಿ ಹೇಳಬಹುದು; ಅದರಲ್ಲೇನು ತಪ್ಪಿದೆ.

ಶ್ರೀ ಎಸ್. ಬಂಗಾರಪ್ಪ.— ಡೆಲ್ಲಿಯಿಂದ ರಣಹದ್ದು ಬಂದಿವೆ ಎಂದು ಹೇಳಬಹುದೆ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಡೆಲ್ಲಿಯಿಂದ ರಣಹದ್ದುಗಳು ಬಂದಿತ್ತು ಎಂದು ಹೇಳಬಹುದೇ ಯಾರು ಆ ರಣಹದ್ದುಗಳು?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರಿಗೆ ನಾನು ಗುಳ್ಳೆ ನರಿಯ ತರಹವೋ ಪಿಳ್ಳೇ ನರಿಯ ತರಹವೋ ಕಂಡರೆ ಅವರು ತಮ್ಮ ಕನ್ನಡಕವನ್ನು ಬದಲಾಯಿಸಿ ಕೊಳ್ಳಲಿ. ಅಥವಾ ಹೆಗ್ಗಣದಂತೆ ಕಂಡರೆ ಅವರ ಕನ್ನಡಕವನ್ನು ಬದಲಾಯಿಸಿಕೊಂಡು ಹೊಸ ಕನ್ನಡಕ ಹಾಕಿಕೊಳ್ಳಲಿ.

ಶ್ರೀ ಎಸ್. ಬಂಗಾರಪ್ಪ.—ಮೊದಲು ನಿಮ್ಮ ರೂಪ ಬದಲಾವಣೆ ಮಾಡಿಕೊಂಡರೆ ಒಳ್ಳೆಯದು.

ಶ್ರೀ ರಾಮಕೃಷ್ಣ ಹೆಗಡೆ.— ನನ್ನ ರೂಪ ನೀವು ಕೊಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ.— ನನ್ನ ಕನ್ನಡಕ ನೀವು ಕೊಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.— ನಾನು ಏತಕ್ಕೆ ಕೊಡಲಿ?

ಶ್ರೀ ಎಸ್. ಬಂಗಾರಪ್ಪ.— ನಿಮ್ಮ ರೂಪ ನಾನು ಏತಕ್ಕೆ ಕೊಡಲಿ?

ಶ್ರೀ ರಾಮಕೃಷ್ಣ ಹೆಗಡೆ.— ನೀವು ಏತಕ್ಕೆ ಹೇಳಿದಿರಿ?

ಶ್ರೀ ಎಸ್. ಬಂಗಾರಪ್ಪ.— ನೀವು ಏತಕ್ಕೆ ಹೇಳಿದಿರಿ?

ಶ್ರೀ ರಾಮಕೃಷ್ಣ ಹೆಗಡೆ.— ಯಾರಯಾರ ರೂಪ ಏನು ಎಂಬುದನ್ನು ಜನರೇ ತೀರ್ಮಾನ ಮಾಡಿದ್ದಾರೆ. ಅದರ ಬಗ್ಗೆ ಹಿಂದೆ ಮುಂದೆ ನೋಡಬೇಕಾದ್ದಿಲ್ಲ. ಮಾನ್ಯ ಅಧ್ಯಕ್ಷರೇ, ನಮ್ಮ ರಿಸೋರ್ಸ್ ಮೊಬಲೈಸೇಷನ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಇದರಲ್ಲಿ ಮುಖ್ಯವಾಗಿ ಮೂರು ಬಾಬುಗಳು, ಆದಾಯದ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕೆ ಲಭ್ಯವಿದೆ. ಮೊದಲನೆಯದು ಮಾರಾಟ ತೆರಿಗೆ. ಎರಡನೆಯದು ಎಕ್ಸೈಜ್ ಡ್ಯೂಟಿ. ಮೂರನೆಯದು ಮೋಟಾರು ವಾಹನಗಳ ಮೇಲಿನ ತೆರಿಗೆ. ಈ ತೆರಿಗೆಗಳಲ್ಲಿ ಮೂರು ವರ್ಷಗಳಲ್ಲಿ ಬಂದಂಥ ವರಮಾನದ ತುಲನಾತ್ಮಕ ಅಂಕಿ ಸಂಖ್ಯೆಗಳನ್ನು ನಾನು ಇಲ್ಲಿ ಕೊಡಬಯಸುತ್ತೇನೆ. ಮಾರಾಟ ತೆರಿಗೆಯಲ್ಲಿ 1981ನೇ ಇಸವಿಯಲ್ಲಿ 300 ಕೋಟಿ ರೂಪಾಯಿಗಳು ಬಂದರೆ 1982ರಲ್ಲಿ 322ಕೋಟಿ, 1983ರಲ್ಲಿ 379 ಕೋಟಿ ಬಂದಿದೆ. ಅಂದರೆ 1981ಕ್ಕಿಂತ 82ನೇ ಇಸವಿಯಲ್ಲಿ 7 ಪರ್ಸೆಂಟ್ ಹೆಚ್ಚಾಗಿದ್ದರೆ, 1983ರಲ್ಲಿ 18 ಪರ್ಸೆಂಟ್ ಹೆಚ್ಚಾಗಿದೆ. ಇದು ಆದಾಯದಲ್ಲಾಗಿರುವ ಹೆಚ್ಚುವರಿ. ಎಕ್ಸೈಜ್ ಡ್ಯೂಟಿಯಲ್ಲಿ 1981ರಲ್ಲಿ 117 ಕೋಟಿ ಇದ್ದರೆ 1982ರಲ್ಲಿ 124 ಕೋಟಿ ಇದ್ದು 1983ರಲ್ಲಿ 144 ಕೋಟಿ ಇದೆ. 1982ನೇ ಇಸವಿ

ಯಲ್ಲಿ ಹಿಂದಿನ ವರ್ಷಕ್ಕಿಂತ ಶೇಕಡ 6ರಷ್ಟು ಹೆಚ್ಚಾಗಿದ್ದರೆ 1983ರಲ್ಲಿ 1982ಕ್ಕಿಂತ 16 ಪರ್ಸೆಂಟ್ ಹೆಚ್ಚಾಗಿದೆ. ಮೋಟಾರು ವಾಹನಗಳ ತೆರಿಗೆಯಲ್ಲಿ 1981ರಲ್ಲಿ 52 ಕೋಟಿ, 1982ರಲ್ಲಿ 55 ಕೋಟಿ ಮತ್ತು 1983ರಲ್ಲಿ, 75 ಕೋಟಿ ಬಂದಿವೆ. ಅಂದರೆ 1982ನೇ ಇಸವಿಯಲ್ಲಿ 1981ಕ್ಕಿಂತ ಶೇಕಡ ಆರು ಪರ್ಸೆಂಟ್ ಹೆಚ್ಚಾಗಿದ್ದರೆ 83ರಲ್ಲಿ 82ಕ್ಕಿಂತಲೂ ಶೇಕಡ 36ರಷ್ಟು ಹೆಚ್ಚಾಗಿದೆ. ಸರ್ಕಾರಿ ಕರ್ಮಚಾರಿಗಳಿಗೆ ನಾವು ಒಂದು ವರ್ಷದಲ್ಲಿ ಕೊಟ್ಟ ಕೆಲವು ಅನುಕೂಲತೆ ಅಥವಾ ಪರಿಹಾರ ಏನು ಎಂಬುದನ್ನು ಹೇಳಬಯಸುತ್ತೇನೆ.

1) Grant of Five instalments of D.A;

2) Revision of rates of C C.A;

3) Revision of Rates of fixed Travelling Allowance;

4) Reclassification of Cities and Towns in the basis of 1981 Census for the purpose of HRA & CCA;

5) Extension of benefit of UGC Scales of pay, AICT Scales of pay to the teaching staff of the Universities, Engineering Colleges with retrrospective effect;

6) Extension of Liberalised Pension formula to Government Employees who have retired from service on or before 1-1-1982; ಕನಿಷ್ಠ ನಿವೃತ್ತಿ ವೇತನವನ್ನು 220 ರೂಪಾಯಿಗಳಿಂದ 240ಕ್ಕೆ ಏರಿಸಿದ್ದು.

7) Liberalisation of the Scheme of Time-bound Advancement;

8) Discontinuing of the requirement of acquisition of the Academic and Technical qualification.

9) Grant of incentives to Typist and Stenographers for acquisition of Kannada Typewriting and Short-hand qualifications.

ಮಾನ್ಯ ಅಧ್ಯಕ್ಷರೆ, ಹರಿಜನ ಗಿರಿಜನರಿಗೆ ಎನ್‌ಕ್ರೋಚ್‌ಮೆಂಟ್ ಆದುದರಲ್ಲಿ ಎಷ್ಟು ರೆಗ್ಯುಲರೈಸ್ ಮಾಡಿದ್ದೀರಿ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ 1983ನೇ ಇಸವಿಯಲ್ಲಿ 25,773 ಎಕರೆ ಜಮೀನು ಎನ್‌ಕ್ರೋಚ್‌ಮೆಂಟ್ ಆದುದ್ದನ್ನು 18,391 ಜನ ಹರಿಜನ ಗಿರಿಜನರಿಗೆ ರೆಗ್ಯುಲರೈಸ್ ಮಾಡಿದ್ದೇವೆ. ಮತ್ತೊಂದು ವಿಚಾರ ಇಲ್ಲಿ ತೀವ್ರ ಟೀಕೆಗೆ ಒಳಗಾಗಿದ್ದು ಎಂದರೆ ಬೆಲೆಗಳ ವಿಚಾರ. ನಿಜ. ಅಗತ್ಯ ಜೀವನದ ಬಳಕೆಯ ವಸ್ತುಗಳ ಬೆಲೆ ಹೆಚ್ಚಾಗಿದೆ. ನಾನು ಹಿಂದೆಯೇ ಒಂದು ಸಾರಿ ಈ ಸಭೆಯಲ್ಲಿ ಹೇಳಿದ್ದೇನೆ. ರಾಜ್ಯ ಸರ್ಕಾರದ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದಲ್ಲ, ವಾಸ್ತವವಾದ ವಿಚಾರ ಹೇಳಿದ್ದೇನೆ ಬೆಲೆ ಏರಿಕೆಗೆ ಕೇವಲ ಒಂದು ರಾಜ್ಯ ಸರ್ಕಾರ ಕಾರಣವಾಗುವುದಿಲ್ಲ. ಮತ್ತು ಬೆಲೆ ಏರಿಕೆಯನ್ನು ಹತೋಟಿಯಲ್ಲಿಡತಕ್ಕ ಸಂಪೂರ್ಣವಾದ ಅಧಿಕಾರ ಕೂಡ ರಾಜ್ಯ ಸರ್ಕಾರದ ಕೈಯಲ್ಲಿಲ್ಲ. ಬೆಲೆ ಏರಿಕೆಗೆ ಅನೇಕ ಅಂಶಗಳು ಅವಲಂಬಿಸಿವೆ. ನಾನು ಈ ವಿಚಾರದಲ್ಲಿ ಹೆಚ್ಚಿನ ವಿವರಕ್ಕೆ ಹೋಗುವುದಿಲ್ಲ. ನಾನು ಹಿಂದೆಯೇ ಹೇಳಿದಂತೆ ಬೆಲೆ ಏರಿಕೆ ವಿಚಾರದಲ್ಲಿ ಒಂದು ಶ್ವೇತಪತ್ರವನ್ನು ಈ ಅಧಿವೇಶನ ಮುಗಿಯುವುದರೊಳಗಾಗಿ ಸದನದ ಮುಂದೆ ಇಡಬೇಕೆಂಬ ನಿರ್ಧಾರ ಮಾಡಿದ್ದೇನೆ. ಬೆಲೆ ಏರಿಕೆಗೆ ಪ್ರಬಲವಾದ ಕಾರಣ, ಬೇಡಿಕೆ ಮತ್ತು ಪೂರೈಕೆಗಳ ಸಂಬಂಧ, ಉತ್ಪಾದನೆ, ಎಕ್ಸ್‌ಪೋರ್ಟ್ ಮತ್ತು ಇಂಪೋರ್ಟ್ ನೀತಿ ಬಿಟ್ಟು ಮುಖ್ಯವಾದ ಕಾರಣ ಹಣದ ಪೂರೈಕೆ. 1976-77ರಲ್ಲಿ 27,700 ಕೋಟಿ ರೂಪಾಯಿ ಹಣದ ಪೂರೈಕೆ ನಮ್ಮ ದೇಶದಲ್ಲಿದ್ದರೆ 1982–83ರಲ್ಲಿ ಅದು 72 ಸಾವಿರ ಕೋಟಿ ರೂಪಾಯಿಗೆ ಹೋಯಿತು. 27 ಸಾವಿರ ಕೋಟಿ ಎಲ್ಲಿ ? 72 ಸಾವಿರ ಕೋಟಿ ಎಲ್ಲಿ ? ಇದರ ಒಂದು ಪ್ರತ್ಯಕ್ಷ ಪರಿಣಾಮವೋ ಎನ್ನುವಂತೆ 1976-77ರಲ್ಲಿ Index of wholesale Prices (All India) 176 6 ಇದ್ದರೆ 1983ರಲ್ಲಿ ಅದು 317ಕ್ಕೆ ಏರಿದೆ. 176 ರಿಂದ 1983 ರಲ್ಲಿ 317ಕ್ಕೆ ಅದು ಏರಿದೆ. ಕಳೆದ ವರ್ಷ ಅಭಾವ ಪೀಡಿತ ಪ್ರದೇಶವೆಂದು ಮಾನ್ಯ ಸದಸ್ಯರಿಗೆ ಗೊತ್ತುಂಟು. ಅದರಿಂದಲೂ ಕೂಡಾ ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ, ಅದರ ಭೀಕರ ಪರಿಣಾಮ ವಿವಿಧ ವಸ್ತುಗಳ ಬೆಲೆಗಳ ಮೇಲೂ ಕೂಡಾ ಆಗಿದೆ. ಮಾನ್ಯ ಬಂಗಾರಪ್ಪನವರು ಭಾಷಣ ಮಾಡುತ್ತಾ ಒಂದು ತೆಂಗಿನ ಕಾಯಿಯ ಬೆಲೆ 6 ರೂಪಾಯಿ ಆಗಿದೆ ಎಂದು ಹೇಳಿದರು. ಮಾನ್ಯ ಬಂಗಾರಪ್ಪನವರು ನಮ್ಮ ಸ್ಥಿತಿಗೆ ಹೊಸಬರೇನೂ ಅಲ್ಲ. ಅವರು ಬೆಂಗಳೂರಿನಿಂದ ತಮ್ಮ ಊರಿಗೆ ಹೋಗುವಾಗ ಅಥವಾ ಬೆಂಗಳೂರಿನಿಂದ ಮೈಸೂರಿಗೆ ಹೋಗುವಾಗ ದಾರಿಯಲ್ಲಿ ಹೋದವರ್ಷ ಅವರು ದಾರಿಯಲ್ಲಿ ಏನಾದರೂ ಆ ಕಡೆ ಈ ಕಡೆ ನೋಡಿದ್ದಾರೇನೋ ಗೊತ್ತಿಲ್ಲ. ಮಳೆಯ ಅಭಾವದಿಂದ

ತೆಂಗಿನ ತೋಟಗಳೆಲ್ಲಾ ಒಣಗಿ ನಿಂತಿದ್ದ ಪರಿಸ್ಥಿತಿ ಇತ್ತು. ಇದರಿಂದಾಗಿ ಅನೇಕ ತೆಂಗಿನ ಮರಗಳು ಸತ್ತೇ ಹೋದವು. ತೆಂಗಿನಕಾಯಿಯನ್ನು ನಾವು ಹೊರಗಡೆಯಿಂದ ಆಮದು ಮಾಡಿಕೊಳ್ಳತಕ್ಕ ಸ್ಥಿತಿಯಲ್ಲಿ ಇಲ್ಲ. ಕೆಲವು ಕಡೆ ಸಿಗಬಹುದು. ಆದರೆ ನಾವು ಅಮೇರಿಕಾದಿಂದ ಗೋಧಿಯನ್ನು, ಕ್ಯೂಬಾದಿಂದ ಸಕ್ಕರೆಯನ್ನು ತರಿಸುವ ಹಾಗೆ ತೆಂಗಿನಕಾಯಿಯನ್ನು ಅಮೇರಿಕಾದಿಂದ ಆಮದು ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ತೆಂಗಿನ ಬೆಲೆ ಏರಿರುವುದು ಕೇವಲ ತಾತ್ಕಾಲಿಕವೆಂದು ನನ್ನ ನಂಬಿಕೆ. ಈ ವರ್ಷ ಸಾಕಷ್ಟು ಪ್ರಮಾಣದಲ್ಲಿ ಮಳೆ ಆಗಿರುವುದರಿಂದ ಒಂದೇ ಸಲ ಒಂದಿಷ್ಟು ಬೆಳೆ ನಮಗೆ ಬಾರದಿದರೂ ಕೂಡ ಹೋದ ವರ್ಷಕ್ಕಿಂತಲೂ ಉತ್ತಮವಾದ ಫಸಲು ಆಗಬಹುದೆಂದು ನಾನು ಆಸೆ ಪಡುತ್ತೇನೆ.

ಶ್ರೀ ಎಸ್. ಚಿಕ್ಕೇಗೌಡ.— ಪೌಡರ್ ಮಾಡಿ ರಫ್ತು ಮಾಡುತ್ತಿದ್ದಾರೆಂದು ತಿಳಿದುಬಂದಿದೆ.

ಶ್ರೀ ರಾಮಕೃಷ್ಣ ಹೆಗಡೆ.— ಅದು ಹೌದು, ಅದೂ ಒಂದು ಕಾರಣ ಇದೆ. ಈ ವಿಚಾರವನ್ನು ನಾನು ರಾವ್‌ಬೀರೇಂದರ್ ಸಿಂಗ್ ಅವರ ಹತ್ತಿರ ಮಾತನಾಡಿದ್ದೇನೆ. ಕೋಕನಟ್ ಪೌಡರ್ ಮಾಡಿ ಅದನ್ನು ರಫ್ತಾಕ್ಕೆ ಕಳುಹಿಸಲಾಗುತ್ತಿದೆ.

ಇನ್ನು ನಾವು ಅಧಿಕಾರಕ್ಕೆ ಬಂದಾಗ ನಮ್ಮ ರಾಜ್ಯ ಹಾಗೂ ಸುತ್ತಮುತ್ತಲ ರಾಜ್ಯದಲ್ಲಿ ಏನು ಬೆಲೆಗಳು ಇದ್ದುವು ಅವು ಯಾವ ಪ್ರಮಾಣದಲ್ಲಿ ಏರಿವೆ ಎಂಬ ಬಗ್ಗೆ ಸದನದ ಗಮನಕ್ಕೆ ತರಬೇಕಾಗಿದೆ. ಈ ಬಗ್ಗೆ ನನ್ನಲ್ಲಿ 1983ರ ಜನವರಿಯಿಂದ ಸೆಪ್ಟಂಬರ್ ತಿಂಗಳವರೆಗಿನ ಮಾಹಿತಿ ನನ್ನ ಹತ್ತಿರ ಇದೆ. ಇದು ಕೇಂದ್ರ ಸರ್ಕಾರದ ಕೃಷಿ ಇಲಾಖೆಯವರು ತಯಾರಿಸಿದ ಅಂಕಿಸಂಖ್ಯೆ. ಜನವರಿಯಿಂದ ಸೆಪ್ಟಂಬರ್ ವರೆಗೆ ಅಕ್ಕಿಯ ಬೆಲೆ ಕರ್ನಾಟಕದಲ್ಲಿ 370 ರೂಪಾಯಿ ಇದ್ದರೆ, ಮಹಾರಾಷ್ಟ್ರದಲ್ಲಿ 320 ರೂಪಾಯಿ, ಕೇರಳದಲ್ಲಿ 434 ರೂಪಾಯಿ, ತಮಿಳುನಾಡಿನಲ್ಲಿ 495 ರೂಪಾಯಿ ಇತ್ತು. ಈ ಎಲ್ಲಾ 4 ರಾಜ್ಯಗಳಲ್ಲಿ ಅತ್ಯಂತ ಕಡಿಮೆ ಬೆಲೆ ಇದೆ. ಅದು ಆಗಸ್ಟ್ ತಿಂಗಳಲ್ಲಿ 288 ರೂಪಾಯಿ ಇದ್ದದ್ದು ಸೆಪ್ಟಂಬರ್‌ನಲ್ಲಿ ಕಡಿಮೆ ಆಗಿದೆ. ನಮ್ಮ ರಾಜ್ಯದಲ್ಲಿ ಆಗಸ್ಟ್ ತಿಂಗಳಲ್ಲಿ 345 ರೂಪಾಯಿ ಇದ್ದದ್ದು ಸೆಪ್ಟಂಬರ್‌ನಲ್ಲಿ 370 ರೂಪಾಯಿ ಆಗಿದೆ. ಕೇರಳ ಮತ್ತು ತಮಿಳುನಾಡುಗಳಲ್ಲಿ ಕರ್ನಾಟಕಕ್ಕಿಂತ ಹೆಚ್ಚು ಬೆಲೆ ಇದೆ. ನಂತರ ರಾಗಿ ಬಗ್ಗೆ ಹೇಳುವುದಾದರೆ, ಈ 9 ತಿಂಗಳ ಅವಧಿಯಲ್ಲಿ ತಮಿಳುನಾಡಿನಲ್ಲಿ ಶೇಕಡ 19ರಷ್ಟು ಬೆಲೆ ಏರಿಕೆಯಾಗಿದೆ; ಮಹಾರಾಷ್ಟ್ರದಲ್ಲಿ 16 ಪರ್ಸೆಂಟ್, ಕರ್ನಾಟಕದಲ್ಲಿ 15 ಪರ್ಸೆಂಟ್ ಬೆಲೆ ಏರಿಕೆ ಆಗಿದೆ. ತಮಗೆ ಗೊತ್ತಿರುವಹಾಗೆ ಆಂಧ್ರದಲ್ಲಿ ರಾಗಿಯನ್ನು ಉಪಯೋಗಿಸುವುದಿಲ್ಲ. ಇನ್ನು ಜೋಳದ ಬಗ್ಗೆ ಹೇಳುವುದಾದರೆ, ಈ 9 ತಿಂಗಳಲ್ಲಿ ಮಹಾರಾಷ್ಟ್ರದಲ್ಲಿ 210 ರೂಪಾಯಿ, ತಮಿಳುನಾಡಿನಲ್ಲಿ 191 ರೂಪಾಯಿ, ಕರ್ನಾಟಕದಲ್ಲಿ 182 ರೂಪಾಯಿ, ಆಂಧ್ರದಲ್ಲಿ 152 ರೂಪಾಯಿ ಇದೆ. ಈ 9 ತಿಂಗಳಲ್ಲಿ ಒಟ್ಟು ನಾವು ತೆಗೆದುಕೊಂಡಾಗ ಮಹಾರಾಷ್ಟ್ರದಲ್ಲಿ ಶೇಕಡಾ 26, ಆಂಧ್ರದಲ್ಲಿ ಶೇಕಡಾ 15, ಕರ್ನಾಟಕದಲ್ಲಿ ಶೇಕಡಾ 12.88ರಷ್ಟು ಬೆಲೆ ಹೆಚ್ಚಾಗಿದೆ. ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಚರ್ಚೆ ಮಾಡುವಾಗ ನಾನು 1978—79 ಹಾಗೂ 1983—84ರ ಅವಧಿಯ ಒಂದು ಇನ್‌ಡೆಕ್ಸ್ ಏನಿದೆ ಅದರ ಬಗ್ಗೆ ಪ್ರಸ್ತಾಪ ಮಾಡಬೇಕಾಗುತ್ತದೆ. ಕಲ್ಲಿದ್ದಲ ಬಗ್ಗೆ 1978—79ರಲ್ಲಿ ಇಂಡೆಕ್ಸ್ 212.2 ಇದ್ದರೆ ಇದು 1883—84ರಲ್ಲಿ 512.7 ಆಗಿದೆ. ಎಂದರೆ ಶೇಕಡಾ 141ರಷ್ಟು ವೃದ್ಧಿ. ಪೆಟ್ರೋಲ್—1978—79ರಲ್ಲಿ 299.1 ಇದ್ದರೆ 1983—84ರಲ್ಲಿ 519.5 ಆಗಿದೆ. ಎಂದರೆ ಶೇಕಡಾ 73ರಷ್ಟು ವೃದ್ಧಿಯಾಗಿದೆ. ಸೀಮೆಎಣ್ಣೆ ಬಗ್ಗೆ ಹೇಳುವುದಾದರೆ 1978—79ರಲ್ಲಿ 235 ಇದ್ದರೆ ಅದು 1983—84ರಲ್ಲಿ 342 ಆಗಿದೆ. ಎಂದರೆ ಶೇಕಡಾ 45 70 ವೃದ್ಧಿಯಾಗಿದೆ. ಸಿಮೆಂಟ್ ಬಗ್ಗೆ ಹೇಳುವುದಾದರೆ 1978—79ರಲ್ಲಿ 196.7 ಇದ್ದರೆ 1983—84ರಲ್ಲಿ 416.2 ಆಗಿದೆ. ಎಂದರೆ ಶೇಕಡಾ 111 70 ವೃದ್ಧಿಯಾಗಿದೆ. ಇನ್ನು ಕೋಕ್ ಬಗ್ಗೆ ಹೇಳುವುದಾದರೆ, ಇದು 1978—79ರಲ್ಲಿ 224.3 ಇದ್ದರೆ 1983-84ರಲ್ಲಿ 463.5 ಎಂದರೆ ಶೇಕಡಾ 106ರಷ್ಟು ವೃದ್ಧಿಯಾಗಿದೆ. ಸ್ಟೀಲ್ 1978-79ರಲ್ಲಿ 241.6 ಇದ್ದರೆ 1983—84ರಲ್ಲಿ 493.7 ಆಗಿದೆ. ಎಂದರೆ ಶೇಕಡಾ 104ಕ್ಕಿಂತಲೂ ಹೆಚ್ಚು ಹೆಚ್ಚಳವಾಗಿದೆ. ಇವೊತ್ತು ಕರ್ನಾಟಕ ನಮ್ಮ ಭಾರತದ ಒಂದು ಭಾಗ, ಆದ್ದರಿಂದ ಇಡೀ ದೇಶದಲ್ಲಿ ಏನು ಪರಿಸ್ಥಿತಿ ಇರುತ್ತದೆಯೋ ಆ ಪರಿಸ್ಥಿತಿಯ ಪ್ರಭಾವ ಕರ್ನಾಟಕದ ಮೇಲೆ ಆಗತಕ್ಕಂತಾದ್ದು ಸ್ವಾಭಾವಿಕ. ನಾನು ನಮ್ಮ ಪ್ರಧಾನ ಮಂತ್ರಿಗಳ ಹಾಗೆ price rise is the global phenomenon ಎಂದು ಹೇಳುವುದಿಲ್ಲ, ಅಥವಾ ಅವರು ಈ ರೀತಿ ಹೇಳಿದ ಹಾಗೆ price rise is a sign of progress ಎಂದು ಕೂಡ ಹೇಳುವುದಿಲ್ಲ. ನನಗೆ ಚಿಂತೆ ಏನು ಅಂದರೆ ಇದರಿಂದ ಸಾಮಾನ್ಯ ಜನರಿಗೆ ತುಂಬಾ ತೊಂದರೆಯಾಗಿದೆ. ಇದರ ಬಗ್ಗೆ ಪ್ರತ್ಯೇಕವಾದಂಥ ಮುಖ್ಯಮಂತ್ರಿಗಳ ಒಂದು ಸಭೆಯನ್ನು ಕರೆಯಬೇಕೆಂದು ಪ್ರಧಾನ ಮಂತ್ರಿಗಳಿಗೆ ಕೂಡ ಸೂಚನೆ ಮಾಡಿದೆ. ಆ ರೀತಿ ಏನಾದರೂ ಮೀಟಿಂಗ್ ಅವರು ಕರೆದರೆ ನಮ್ಮ ವ್ಯವಸಾಯದ ಉತ್ಪನ್ನಗಳು ಅಂದರೆ ಅಗ್ರಿಕಲ್ಚರಲ್ ಕಮಾಡಿಟೀಸ್, ಎಕ್ಸ್‌ಪೋರ್ಟ್ ಇಂಪೋರ್ಟ್ ಮತ್ತು ಅದಕ್ಕೆ ಸಂಬಂಧಪಟ್ಟಂತಹ ನೀತಿ ನಾವು ಹೇಳುವುದನ್ನು ಹೇಳುವುದಿಲ್ಲ. ಮನಿ ಸಪ್ಲೈ ಎಷ್ಟರಮಟ್ಟಿಗೆ ಹತೋಟಿಯಲ್ಲಿರಬೇಕು, ಮತ್ತು ಇದಕ್ಕಿಂತಲೂ ದೊಡ್ಡ ಸಮಸ್ಯೆ ಅಂದರೆ ಈ

ಅಡ್ಮಿನಿಸ್ಟರ್ಡ್ ಪ್ರೈಸ್ ಈ ಎಲ್ಲಾ ವಿಚಾರ ಕರಿತು ಚರ್ಚೆ ಮಾಡಬಹುದು. ಬಹುಶಃ ನಮ್ಮ ಸೂಚನೆಗಳನ್ನು ಅವರು ತಗೆದುಕೊಂಡು ಒಂದು ತೀರ್ಮಾನಕ್ಕೆ ಬರಬಹುದು ಎಂದು ನಮ್ಮ ವಿಶ್ವಾಸ. ಆ ರೀತಿ ಅವರು ಮಾಡುತ್ತಾರೆಂದು ನಾನು ಭಾವಿಸಿದ್ದೇನೆ. ಈಗ ಬಹಳಷ್ಟು ಮೂಲಭೂತವಾದಂಥ ಕೈಗಾರಿಕೆಗಳು ನಮ್ಮ ಸರ್ಕಾರಿ ವಲಯದಲ್ಲಿ ಇವೆ. ಸರ್ಕಾರಿ ವಲಯದಲ್ಲಿ ನಡೆಯುತಕ್ಕ ಕೈಗಾರಿಕೆಗಳು, ಅದಕ್ಕೆ ಬೇರೆ ಕಾರಣ ಇರಬಹುದು. ಒಂದೇ ಕಾರಣ ಇಂಥಾದ್ದು ಎಂದು ಹೇಳುವುದಿಲ್ಲ. ಕಚ್ಚಾ ಸಾಮಗ್ರಿ ಬೆಲೆ ಹೆಚ್ಚು ಆದಾಗ ಫಿನಿಷ್ಡ್ ಪ್ರಾಡೆಕ್ಟ್ ಬೆಲೆ ಹೆಚ್ಚು ಮಾಡಬೇಕಾಗುತ್ತದೆ. ಜನರಲ್ ಪ್ರೈಸ್ ರೈಸ್ ಆದಾಗ ಡಿ. ಎ. ಹೆಚ್ಚು ಮಾಡಬೇಕಾಗುತ್ತದೆ. ಹೀಗೆ ಯಾವುದೇ ಒಂದು ಕೇಂದ್ರ ಸರ್ಕಾರದ ಕಕ್ಷೆಯಲ್ಲಿರತಕ್ಕ ಒಂದು ಕೈಗಾರಿಕ ನಷ್ಟವನ್ನು ಅನುಭವಿಸಿದರೆ ಅದರ ಪ್ರತ್ಯೇಕವಾದ ಪರಿಣಾಮ, ಅವರು ಯಾವ ವಸ್ತುವನ್ನು ಉತ್ಪಾದನೆ ಮಾಡುತ್ತಾರೆ ಅದರ ಮೇಲೆ ಆಗುತ್ತದೆ. ಕೈಗಾರಿಕೆಯವರು ಅದರ ಬಗ್ಗೆ ಹಿಂದೆ ಮುಂದೆ ನೋಡುವುದಿಲ್ಲ. ಯಾವುದೇ ಕಾರಣದಿಂದ ನಷ್ಟವಾಗಿರಲಿ ಅದು ಮಿಸ್‌ಮ್ಯಾನೇಜ್‌ಮೆಂಟ್‌ನಿಂದ ಆಗಿರಲಿ ಅಥವಾ ಸಿಕ್ಕಾಪಟ್ಟೆ ಖರ್ಚುಮಾಡುವುದರಿಂದ ಆಗಿರಲಿ ಯಾವುದೇ ಕಾರಣದಿಂದ ಆಗಿದ್ದರೂ ಅವರು ಒಂದೇ ಒಂದು ಉಪಾಯ ಯೋಚನೆ ಮಾಡುವುದು ಏನೆಂದರೆ, ಅವರು ತಯಾರು ಮಾಡಿದಂಥ ಫಿನಿಷ್ಡ್ ಪ್ರಾಡಕ್ಟ್ ಬೆಲೆ ಇದ್ದಕ್ಕಿದ್ದ ಹಾಗೆ ಹೆಚ್ಚು ಮಾಡುವುದು. ಅದರ ಮೇಲೆ ರಾಜ್ಯಸರ್ಕಾರದ ಯಾವುದೇ ನಿಯಂತ್ರಣ ಇಲ್ಲ. ಅಷ್ಟೇ ಅಲ್ಲ, ಪ್ರಭಾವ ಕೂಡ ಇಲ್ಲ. ನಮ್ಮ ದೇಶದಲ್ಲಿ ಇಷ್ಟೊಂದು ತೀವ್ರವಾಗಿ ಬೆಲೆಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರತಕ್ಕ ಸಮಸ್ಯೆಗಳ ಬಗ್ಗೆ ರಾಷ್ಟ್ರಮಟ್ಟದಲ್ಲಿ ನಾವು ಗಂಭೀರವಾಗಿ ಕುಳಿತುಕೊಂಡು ರಾಜ್ಯಸರ್ಕಾರಗಳು ಮತ್ತು ಕೇಂದ್ರಸರ್ಕಾರ ಚರ್ಚೆ ಮಾಡಿ ಒಂದು ಮಾರ್ಗವನ್ನು ಬಗೆಹರಿಸುವುದಕ್ಕೆ ಹುಡುಕುವುದು ಒಳ್ಳೆಯದು ಎಂದು ನನಗೆ ಕಾಣುತ್ತದೆ. ಇನ್ನು ಒಬ್ಬ ಮಾನ್ಯ ಸದಸ್ಯರು ಈಗ ತಾನೆ ಹರಿಜನ ಗಿರಿಜನರ ಬಗ್ಗೆ ರೋಸ್ಟರ್ ಸಿಸ್ಟಮ್ ಅನುಸರಿಸುತ್ತಿದ್ದೀರಾ ಹೇಗೆ ಎಂದು ಕೇಳಿದರು. ನಾನು ಅವರಿಗೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ರೋಸ್ಟರ್ ಸಿಸ್ಟಮ್ ಪ್ರತಿಯೊಂದು ಇಲಾಖೆಯಲ್ಲೂ ಕಟ್ಟುನಿಟ್ಟಾಗಿ ಜಾರಿಗೆ ತಂದಿದ್ದೇವೆ. ಈಗ ಪಿ ಡಬ್ಲ್ಯು.ಡಿ. ಖಾತೆಯಲ್ಲಿ ಯಾವ ಯಾವ ಮಟ್ಟದಲ್ಲಿ ಅದು ಡೈರೆಕ್ಟ್ ರೆಕ್ರೂಟ್‌ಮೆಂಟ್ ಆಗಿರಬೇಕು. ಯಾವ ಯಾವ ಮಟ್ಟದಲ್ಲಿ ಹರಿಜನ ಗಿರಿಜನರಿಗೆ ಸಂವಿಧಾನದ ಪ್ರಕಾರ ಸಿಕ್ಕತಕ್ಕ ಪ್ರಾತಿನಿಧ್ಯ ಸಿಕ್ಕಬೇಕಾದ್ದು ಸಿಕ್ಕಿಲ್ಲವೋ ಅದು ಸಿಕ್ಕುವವರೆಗೆ ಶೇಕಡಾ 25ರಷ್ಟು ಅವರಿಗೆ ಸ್ಥಾನವನ್ನು ಕಾಯ್ದಿರಸಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಅದೇ ರೀತಿ ಯಾವ ಯಾವ ಕಡೆಯಲ್ಲಿ ಹರಿಜನ ಗಿರಿಜನರಿಗೆ ಸಾಕಷ್ಟು ಪ್ರಾತಿನಿಧ್ಯ ಇಲ್ಲವೋ ಅಂಥ ಇಲಾಖೆಗಳಲ್ಲಿ ಎಲ್ಲಾ ಡೈರೆಕ್ಟ್ ರೆಕ್ರೂಟ್‌ಮೆಂಟ್‌ನಲ್ಲಿ ಆ ಕೊರತೆ ನೀಗುವವರೆಗೆ ಹರಿಜನ ಗಿರಿಜನರಿಗೆ ಸಂವಿಧಾನದ ಪ್ರಕಾರ ಸಾಕಷ್ಟು ಪ್ರಾತಿನಿಧ್ಯ ಸಿಕ್ಕುವವರೆಗೆ ಇನ್ನುಳಿದ ಖಾತೆಗಳಲ್ಲೂ ಕೂಡ ಶೇಕಡ 25ರಷ್ಟು ರಿಸರ್ವ್ ಮಾಡುತ್ತೇವೆ ಎನ್ನುವ ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಯಾವುದೇ ಸಂದರ್ಭದಲ್ಲಿ ನ್ಯಾಯವಾಗಿ ಹರಿಜನ ಗಿರಿಜನರಿಗೆ ಸಿಕ್ಕತಕ್ಕ ಸೌಲಭ್ಯಗಳು ಅವರಿಂದ ವಂಚಿತವಾಗಕೂಡದು ಎಂದು ಹೇಳುವುದು ಇದರ ಉದ್ದೇಶ. ಈಗ ಕೆಲವೊಂದು ಹೊಸ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡಿದ್ದೇವೆ. ನನಗೆ ಸ್ವಲ್ಪಮಟ್ಟಿಗೆ ಖೇದ ಏನು ಅಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ಆಗಲಿ, ಅಥವಾ ಅವರ ಪಕ್ಷದ ಇನ್ನು ಯಾರೇ ಸದಸ್ಯರು ಆಗಲಿ, ಅಥವಾ ಬಂಗಾರಪ್ಪನವರು ಆಗಲಿ, ಆ ಕಾರ್ಯಕ್ರಮಗಳ ಬಗ್ಗೆ ಒಂದು ಶಬ್ದ ಕೂಡ ಪ್ರಸ್ತಾಪ ಇಲ್ಲಿ ಮಾಡಿಲ್ಲ. ನಾನು ಕೃತಜ್ಞನಾಗಿದ್ದೇನೆ. ಇನ್ನಿತರ ರಾಜಕೀಯ ಪಕ್ಷಗಳ ಧುರೀಣರು ತಮ್ಮ ಭಾಷಣದಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡಿದರು. ಹೊಸ ಕಾರ್ಯಕ್ರಮಗಳನ್ನು ಕೈಗೊಂಡ ಬಗ್ಗೆ ತಮ್ಮ ಮೆಚ್ಚುಗೆಯನ್ನು ಅವರು ವ್ಯಕ್ತಮಾಡಿದ್ದಾರೆ. ಈ ಹೊಸ ಕಾರ್ಯಕ್ರಮಗಳು ಯಾವುವು ? ಈ ಕಾರ್ಯಕ್ರಮಗಳ ಇಂಪ್ಲಿಕೇಷನ್ ಏನು ಇದನ್ನು ನಾನು ಎರಡು ನಿಮಿಷಗಳಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಮೊದಲನೆಯದು ಎಂಪ್ಲಾಯಮೆಂಟ್ ಗ್ಯಾರಂಟಿ ಪ್ರೋಗ್ರಾಮ್, ಉದ್ಯೋಗ ಖಾತರಿ ಅಥವಾ ಉದ್ಯೋಗ ಭರವಸೆ ಯೋಜನೆ. ಕಳೆದ ತಿಂಗಳು 26ನೇ ತಾರೀಖಿನಿಂದ ಅದು ಜಾರಿಗೆ ಬಂದಿದೆ. ಈ ಒಂದು ಯೋಜನೆಯಿಂದ ಇನ್ನ ಎರಡೂವರೆ ವರ್ಷಗಳೊಳಗಾಗಿ ಎಲ್ಲಾ ತಾಲ್ಲೂಕುಗಳನ್ನು ಅಳವಡಿಸುತ್ತೇವೆ. ಈ ಸಲ 45 ತಾಲ್ಲೂಕುಗಳನ್ನು ತೆಗೆದುಕೊಂಡಿದ್ದೇವೆ. ಇನ್ನು 6 ತಿಂಗಳುಗಳನಂತರ ಪುನಃ 45 ತಾಲ್ಲೂಕುಗಳನ್ನು ತೆಗೆದುಕೊಳ್ಳುತ್ತೇವೆ. ಇನ್ನು 6 ತಿಂಗಳುಗಳನಂತರ ಪುನಃ 45 ತಾಲ್ಲೂಕುಗಳನ್ನು ತೆಗೆದುಕೊಳ್ಳುತ್ತೇವೆ. ಹೀಗೆ ಎಲ್ಲಾ ತಾಲ್ಲೂಕುಗಳನ್ನು ತೆಗೆದುಕೊಳ್ಳಲಿಕ್ಕೆ ಎರಡೂವರೆ ವರ್ಷ ಆಗಬಹುದು. ಈ ಅವಧಿಯಲ್ಲಿ ಇಡೀ ನಮ್ಮ ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಯಾವುದೇ ಒಬ್ಬ ಸಶಕ್ತನಾಗಿರತಕ್ಕ ವ್ಯಕ್ತಿ 18 ವರ್ಷಕ್ಕೆ ಮೇಲ್ಪಟ್ಟಿದ್ದು 60 ವರ್ಷದವರೆಗೆ ಉದ್ಯೋಗ ಇಲ್ಲ, ಉದ್ಯೋಗ ಬೇಕು ಅಂದರೆ ಆತನಿಗೆ ಉದ್ಯೋಗ ಕೊಡತಕ್ಕಂಥ ಜವಾಬ್ದಾರಿ ಸರ್ಕಾರ ತೆಗೆದುಕೊಂಡಿದೆ. ನಮ್ಮಲ್ಲಿ ಇವತ್ತು ಬಡತನ ಹೆಚ್ಚು ಇದೆ. ಅದಕ್ಕೆ ಕಾರಣ ನಿರುದ್ಯೋಗ. ಈ ಒಂದು ಹೊಸ ಯೋಜನೆಯ ಬಗ್ಗೆ ನನ್ನ ಎದುರಿಗೆ ಕುಳಿತಿರುವಂಥ ಸ್ನೇಹಿತರು ಹೇಳಬಹುದಾಗಿತ್ತು, ಸರ್ಕಾರವನ್ನು ಹೊಗಳಲೇ ಬೇಕಾಗಿಲ್ಲ. ಹೊಗಳುವುದು ಎಂದೂ ಮಾಡುವುದಿಲ್ಲ. ಆದರೆ ಇದರ ಬಗ್ಗೆ ಪ್ರಸ್ತಾಪ ಮಾಡಬಹುದಾಗಿತ್ತು. ಟೀಕೆ

ಮಾಡಬಹುದಾಗಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ. —ತಾವು ಪ್ರೊಸೀಡಿಂಗ್ಸ್ ಓದಿಲ್ಲ ಎಂದು ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ತಮ್ಮ ಭಾಷಣ ನೋಡಿದ್ದೇನೆ. ಇನ್ನು ಎರಡನೆಯ ಕಾರ್ಯಕ್ರಮ, ನಮ್ಮ ಶುಷ್ಕ ಭೂಮಿ, ಅಥವಾ ಅಭಾವಕ್ಕೆ ಪೀಡಿತವಾದಂತಾದ್ದು, ಇದು ಒಂದು ಹೊಸ ಯೋಜನೆ. ಇಡೀ ದೇಶದಲ್ಲೇ ಪ್ರಥಮ ಬಾರಿಗೆ ಈ ಒಂದು ಹೊಸ ಯೋಜನೆ ಕೈಗೊಂಡಿದ್ದೇವೆ ಹತ್ತು ವರ್ಷದ ಅವಧಿಯಲ್ಲಿ ಸುಮಾರು ಎರಡು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿ ಈ ಪ್ರದೇಶದಲ್ಲಿ ಜೀವಿಸಿರತಕ್ಕಂಥ ರೈತರಿಗೂ ಕೂಡ ಸಾಕಷ್ಟು ವರಮಾನ ಬರಬೇಕು, ಸಾಕಷ್ಟು ಆದಾಯ ಬರಬೇಕು. ಅದಕ್ಕೆ ಒಂದು ಸಂಯುಕ್ತ ಅಭಿವೃದ್ಧಿ ಯೋಜನೆ ಎಂದು ಕರೆಯುತ್ತೇವೆ.

ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಒಂದು ಚರ್ಚಾಗೋಷ್ಠಿಯನ್ನು ನಾವು ಏರ್ಪಡಿಸಿದ್ದೆವು. ಇದು ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ತಾವು 20 ವರ್ಷದ ಅಂಕಿಅಂಶಗಳನ್ನು ತರಿಸಿ ನೋಡಿದರೆ ಪ್ರತಿವರ್ಷ ನಮ್ಮ ರಾಜ್ಯದ ಮೂರನೇ ಎರಡು ಭಾಗದಷ್ಟು ಪ್ರದೇಶ ಇಂಥ ಅಭಾವ ಪರಿಸ್ಥಿತಿಗೆ ಒಳಗಾಗುತ್ತಿದೆ. ಈ ಅಭಾವ ಪರಿಸ್ಥಿತಿಯ ಪರಿಹಾರಕ್ಕಾಗಿ ಕಳೆದ 20 ವರ್ಷದ ಅವಧಿಯಲ್ಲಿ ನಾವು ಖರ್ಚು ಮಾಡಿರತಕ್ಕ ಹಣ ಸುಮಾರು 8-10 ಸಾವಿರ ಕೋಟಿ ಆಗಿರಬಹುದು. ಈ ಅಂಕಿಅಂಶಗಳನ್ನು ನಾನು ಒಂದು ಅಂದಾಜಿನ ಮೇಲೆ ಹೇಳುತ್ತಿದ್ದೇನೆ ಆದರೆ ಇದರಿಂದ ಯಾವುದೇ ಒಂದು ಪ್ರಯೋಜನವೂ ಆಗಲಿಲ್ಲ. ಇದರಿಂದ ಶಾಶ್ವತವಾದ ಅಭಿವೃದ್ಧಿ ಕೂಡ ಆಗಲಿಲ್ಲ, ಯಶಸ್ವಿ ಕೂಡ ಆಗಲಿಲ್ಲ. ಆದ್ದರಿಂದ ಇದಕ್ಕಾಗಿ ಒಂದು ಪ್ರತ್ಯೇಕವಾದ ಬೋರ್ಡನ್ನು ಮಾಡಬೇಕೆಂದು ಮತ್ತು ಪ್ರತಿಯೊಂದು ಡಿವಿಜನ್‌ಗೂ ಒಂದೊಂದು ಬೋರ್ಡ್ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಈ ಬೋರ್ಡ್ ಇನ್ನು ಕೆಲವೇ ದಿವಸಗಳಲ್ಲಿ ಪ್ರಾರಂಭವಾಗುತ್ತದೆ. ನಾನು ಈ ಯೋಜನೆಯ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಒಂದು ಪತ್ರವನ್ನೂ ಕೂಡ ಬರೆದಿದ್ದೇನೆ ಒಂದು ಸಂತೋಷದ ಸಂಗತಿ ಎಂದರೆ ಈ ಯೋಜನೆಗೆ ಮಾನ್ಯ ಪ್ರಧಾನ ಮಂತ್ರಿಯವರು ಮಾನ್ಯತೆಯನ್ನು ನೀಡಿದ್ದಾರೆ ಯಾವ ಯಾವ ರಾಜ್ಯದಲ್ಲಿ ಈ ರೀತಿಯ ಶುಷ್ಕ ಭೂಮಿ ಇದೆ ಅಲ್ಲಿ ಈ ಅಭಿವೃದ್ಧಿ ಯೋಜನೆಯನ್ನು ಮಾಡಬೇಕೆಂದು ತಮಗೆ ಇಚ್ಛೆ ಇರುವುದಾಗಿ ಪ್ರಧಾನ ಮಂತ್ರಿಗಳಿಂದ ನಮಗೆ ತಿಳಿದು ಬಂದಿದೆ ಇದಕ್ಕೆ ಕೇಂದ್ರ ಸರ್ಕಾರದವರು ಸಾಕಷ್ಟು ಸಹಾಯ ಮಾಡುತ್ತಾರೆಂದು ಅಂದುಕೊಂಡಿದ್ದೇನೆ. ಕೇಂದ್ರ ಸರ್ಕಾರದ ವಿಷಯವನ್ನು ನಾನು ಹೇಳುವಾಗ ಇಲ್ಲಿ ಯಾವುದೇ ಒಂದು ಜಗಳ ಮಾಡುವ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಇದುವರೆಗೂ ನಾನು ಹೇಳುತ್ತಲೇ ಬಂದಿದ್ದೇನೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಂಬಂಧ ಸೌಹಾರ್ದಯುತವಾಗಿದೆ ಎಂದು. ಆದರೆ ಇಲ್ಲಿ ಒಂದೇ ಒಂದು ವಿಚಾರದಲ್ಲಿ ಮನಸ್ಸಿಗೆ ತುಂಬಾ ಸಂತೋಷವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಕುಡಿಯುವ ನೀರಿನ ಯೋಜನೆ ಬಗ್ಗೆ ನಾನು ಕೇಂದ್ರ ಸರ್ಕಾರದ ಸಂಬಂಧಪಟ್ಟ ಮಂತ್ರಿಗಳನ್ನು ವೈಯುಕ್ತಿಕವಾಗಿ ಭೇಟಿಯಾದಾಗ ನಮ್ಮ ಸರ್ಕಾರದ ಸಾಧನೆಯ ಬಗ್ಗೆ ಈ ವಿಚಾರದಲ್ಲಿ ಮನಸಾರೆ ಕೊಂಡಾಡಿದರು. ಅವರು ಏನು ಹೇಳಿದರು ಎಂದರೆ ಬೇರೆ ಯಾವ ರಾಜ್ಯದಲ್ಲೂ ಇಷ್ಟು ಬೇಗ ತಾನು ಹಾಕಿಕೊಂಡ ಯೋಜನೆಯನ್ನು ಮುಗಿಸಿಲ್ಲ. ನೀವು ಒಂದು ವರ್ಷಕ್ಕಿಂತ ಮೊದಲೇ ಈ ಯೋಜನೆಯನ್ನು ಮುಗಿಸುತ್ತಿದ್ದೀರಿ. ಆದ್ದರಿಂದ ಇದಕ್ಕಾಗಿ ನಿಮಗೆ ವಂದನೆ ಎಂದು ಹೇಳಿದರು. ಮೊನ್ನೆ ಈ ಯೋಜನೆಗಾಗಿ 80 ಕೋಟಿ ರೂ. ಹಂಚಲಾಯಿತು ಇದು ಗ್ರಾಂಟ್ ಇನ್ ಏಡ್ ಹಣ. ಆದರೆ ಇದರಲ್ಲಿ ಒಂದು ಖೇದದ ಸಂಗತಿ ಎಂದರೆ ಇಷ್ಟು ಉತ್ತಮವಾದ ಕೆಲಸವನ್ನು ಮಾಡಿದಂಥ ಕರ್ನಾಟಕ ರಾಜ್ಯಕ್ಕೆ ಎಷ್ಟು ಭಾಗ ಹಣ ಸಿಕ್ಕಬೇಕಾಗಿತ್ತೋ ಅಷ್ಟು ಸಿಕ್ಕಿಲ್ಲ. ಬೇರೆ ಬೇರೆ ರಾಜ್ಯಗಳಿಗೆ ಈ ಹಣವನ್ನು ಹಂಚಿದ್ದಾರೆ. ನಾನು ಈ ವಿಚಾರವನ್ನು ಇಲ್ಲಿ ಹೇಳಿದಾಗ ಕೇಂದ್ರ ಸರ್ಕಾರದ ಬಗ್ಗೆ ಇದು ಒಂದು ಟೀಕೆ ಎಂದು ತಾವು ಹೇಳುವುದಾದರೆ ಅದಕ್ಕೆ ನಾನು ಏನು ಮಾಡಬೇಕು ? ನಮ್ಮ ಸರ್ಕಾರದ ಅಗತ್ಯ, ಆವಶ್ಯಕತೆ ಮತ್ತು ಪರಿಸ್ಥಿತಿಯ ಗಾಂಭೀರ್ಯ ಇದಕ್ಕನುಗುಣವಾಗಿ ಬೇರೆ ಸರ್ಕಾರಕ್ಕೆ ಸಿಕ್ಕಿದಷ್ಟು ರೀತಿಯಲ್ಲಿ ನಮಗೆ ಸಿಕ್ಕಲಿಲ್ಲವೆನ್ನುವ ಮಾತನ್ನು ಇಲ್ಲಿ ನಾನು ಹೇಳಬಯಸುತ್ತೇನೆ.

ಇನ್ನು ನಮ್ಮ ಮೂರನೆಯ ಹೊಸ ಯೋಜನೆಯ ಕಾರ್ಯಕ್ರಮ ಎಂದರೆ, ಅಕ್ಷರ ಸೇನೆ ಯೋಜನೆ. ಸ್ವಾತಂತ್ರ್ಯ ಬಂದು 32 ವರ್ಷಗಳಾದರೂ ಕೂಡ ಅಶಿಕ್ಷಿತರ ಸಂಖ್ಯೆ ಅನೇಕ ಪಟ್ಟು ಜಾಸ್ತಿಯಾಗಿದೆ. ಶೇಕಡಾವಾರು ತೆಗೆದುಕೊಂಡರೆ ಕನಿಷ್ಟ ಪಕ್ಷ 2-3 ಪಟ್ಟು ಹೆಚ್ಚಿಗೆ ಆಗಿದೆ, ಇದು ನಮ್ಮ ಸಮಾಜಕ್ಕೆ ಬಂದಂಥ ಒಂದು ದೊಡ್ಡ ರೋಗವೆಂದು ಹೇಳಿದರೂ ಪರವಾಗಿಲ್ಲ. ಅಥವಾ ನಮ್ಮ ದೇಶದ ಬಹು ದೊಡ್ಡ ಭಾಗಕ್ಕೆ ಒದಗಿರತಕ್ಕ ದೌರ್ಬಲ್ಯ ಎಂದು ಹೇಳಿದರೂ ಪರವಾಗಿಲ್ಲ. ಇದನ್ನು ಮುಂದಿನ 4 ವರ್ಷದಲ್ಲಿ ನಿವಾರಣೆ ಮಾಡಬೇಕೆಂದು ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಈ ಯೋಜನೆ ಯಶಸ್ವಿಯಾಗಬೇಕಾದರೆ ಮಾನ್ಯ ಸದಸ್ಯರ ಸಹಕಾರವನ್ನು ನಾನು ಕೇಳುತ್ತೇನೆ. ತಾವು ಸಹಕಾರವನ್ನು ನೀಡಿದರೆ ಈ ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸುತ್ತೇವೆಂದು ಹೇಳಬಯಸುತ್ತೇನೆ. ಈ ಸರ್ಕಾರ ಬಂದಾಗ ಇದ್ದಂಥ ಕ್ಲಿಷ್ಟ ಪರಿಸ್ಥಿತಿಯ ಬಗ್ಗೆ ನಾನು ಪ್ರಾರಂಭದಲ್ಲೇ ಹೇಳಿ-

ದ್ದೇನೆ, ಸುಮಾರು 50-60 ಸಾವಿರ ಸರ್ಕಾರಿ ಹುದ್ದೆಗಳನ್ನು ಅನೇಕ ವರ್ಷದಿಂದ ನೇಮಕಾತಿ ಆಗದೆ ಹಾಗೆಯೇ ಖಾಲಿ ಇದ್ದುವು. ಅನೇಕ ವರ್ಷಗಳವರೆಗೆ ತಾತ್ಕಾಲಿಕ ನೇಮಕಾತಿಗಳಾಗುತ್ತಿದ್ದುವು. ಇದರಲ್ಲಿ ಸ್ಟೈಫೆಂಡರಿಯುವರ ಸೇವೆ ಕೂಡ ಇತು. ಇವರು ಯಾರು ಯಾರನ್ನೊ ಹಿಡಿದುಕೊಂಡು ದುಡ್ಡು ಖರ್ಚು ಮಾಡಿ ಮೆರವಣಿಗೆಯನ್ನು ಮಾಡಿ ದೇಣಿಗೆಗಳನ್ನು ಕೊಟ್ಟರೂ ಅವರ ಸಮಸ್ಯೆ ಬಗೆಹರಿದಿರಲಿಲ್ಲ ನಾವು ಬಂದ ಮೇಲೆ ಕೇವಲ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯೊಂದರಲ್ಲೇ ನಾನು ಹೇಳಿದ ಹುದ್ದೆಗಳನ್ನು ಹೊರತಾಗಿ ದೈನಿಕವಾಗಿ ಸುಮಾರು 10-15 ವರ್ಷಗಳಿಂದ ಕೆಲಸ ಮಾಡುತ್ತಿದ್ದ ಸುಮಾರು 32,850 ಜನರು ಏನಿದ್ದಾರೆ ಅವರ ಪೈಕಿ 23 ಸಾವಿರ ಜನರಿಗೆ ನಾವು ಉದ್ಯೋಗವನ್ನು ಖಾಯಂ ಮಾಡಿದ್ದೇವೆ.

ನಾನು ಈಗಾಗಲೇ ಹೇಳಿದ್ದೇನೆ. ಈ ತಿಂಗಳ 1ನೇ ತಾರೀಖಿನಿಂದ ಇವರ ಸಂಬಳದಲ್ಲಿ ನೂರು ರೂ. ಹೆಚ್ಚಿಗೆ ಮತ್ತು ಐವತ್ತು ರೂ. ಗಳನ್ನು ಟಿ. ಎ. ಎಂದು ಗೊತ್ತುಮಾಡಿದ್ದೇವೆಂದು. ಇವರ ಸೇವೆಯನ್ನು ಅಕ್ಷರ ಸೇನೆಯಲ್ಲಿ ಆಗಲಿ ಅಥವಾ ಬೇರೆ ಸೇನೆಯಲ್ಲಾಗಲಿ ತೆಗೆದುಕೊಳ್ಳಬೇಕೆಂದು ಉದ್ದೇಶ ಇಟ್ಟು ಕೊಂಡಿದ್ದೇವೆ. ಇದೇ ರೀತಿ ಖಾಲಿ ಇರತಕ್ಕ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ತುಂಬಲು ನೇಮಕಾತಿ ಸಮಿತಿಗಳನ್ನು ಮಾಡಿದ್ದೇವೆ. ಸುಮಾರು 25,526 ಹುದ್ದೆಗಳಿಗೆ ನಾವು ಅರ್ಜಿಗಳನ್ನು ಕರೆದಿದ್ದೇವೆ. ಈಗಾಗಲೇ 4200 ಹುದ್ದೆಗಳನ್ನು ಭರ್ತಿ ಮಾಡಿದ್ದೀವೆ.

ಇನ್ನು ಕೊನೆಯದಾಗಿ ಒಂದೆರಡು ಮಾತನ್ನು ಹೇಳುವುದಾದರೆ, ಆ ಕಡೆ ಕೂತಿರತಕ್ಕ ನಮ್ಮ ಸ್ನೇಹಿತರು ತಮ್ಮ ತಮ್ಮ ಪಕ್ಷದ ನೀತಿಯ ಪ್ರಕಾರ ಕೆಲಸವನ್ನು ಮಾಡಲಿ. ಆದರೆ ರಾಜ್ಯದ ಅಭಿವೃದ್ಧಿಯ ವಿಚಾರ ಬಂದಾಗ ಅದರಲ್ಲಿ ಯಾವುದೇ ಒಂದು ರಾಜಕೀಯವನ್ನೂ ತರುವುದು ಬೇಡ. ಎಲ್ಲರೂ ಕೂಡಿ ಸಹಕಾರದಿಂದ ಕೆಲಸ ಮಾಡೋಣ. ಇವತ್ತಲ್ಲ ನಾಳೆ ಅಲ್ಲಿರುವವರು ಇಲ್ಲಿ ಬರಬಹುದು, ಇಲ್ಲಿರುವವರು ಅಲ್ಲಿಗೆ ಹೋಗಬಹುದು ....

ಶ್ರೀ ಕೆ ಹೆಚ್. ರಂಗನಾಥ್. — ತಾವು ಅವಸರದಲ್ಲಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ನಾವು ಅವಸರದಲ್ಲಿ ಇಲ್ಲ. ಇಲ್ಲಿಂದ ಹೋಗಬೇಕೆಂಬ ಅವಸರದಲ್ಲಿಯೂ ಇಲ್ಲ, ಅಥವಾ ಇಲ್ಲೇ ಕೂತುಕೊಳ್ಳಬೇಕೆಂಬ ಇಚ್ಛೆ ಕೂಡ ನನಗಿಲ್ಲ. ನಾನು ಈ ಒಂದು ಆಶ್ವಾಸನೆಯನ್ನು ಮಾನ್ಯ ಸದಸ್ಯರಾದ ರಂಗನಾಥ್‌ರವರಿಗೆ ಕೊಡಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.— ಬಹುಮಟ್ಟಿಗೆ ಹೋದ ವರ್ಷದ ಗೌವರ್ನರ್ ಸ್ಪೀಚಿಗೂ ಈ ವರ್ಷದ ಗೌವರ್ನರ್ ಸ್ಪೀಚಿಗೂ ವ್ಯತ್ಯಾಸ ನೋಡಿದಾಗ ಅಜಗಜಾಂತರವಿರುತ್ತದೆ. ನನ್ನ ಹತ್ತಿರ ಬುಕ್ಸ್ ಇವೆ.

ಶ್ರೀ ರಾಮಕೃಷ್ಣ ಹೆಗಡೆ.— ಏನೇನೂ ಇಲ್ಲ. ಹೋದ ಸಲ ಬಡ್ಜೆಟ್ ಭಾಷಣದ ಮೇಲೆ ಹೇಳಬೇಕೆಂದರೆ ಮೊದಲನೆಯ ವರ್ಷದ ಸರ್ಕಾರದ ನೀತಿ ನಿರೂಪಣೆ ....

ಶ್ರೀ ಕೆ. ಹೆಚ್. ರಂಗನಾಥ್.— ಆಶಾದಾಯಕವಾದ ನಿರೂಪಣೆ ಇತ್ತು. ಅದು ಈಗ ಏನಾಗಿದೆ ಎಂದರೆ ಓಡಿ ಹೋಗತಕ್ಕಂಥ ರೀತಿಯಲ್ಲಿ ಇದೆ. ನಾನು ಒಂದು ಮಾತನ್ನು ಪ್ರಸ್ತಾಪ ಮಾಡುತ್ತೇನೆ. ಜುಲೈ ತಿಂಗಳಲ್ಲಿ ಕೊಟ್ಟಿರತಕ್ಕಂಥ ಸರ್ಕಾರಿ ಆಜ್ಞೆ ಮತ್ತು ಅಕ್ಟೋಬರ್ ತಿಂಗಳಲ್ಲಿ ಕೊಟ್ಟಿರತಕ್ಕಂಥ ಸರ್ಕಾರಿ ಆಜ್ಞೆಯಲ್ಲಿ ಕೆಲವು ಖಾತೆಗೆ ಹಣವನ್ನು ಖರ್ಚು ಮಾಡಬೇಕು, ಇನ್ನು ಕೆಲವು ಖಾತೆಗೆ 50 ರಷ್ಟು ಖರ್ಚು ಮಾಡಬೇಕು ಎನ್ನತಕ್ಕಂಥದ್ದು ಇದೆ. ಅದರ ಪ್ರಕಾರ ಯಾವ ಯಾವ ಇಲಾಖೆಗೆ ಎಷ್ಟೆಷ್ಟು ಖರ್ಚು ಮಾಡಿದೆ. ಖರ್ಚು ಮಾಡದೆ ಉಳಿದಿರತಕ್ಕಂಥದ್ದು ಎಷ್ಟು, ಎಂಬುದರ ಬಗ್ಗೆ ವಿವರಣೆಗಳನ್ನು ಇಲಾಖಾವಾರು ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಅದನ್ನು ಕೊಡುತ್ತೇನೆ, ಈಗ ಮಳೆಗಾಲದಲ್ಲಿ ಏನು ಖರ್ಚು ಮಾಡಬೇಕೆಂದು ಹೇಳಿದ್ದೀರಿ ಅದು ಸಹ ಗೊತ್ತಿರುತ್ತದೆ. ಯಾವ ಯಾವ ಭಾಗದಲ್ಲಿ, ಯಾವ ಯಾವ ಪ್ರದೇಶಗಳಲ್ಲಿ ಎಷ್ಟೆಷ್ಟು ಖರ್ಚು ಮಾಡಬೇಕೆಂಬುದನ್ನು ಕೊಡುತ್ತೇನೆ. ನಿಮಗೆ ಏನೇನು ಬೇಕಾಗಿರುತ್ತದೆ ಅದನ್ನೆಲ್ಲ ಬರೆದು ಕೊಟ್ಟರೆ ಅದರ ವಿವರಗಳನ್ನೆಲ್ಲ ಕೊಡುತ್ತೇನೆ. ತಾವು ಈಗ ಹೇಳಿದ್ದು ಕೂಡ ಗೊತ್ತಾಯಿತು. ಅದಕ್ಕೆ ನಾನು ಹೇಳುತ್ತೇನೆ, ನಮ್ಮ ಕರ್ನಾಟಕ ರಾಜ್ಯವನ್ನು ಅಭಿವೃದ್ಧಿ ಪಡಿಸತಕ್ಕಂಥ ವಿಚಾರದಲ್ಲಿ ನಾವು ಎಲ್ಲರೂ ಒಟ್ಟಾಗಿ ಸೇರಿ ಕೆಲಸ ಮಾಡೋಣ. ತಾತ್ಕಾಲಿಕವಾಗಿಯಾದರೂ ನಮ್ಮ ರಾಜಕಾರಣಿಗಳು ರಾಜಕೀಯ ಮಹತ್ ಆಕಾಂಕ್ಷೆಗಳನ್ನು ಬದಿಗೊತ್ತಿ ಇಡೋಣ. ವಿಜಯನಗರದ ಉಕ್ಕಿನ ಕಾರ್ಖಾನೆಯ ಬಗ್ಗೆ ಹೇಳುವುದಾದರೆ ನಾನು ಡೆಲ್ಲಿಗೆ ಹೋದಾಗ ಎರಡು ಸಲ ನಮ್ಮ ರಾಜ್ಯದ ಪಾರ್ಲಿಮೆಂಟ್ ಸದಸ್ಯರನ್ನು ಮೀಟಿಂಗ್ ಕರೆದು ಈ ವಿಚಾರದಲ್ಲಿ ಚರ್ಚೆ ಮಾಡಿದ್ದೇನೆ. ಆವಾಗ ಅವರು, ನಾವು ಎಲ್ಲರೂ ಸೇರಿ ಹೋಗೋಣ, ತಾವು ಮುಖಂಡತ್ವ ವಹಿಸಿ, ನಾವು ಎಲ್ಲರೂ ಪ್ರಧಾನ ಮಂತ್ರಿಗಳನ್ನು ಭೇಟಿಯಾಗೋಣ ಎಂದರು. ಅದಕ್ಕೆ ನಾನು ಆಗಬಹುದು ಎಂದು ಹೇಳಿದೆ. ಈ ಸೂಚನೆಯನ್ನು ನಾನು ಮಾಡಿದ್ದು ಅಲ್ಲ. ಅನಂತರ ಬಳ್ಳಾರಿಯಿಂದ ಸಾವಿರಾರು ಜನರು ಸೈಕಲ್ ಮೇಲೆ ಜಾಥಾ ಬಂದರು. ಶ್ರೀಮಾನ್ ಘೋರ್ಪಡೆಯವರು ಅದರ ಬಗ್ಗೆ ಆಂದೋಳನವನ್ನೇ ಮಾಡು

ತ್ತೇನೆ ಎನ್ನುವ ಘೋಷಣೆಯನ್ನೂ ಕೂಡ ಮಾಡಿದರು. ಆಗ ಮಾನ್ಯ ಘೋರ್ಪಡೆಯವರ ಜೊತೆಯಲ್ಲಿ ಮಾತನಾಡಿ, ಸೈಕಲ್ ಮೇಲೆ ಬಾದಿದ್ದಂಥ ತರುಣರ ಹತ್ತಿರವೂ ಕೂಡ ಭೇಟಿಯಾಗಿದ್ದೆ. ಆದಾದ ಮೇಲೆ ಒಂದು ಸಲ ನಮ್ಮ ಮಂತ್ರಿಗಳ ಮೀಟಿಂಗ್ ಕರೆಯೋಣ, ವಿರೋಧ ಪಕ್ಷದವರನ್ನೂ ಕರೆಯೋಣ ವೆಂದು ಇಲ್ಲಿ ಮೀಟಿಂಗ್ ಕರೆದೆ. ನಮ್ಮ ಕರ್ನಾಟಕ ಸಂಸದೀಯ ಸದಸ್ಯರ ಸಂಘದ ಕನ್‌ವೀನರ್ ಶ್ರೀಯುತ ಎಫ್. ಎಂ. ಖಾನ್‌ರವರಿಂದ ಟೆಲಿಗ್ರಾಂ ಬಂದಿತ್ತು. ಈ ದಿವಸ ಮೀಟಿಂಗ್ ಕರೆದಿರತಕ್ಕಂಥದ್ದು ಅನುಕೂಲವಾಗಿಲ್ಲ, ಅದು ಬೆಂಗಳೂರಿನಲ್ಲಿ ಕರೆದಿದ್ದೀರಿ, ಬರುವ ತಿಂಗಳು ಮಧ್ಯದಲ್ಲಿ ಮೀಟಿಂಗನ್ನು ಡೆಲ್ಲಿಯಲ್ಲಿ ಕರೆಯಿರಿ ನಾನು ಅಲ್ಲೇ ಅಟೆಂಡ್ ಆಗುತ್ತೇನೆಂದು ಹೇಳಿದರು. ಈ ಮೀಟಿಂಗ್‌ಗನ್ನು ಕ್ಯಾನ್ಸಲ್ ಮಾಡಿ ಬರುವ ತಿಂಗಳು ಅಂದರೆ ಡಿಸೆಂಬರ್ ತಿಂಗಳು 20ನೇ ತಾರೀಖು ಮೀಟಿಂಗ್‌ಗನ್ನು ಕರೆಯಿರಿ ಎಂದು ಹೇಳಿದಾಗ, ನಾನು ಎಲ್ಲ ವಿರೋಧ ಪಕ್ಷದ ನಾಯಕರಿಗೂ ತಿಳಿಸಿದೆ. ಕೊನೆ ಘಳಿಗೆಯಲ್ಲಿ ನನಗೆ ಎಲ್ಲಿಂದಲೋ ಪ್ರೋಗ್ರಾಂ ಬಂದಿದೆ ಎಂದು ಹೇಳಿ ಮೀಟಿಂಗನ್ನು ಮುಂದಕ್ಕೆ ಹಾಕಬೇಕೆಂದು ತಿಳಿಸಿದರು. ನನಗೆ ಗತ್ಯಂತರವಿಲ್ಲದೆ ಕೊನೇ ಘಳಿಗೆಯಲ್ಲಿ ಈ ವಿಷಯವನ್ನು ಎಲ್ಲರಿಗೂ ತಿಳಿಸಬೇಕಾಯಿತು. ಮಾನ್ಯ ಆಚಾರ್ಯರವರು ಬೇರೆ ಎಲ್ಲಿಗೋ ಟಿಕೆಟ್ ಬುಕ್ ಮಾಡಿದ್ದವರು ಅದನ್ನು ಕ್ಯಾನ್ಸಲ್ ಮಾಡಿಕೊಂಡು ಇಲ್ಲಿ ಮೀಟಿಂಗಿಗೆ ಅಟೆಂಡ್ ಆಗಲು ಬಂದಿದ್ದರು. ಈ ರೀತಿಯಾಗಿ ಕ್ಯಾನ್ಸಲ್ ಮಾಡತಕ್ಕಂಥ ಪ್ರಸಂಗ ಬಂದಿತ್ತು. ನಮ್ಮ ರಾಜ್ಯದ ಎಲ್ಲ ಎಂ. ಪಿ. ಗಳು ಬೇರೆ ಪಕ್ಷಕ್ಕೆ ಸೇರಿದವರು. ಒಬ್ಬರು, ಅಂದರೆ ರಾಜ್ಯ ಸಭೆಯಲ್ಲಿ ಒಬ್ಬರು ಇದ್ದರೆ, ಲೋಕ ಸಭೆಯಲ್ಲಿ ಒಬ್ಬರು ಇದ್ದಾರೆ. ಅವರನ್ನು ಬಿಟ್ಟರೆ ಎಲ್ಲರಿಗೂ ಮೀಟಿಂಗನ್ನು ರದ್ದು ಮಾಡಿದ ವಿಷಯವನ್ನು ತಿಳಿಸಿ ವಿಷಾದವನ್ನು ವ್ಯಕ್ತಪಡಿಸಿದೆ. ಆದರೆ ನನಗೆ ಡಿಲ್ಲಿಗೆ ಹೋಗಬೇಕಾದಂಥ ಬೇರೆ ಕೆಲಸ ಇತ್ತು ಹೋದೆ. ಆ ಸಂದರ್ಭದಲ್ಲಿ ಮಾನ್ಯ ಸಾಳ್ವಿಯವರನ್ನು ಭೇಟಿಯಾದೆ. ಅದೇ ಸಂದರ್ಭದಲ್ಲಿ ಮಾನ್ಯ ವೀರಪ್ಪ ಮೊಯಿಲಿಯವರು ಬಂದರು. ಅಲ್ಲಿಂದ ಬಂದು ಒಂದು ದೊಡ್ಡ ಹೇಳಿಕೆಯನ್ನೂ ಕೂಡ ಕೊಟ್ಟರು. ವಿಜಯನಗರದ ಉಕ್ಕಿನ ಕಾರ್ಖಾನೆ, ಫೋರ್ಜ್ ಟೆಕ್ನಾಲಜಿ ಇದನ್ನೆಲ್ಲ ಕೇಳುತ್ತಿದ್ದೇವೆ. ಒಂದೂವರೆ ತಿಂಗಳಲ್ಲಿ ಮಾನ್ಯ ಸಾಳ್ವಿಯವರನ್ನು ಭೇಟಿಯಾದಾಗ ಅವರು ಸವಿಸ್ತಾರವಾಗಿ ಹೇಳಿದರು. ಪ್ಲಾನ್ ವಿಚಾರದಲ್ಲಿ ಹೇಳಿದರು, ಹೊಸ ವಿಚಾರವಾಗಿ ಏನೂ ಹೇಳಿಲ್ಲ. ನಮ್ಮ ರಾಜ್ಯದ ಸಂಸತ್ ಸದಸ್ಯರು ಯಾವ ದಿವಸ ನಾವು ಮೀಟಿಂಗ್ ಫಿಕ್ಸ್ ಮಾಡಿದ್ದೆವೋ ಅದಕ್ಕೂ ಒಂದು ಎರಡು ದಿವಸ ಮೊದಲು ಅವರನ್ನು ಪ್ರತ್ಯೇಕವಾಗಿ ಭೇಟಿಯಾಗಿದ್ದೇನೆ. ಅವರ ಹತ್ತಿರ ಚರ್ಚೆ ಮಾಡುವುದಕ್ಕೆ ನನಗೆ ಸಂತೋಷ. ಒಳ್ಳೆಯ ಕೆಲಸವನ್ನು ನಾವು ಒಬ್ಬರೇ ಮಾಡಿಬಿಟ್ಟರೆ ಆಗುವುದಿಲ್ಲ. ವಿಜಯನಗರದ ಉಕ್ಕಿನ ಕಾರ್ಖಾನೆಯನ್ನು ಪ್ರಧಾನ ಮಂತ್ರಿಯವರು ಅಸ್ತು ಎಂದು ಹೇಳಿ ಕಾರ್ಖಾನೆಯನ್ನು ಪ್ರಾರಂಭ ಮಾಡಿಸಿ ಆ ಒಂದು ಕೀರ್ತಿಯನ್ನು ಪ್ರಧಾನ ಮಂತ್ರಿಯವರ ಪಕ್ಷದವರೇ ತೆಗೆದುಕೊಳ್ಳಲಿ ನನಗೇನು ಚಿಂತೆ ಇಲ್ಲ. ಆ ಒಂದು ಕಾರ್ಯದಲ್ಲಿ ಭಾಗವಹಿಸಿ ರಾಜಕೀಯ ಕ್ಯಾಪಿಟಲ್ ಮಾಡಬೇಕೆಂದು ಬಯಸುವುದಿಲ್ಲ. ಆದರೆ ಈ ರೀತಿಯಾಗಿ ಏತಕ್ಕೆ ಮಾಡಬೇಕಾಗಿತ್ತು ? ತಾವೇ ಸೂಚನೆ ಮಾಡಿದವರು, ಎರಡು ಸಲ ಮೀಟಿಂಗ್ ಫಿಕ್ಸ್ ಮಾಡಿ ಕೊನೆ ಘಳಿಗೆಯಲ್ಲಿ ರದ್ದು ಮಾಡಲಿಕ್ಕೆ ಆ ದಿವಸ ನನ್ನಲ್ಲಿ ಹೇಳಿ ಮೀಟಿಂಗನ್ನು ಹಿಂದಿನ ದಿವಸ ಪ್ರತ್ಯೇಕವಾಗಿ ಮಾಡಿದ್ದು ಯಾವ ಉದ್ದೇಶ ? ಆದ್ದರಿಂದ ಸನ್ಮಾನ್ಯ ಸದಸ್ಯರಲ್ಲಿ ನಾನು ವೈಯುಕ್ತಿಕವಾಗಿ ಕಳಕಳಿಯಿಂದ ಬೇಡಿಕೊಳ್ಳುವುದೇನೆಂದರೆ ಪಕ್ಷದ ವಿಚಾರದಲ್ಲಿ ನಮ್ಮ ರಾಜ್ಯದ ಅಭಿವೃದ್ಧಿಯ ವಿಚಾರದಲ್ಲಿ ಜನತೆಗೆ ಸೇರಿದಂಥ ವಿಚಾರದಲ್ಲಿ ಯಾವ ರಾಜಕೀಯವನ್ನೂ ಮಾಡುವುದೂ ಬೇಡ. ರಾಜಕೀಯ ಮಾಡಬೇಕೆಂದರೆ ಬೇಕಾದಷ್ಟು ಇರುತ್ತದೆ. ಬೇಕಾದಷ್ಟು ಸಂದರ್ಭಗಳು ಸಿಕ್ಕುತ್ತದೆ. ಅನಂತರ ತಮ್ಮಲ್ಲಿ ಮತ್ತೊಂದು ನಿವೇದನೆ ಮಾಡಲಿಕ್ಕೆ ಬಯಸುತ್ತೇನೆ ಅದು ಏನೆಂದರೆ ಎಲ್ಲಿ ಸಾರ್ವಜನಿಕ ಹಿತ ಇದೆಯೋ ಅಲ್ಲಿ ನಾವು ನೀವು ಪರಸ್ಪರ ವಿಚಾರ ವಿನಿಮಯ ಮಾಡಿ ಒಂದು ಸಮಸ್ಯೆಯ ಪರಿಹಾರವನ್ನು ಹುಡುಕುವಂಥ ಪ್ರಯತ್ನ ಮಾಡೋಣ. ಪ್ರತಿಯೊಬ್ಬರಿಗೂ ತಮ್ಮ ತಮ್ಮ ಪಕ್ಷವನ್ನು ಬೆಳಸಬೇಕೆಂದು ವಿಚಾರ ಇದ್ದೇ ಇರುತ್ತದೆ. ಮೀನು ಸಿಗಬೇಕು ಎಂದರೆ ಅದಕ್ಕೆ ಗಾಳ ಹಾಕಬೇಕಾದ್ದು ಇದ್ದೇ ಇರುತ್ತದೆ. ದೊಡ್ಡ ಕೆರೆಗೋ, ದೊಡ್ಡ ನದಿಗೋ, ಮಹಾಸಾಗರಕ್ಕೋ ಹಾಕಿ. ಅದು ಬಿಟ್ಟು ಅಲ್ಲಿ ಯಾರೋ ಮೂತ್ರಿ ಮಾಡಿದಾಗ ಅಲ್ಲಿ ಗಾಳ ಹಾಕುವುದಕ್ಕೆ ಹೋಗಬೇಡಿ. ರೈತರ ಸಂಘದ ಕೆಲವು ಧುರೀಣರು ಮೂತ್ರಿ ಮಾಡಿದಾಗ, ರಾಜಕುಮಾರ್ ಅಭಿಮಾನಿಗಳ ಸಂಘದವರು ಮೂತ್ರಿ ಮಾಡಿದಾಗ ಅಲ್ಲಿ ಹೋಗಿ ಗಾಳ ಹಾಕಬೇಡಿ. ಅಲ್ಲಿ ಮೀನು ಸಿಗುವುದಿಲ್ಲ. ಆಮೇಲೆ ಶ್ರೀ ವೀರಪ್ಪ ಮೊಯ್ಲಿ ಅವರ ಟೇಪಿನ ವಿಚಾರ ಇಲ್ಲಿ ಪ್ರಸ್ತಾಪವಾಯಿತು. ಈ ಘಟನೆಯ ಬಗ್ಗೆ ನಾನು ಪುನಃ ಏನೂ ಹೇಳುವುದಕ್ಕೆ ಬಯಸುವುದಿಲ್ಲ. ಏಕೆಂದರೆ ಇದು ಇಡೀ ಪ್ರಪಂಚಕ್ಕೇ ಗೊತ್ತಿದೆ. ನಮ್ಮ ದೇಶದ ಪತ್ರಿಕೆಯಲ್ಲಿ ಈ ಬಗ್ಗೆ ಲೇಖನಗಳು ಮತ್ತು ಅಗ್ರ ಲೇಖನಗಳು ಪ್ರಕಟವಾದವು. ಇದರ ಜೊತೆಗೆ ಅನೇಕ ಜನರು ಇದಕ್ಕೆ ಸಂಬಂಧ ಪಟ್ಟವರೊಡನೆ ಇಂಟರ್‌ವ್ಯೂ ಸಹ ನಡೆಸಿದರು. ಈ ಪ್ರಕರಣ ನಮ್ಮ ದೇಶದಲ್ಲಿ ಅಷ್ಟೇ ಅಲ್ಲ, ವಿದೇಶಗಳಲ್ಲಿಯೂ ಸಹ ಪ್ರಖ್ಯಾತಿಯಾಗಿದೆ. ಈ ವಿಚಾರದಲ್ಲಿ ಮಾನ್ಯ ಮೊಯಿಲಿಯವರು ಮಾತನಾಡುತ್ತಾ ತಮ್ಮ ಒಂದು ಪ್ರತಿಕ್ರಿಯೆಯನ್ನು ತೋರಿಸಿದರು. ಈ ವಿಚಾರದಲ್ಲಿ

ನ್ಯಾಯಾಂಗ ತನಿಖೆ ಮಾಡಿ, ಅದಕ್ಕೆ ನಾನು ಸಿದ್ಧನಿದ್ದೇನೆ ಎಂದು ಮಾನ್ಯ ಮೊಯಿಲಿಯವರು ಹೇಳಿದರು. ಈ ಘಟನೆ ನಡೆದ ಕೂಡಲೆ ನ್ಯಾಯಾಂಗ ತನಿಖೆ ಮಾಡಬೇಕೆಂಬುದೇ ನಮ್ಮ ವಿಚಾರವಾಗಿತ್ತು. ನಾವು ಒಂದು ಒಳ್ಳೆಯ ಉದ್ದೇಶದಿಂದ ನ್ಯಾಯಾಂಗ ತನಿಖೆಯನ್ನು ಮಾಡಿಸಿದ್ದರೆ ಮಾನ್ಯ ಮೊಯಿಲಿಯವರು ಇದನ್ನು ವಿಚ್ಛಂಟಿಂಗ್ ಎಂದು ತಿಳಿದುಕೊಳ್ಳಬಹುದೆಂದು ನಾವು ಮಾಡಲಿಲ್ಲ. ಆದರೆ ಮಾನ್ಯ ಮೊಯಿಲಿಯವರು ಇಲ್ಲಿ ಪುನಃ ಪುನಃ ವಿಚ್ಛಂಟಿಂಗ್ ಎಂಬ ಪದವನ್ನು ಬಳಸುತ್ತಿದ್ದಾರೆ. ಆದರೆ ಈ ಪ್ರಕರಣ ಜನರಿಗೆಲ್ಲಾ ಗೊತ್ತಾಗಿದೆ. ಜನರಿಗೆ ಸತ್ಯ ಏನೆಂಬುದು ಗೊತ್ತಾಗಿದೆ. ಟೇಪ್‌ನಲ್ಲಿರುವ ಧ್ವನಿ ಯಾರದು ಎಂಬುದು ಪತ್ರಿಕಾ ಪ್ರತಿನಿಧಿಗಳಿಗೂ ಸಹ ಗೊತ್ತಿದೆ. ಈ ಎಲ್ಲ ಕಾರಣಗಳಿಂದ ಈ ಪ್ರಕರಣವನ್ನು ಇಷ್ಟಕ್ಕೇ ಮುಗಿಸೋಣ ಎಂದು ನಾನು ಯೋಚನೆ ಮಾಡಿದ್ದೆ. ಆದರೆ ಈ ಘಟನೆಗೆ ಸಂಬಂಧಪಟ್ಟ ಇಬ್ಬರು ವ್ಯಕ್ತಿಗಳೂ ಕೂಡ ಅಂದರೆ ಕೊಟ್ಟವರು ಮತ್ತು ತೆಗೆದುಕೊಂಡವರು ನ್ಯಾಯಾಂಗ ತನಿಖೆ ಮಾಡಬೇಕೆಂದು ಹೇಳಿದ್ದಾರೆ. ಮಾನ್ಯ ಮೊಯಿಲಿಯವರು ಮತ್ತು ಮಾನ್ಯ ಬೈರೇಗೌಡ ಅವರು ನ್ಯಾಯಾಂಗ ತನಿಖೆಯಾಗಬೇಕೆಂದು ಕೇಳಿರುವುದರಿಂದ ನನಗೆ ಬೇರೆ ಉಪಾಯವೇ ಇಲ್ಲದ ಕಾರಣ ಈ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡಿಸುತ್ತೇನೆ.

ಇನ್ನು ಕಳೆದ ಒಂದು ವರ್ಷದ ಅವಧಿಯಲ್ಲಿ ನಾವು ಅಭಿಮಾನಪಡುವ ರೀತಿಯಲ್ಲಿ ಕೆಲಸ ಮಾಡಿದ್ದೇವೆ. ಇಷ್ಟೊಂದು ಉತ್ತಮವಾದ ಕೆಲಸ ಮತ್ತು ಇಷ್ಟೊಂದು ಹೆಚ್ಚಿನ ಕೆಲಸ ಬೇರೆ ರಾಜ್ಯಗಳಲ್ಲಿ ಆಗಿಲ್ಲ. ನಮ್ಮ ರಾಜ್ಯದಲ್ಲಿ ಕೂಡ ಈ ಹಿಂದಿನ ವರ್ಷಗಳಲ್ಲಿ ಆಗಿಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ. ಆದರೂ ನಾವು ಇಷ್ಟರಿಂದಲೇ ತೃಪ್ತರಾಗುವುದಿಲ್ಲ. ಬರುವ ವರ್ಷ ಇನ್ನೂ ಹೆಚ್ಚು ಸಾಧನೆ ಮಾಡಬೇಕೆಂದು ಬಯಸಿದ್ದೇವೆ. ಮತ್ತು ಈ ಸದನದ ಮಾನ್ಯ ಸದಸ್ಯರು ಈ ವಿಚಾರದಲ್ಲಿ ನಮಗೆ ಸಹಕಾರ ಕೊಡುತ್ತಾರೆಂದು ನಾನು ಆಶೆ ಮಾಡುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.— ಮಾನ್ಯ ಅಧ್ಯಕ್ಷರೇ, 16 ಸಾವಿರ ದಳಪತಿಗಳು ಕಳೆದ 4 ವರ್ಷಗಳಿಂದ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಇವರಿಗೆ ಯಾವಾಗ ಸಂಬಳ ಕೊಡುತ್ತೀರಿ ಮತ್ತು ಇವರ ಬಗ್ಗೆ ಸರ್ಕಾರದ ಧೋರಣೆ ಏನು ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ಎರಡನೆಯದಾಗಿ ನಮ್ಮ ರಾಜ್ಯದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆ ತರುತ್ತೇವೆ. ಈಗಿರುವಂತಹ ವಿಷಮತೆಯನ್ನು ಹೋಗಲಾಡಿಸುತ್ತೇವೆಂದು ತಾವು ಹೇಳುತ್ತಿರುವಾಗ ಹಳ್ಳಿಗಳಲ್ಲಿರುವ ಬಡ ಜನರನ್ನು ಮುಂದೆ ತರಲು ಹಾಗೂ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ತಾವು ತಿಳಿಸಬೇಕು. ನಮ್ಮದು ಹಿಂದುಳಿದಂಥ ಜಿಲ್ಲೆ. ಈ ಜಿಲ್ಲೆಯ ಅಭಿವೃದ್ಧಿಗೆಂದು ಕಾರಂಜಾ ಯೋಜನೆಯನ್ನು ಪ್ರಾರಂಭ ಮಾಡಲಾಯಿತು. ಈ ಹಿಂದಿನ ಸರ್ಕಾರ ಈ ಯೋಜನೆಯ ಸಲುವಾಗಿ ಪ್ರತಿವರ್ಷವೂ ಬಜೆಟ್‌ನಲ್ಲಿ 4 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದರು. ಆದರೆ ಈ ಸಲ ಕೇವಲ 220 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದಕ್ಕೆ ಕಾರಣವೇನೆಂದು ಕೇಳಿದಾಗ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಈ ವರ್ಷ ಇನ್ನೂ ನಾಲ್ಕುಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಆದರೆ ಅಷ್ಟೇ ಪ್ರಮಾಣದಲ್ಲಿ ಕೆಲಸ ಮಾತ್ರ ಆಗಲಿಲ್ಲ. ಆದ್ದರಿಂದ ಈ ಯೋಜನೆಯ ಬಗ್ಗೆ ತಮ್ಮ ಧೋರಣೆ ಏನೆಂಬುದನ್ನು ತಿಳಿಸಬೇಕು. ಇನ್ನು ರೈತರು ವ್ಯವಸಾಯ ಮಾಡತಕ್ಕಂಥ ಜಮೀನಿನ ಮೇಲೆ ಸೀಲಿಂಗ್ ತಂದಿರುವಂತೆ ಪಟ್ಟಣಗಳಲ್ಲಿರುವ ಜಮೀನಿನ ಮೇಲೆ ಸಹ ಅರ್ಬನ್ ಸೀಲಿಂಗ್ ಯಾವಾಗ ತರುತ್ತೀರಿ ಎಂಬುದನ್ನು ತಿಳಿಸಬೇಕು. ಡ್ರೈ ಲ್ಯಾಂಡ್ ಅಭಿವೃದ್ಧಿಗಾಗಿ ಒಂದು ಪ್ರತ್ಯೇಕ ಬೋರ್ಡ್ ರಚನೆ ಮಾಡುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಹೈದರಾಬಾದ್ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ತರಹ ಇದನ್ನು ರಚನೆ ಮಾಡುತ್ತೀರೋ ಅಥವಾ ಯಾವ ರೀತಿ ರಚನೆ ಮಾಡುತ್ತೀರಿ ಎಂಬುದನ್ನು ತಾವು ತಿಳಿಸಬೇಕು. ಇನ್ನು ಗಡಿ ಬಗ್ಗೆ ಇದೇ ಸಭೆಯಲ್ಲಿ ಮಹಾಜನ್ ಕಮಿಷನ್ ವರದಿಯನ್ನು ಒಪ್ಪಿಕೊಳ್ಳಬೇಕೆಂದು ತೀರ್ಮಾನವಾಗಿರುವಾಗ ಹಾಗೂ ಈ ವರದಿಯನ್ನು ಮಹಾರಾಷ್ಟ್ರದವರು ಒಪ್ಪದಿರುವಾಗ ಪುನಃಪುನಃ ಆ ರಾಜ್ಯದ ಮುಖ್ಯಮಂತ್ರಿಗಳ ಜೊತೆ ಮಾತನಾಡುವುದರ ಅವಶ್ಯಕತೆಯಾದರೂ ಏನಿದೆ? ಇಲ್ಲಿ ತಾವು ಭ್ರಷ್ಟಾಚಾರವನ್ನು ನಿರ್ಮೂಲಮಾಡುವ ಬಗ್ಗೆಯಾಗಲೀ, ಮದ್ಯಪಾನದ ಬಗ್ಗೆಯಾಗಲೀ, ರೈತರ ಬೇಡಿಕೆಗಳ ಬಗ್ಗೆಯಾಗಲೀ, ವಿದ್ಯುತ್‌ದರವನ್ನು ಇಳಿಸುವ ಬಗ್ಗೆಯಾಗಲೀ, ನೀರಾವರಿ ಸೌಲಭ್ಯ ಒದಗಿಸುವ ಬಗ್ಗೆಯಾಗಲೀ, ಜಾತೀಯತೆಯನ್ನು ಹೋಗಲಾಡಿಸುವ ಬಗ್ಗೆಯಾಗಲೀ ಏನನೂ ಹೇಳಲಿಲ್ಲ. ಆದರೆ ತೀರ್ಮಾನವಾಗಿರುವ ಗಡಿ ಬಗ್ಗೆ ಮತ್ತೆ ಮಾತುಕತೆ ನಡೆಸಲು ಕಾರಣವೇನು? ಇದರಲ್ಲಿ ಏನೋ ಪಿತೂರಿ ಇರಬಹುದೆಂದು ಜನರು ಹೇಳುತ್ತಿದ್ದಾರೆ. ಇದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಬೇರೆ ಬೇರೆ ವಿಷಯಗಳಿಗೆ ಸಂಬಂಧಪಟ್ಟಂತೆ ಅಂಕಿ ಅಂಶಗಳನ್ನು ಕೊಟ್ಟರು. ಈ ಅಂಕಿ ಅಂಶಗಳಲ್ಲಿ ಸತ್ಯಾಸತ್ಯಗಳೇನಿವೆ ಎಂಬತಕ್ಕಂಥ ವಿಚಾರವನ್ನು ಬಜೆಟ್ ಭಾಷಣದ ಸಮಯದಲ್ಲಿ ತಿಳಿಸುತ್ತೇನೆ. ನಾನು

ಮಾತನಾಡುವಾಗ ಅಂಕಿ ಅಂಶಗಳ ಒಂದು ಪಟ್ಟಿಯನ್ನೇ ಕೊಟ್ಟಿದ್ದೇನೆ. ನಾನು ಇಲ್ಲಿ ಅನೇಕ ಸಲ ಭಾಷಣ ಮಾಡುವಾಗ ರೈತರ ಬಗ್ಗೆ, ಉದ್ಯೋಗ ಖಾತರಿ ಯೋಜನೆ ಬಗ್ಗೆ, ಅಂತ್ಯೋದಯದ ಬಗ್ಗೆ ಸಾಕಷ್ಟು ವಿವರಗಳನ್ನು ಕೊಟ್ಟು ಹೇಳಿದ್ದೇನೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಈ ಬಗ್ಗೆ ಒಂದು ಮಾತನ್ನೂ ಸಹ ಹೇಳಲಿಲ್ಲ. ನಾನು ಕೊಟ್ಟ ಅಂಕಿಅಂಶಗಳ ಬಗ್ಗೆ ವಿಶ್ಲೇಷಣೆ ಮಾಡದೆ ಏಕಪಕ್ಷೀಯವಾದಂಥ ವಾದ ಮಾಡಿದ್ದಾರೆ ಮತ್ತು ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ.

ಇನ್ನು ಮಾನ್ಯ ಮುಖ್ಯಮಂತ್ರಿಗಳು ನ್ಯಾಯಾಂಗ ವಿಚಾರಣೆ ಮಾಡುವ ಘೋಷಣೆಯನ್ನು ಏನು ಮಾಡಿದರು, ಅದನ್ನು ನಾನು ಒಪ್ಪುತ್ತೇನೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ನ್ಯಾಯಾಂಗ ತನಿಖೆ ಮಾಡುವಾಗ ಹೈಕೋರ್ಟಿನ ನ್ಯಾಯಾಧೀಶರಿಗೆ ಬದಲು..................

ಶ್ರೀ ವಿ.ಎಸ್. ಆಚಾರ್ಯ.— ಈಗ ಹೈಕೋರ್ಟಿನ ಮುಂದೆ ಅನೇಕ ಕೇಸ್‌ಗಳು ಬಾಕಿ ಇವೆ. ಜಡ್ಜ್‌ಗಳು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ಜಡ್ಜ್‌ಗಳನ್ನು ಮೊದಲು ನೇಮಕ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.— ಈ ಪ್ರಕರಣ ಹೊರಬಂದ ಕೂಡಲೇ ನಾನು ಸುಪ್ರೀಂ ಕೋರ್ಟಿನ ನ್ಯಾಯಾಧೀಶರೊಬ್ಬರಿಂದ ತನಿಖೆ ಮಾಡಿಸಿ ಎಂದು ಹೇಳಿದ್ದೆ. ಆದ್ದರಿಂದ ಅದನ್ನು ನಾನು ಈಗಲೂ ಸ್ಪಷ್ಟೀಕರಿಸುತ್ತೇನೆ. ಸುಪ್ರೀಂ ಕೋರ್ಟಿನ ಜಡ್ಜ್ ಒಬ್ಬರ ಮೂಲಕ ಇದನ್ನು ತನಿಖೆ ಮಾಡಿಸಿ. The Chief Minister—the person who wants to institute judicial enquiry himself said that it is true, it is a matter of fact. This is there on the yesterday's records. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಸುಪ್ರೀಂ ಕೋರ್ಟಿನ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆಯನ್ನು ಮಾಡಿಸುವಂತಹ ಪ್ರಯತ್ನವನ್ನು ತಾವು ಮಾಡುತ್ತೀರಾ?

ಶ್ರೀ ಜಿ. ಮಾದೇಗೌಡ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಎರಡು ವಿಷಯಗಳಿಗೆ ಸಂಬಂಧಪಟ್ಟ ಹಾಗೆ ವಿವರಣೆಯನ್ನು ಕೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ರಾಜ್ಯದಲ್ಲಿ ಕಾನೂನು ಮತ್ತು ಶಾಂತಿ ಪರಿಪಾಲನೆಯನ್ನು ಮಾಡಿಕೊಂಡು ಬರಲು ಕೆಲವು ರಾಜಕೀಯ ಪಕ್ಷಗಳು ಮತ್ತು ರಾಜಕೀಯ ಶಕ್ತಿಗಳು ಶಾಂತಿ ಮತ್ತು ಕಾನೂನನ್ನು ಹದಗೆಡಿಸಿವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಆದರೆ ಅಂಥ ರಾಜಕೀಯ ಪಕ್ಷಗಳು ಮತ್ತು ರಾಜಕೀಯ ಶಕ್ತಿಗಳು ಯಾರ್ಯಾರು ? ಇವತ್ತು ಈ ದೇಶದಲ್ಲಿ ಅನೇಕ ರಾಜಕೀಯ ಪಕ್ಷಗಳು ಇವೆ. ಯಾವ ಪಕ್ಷಗಳು ಯಾವ ರಾಜಕೀಯ ಶಕ್ತಿಗಳು ಅಶಾಂತಿಯನ್ನುಂಟು ಮಾಡಲು ಪ್ರಯತ್ನ ಮಾಡಿವೆ ಎಂಬುದು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕು. ಆ ರೀತಿ ಯಾರಾದರೂ ಮಾಡಿದ್ದರೆ ಅವರ ಮೇಲೆ ಸರ್ಕಾರ ಏತಕ್ಕೆ ಸೂಕ್ತ ಕ್ರಮ ತೆಗೆದುಕೊಂಡಿಲ್ಲ ? ಮತ್ತೆ ನಿನ್ನೆಯ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಏನೆಂದರೆ ಕಾವೇರಿ ನೀರನ್ನು ತಮಿಳುನಾಡಿಗೆ ಈಗಾಗಲೇ ಐದು ಟಿ. ಎಂ. ಸಿ. ಯಷ್ಟು ಕೊಟ್ಟಿದ್ದೇವೆ. ಇನ್ನೂ ಐದು ಟಿ. ಎಂ. ಸಿ. ನೀರನ್ನು ಕೊಡುವವರಿದ್ದೇವೆಂದು. ಆದರೆ ಈ ಬಗ್ಗೆ ಸಮಾಲೋಚನೆ ಮಾಡಲು ನಮ್ಮ ಮಾನ್ಯ ಲೋಕೋಪಯೋಗಿ ಮಂತ್ರಿಗಳಾದಂಥ ಶ್ರೀ ಮಾನ್ಯ ದೇವೇಗೌಡರು ಸರ್ವಪಕ್ಷಗಳ ಸಭೆಯನ್ನು ಕರೆದು ಆ ಪಕ್ಷಗಳ ಅನುಮತಿಯನ್ನು ಮತ್ತು ಅಭಿಪ್ರಾಯವನ್ನು ಪಡೆದು ನೀರು ಕೊಡುತ್ತೇವೆಂದು ಹೇಳಿದರು. ಆದರೆ ಯಾವ ಪಕ್ಷದ ಅಭಿಪ್ರಾಯವನ್ನು ಸಹ ಇವರು ತೆಗೆದುಕೊಳ್ಳದೆ ತಮಿಳುನಾಡಿಗೆ ನೀರು ಕೊಟ್ಟಿದ್ದಾರೆ. ಸ್ವಾಮಿ ಇವತ್ತು ನಮ್ಮ ಮಂಡ್ಯ ಜಿಲ್ಲೆಯಲ್ಲಿ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುವ ಪರಿಸ್ಥಿತಿಯಲ್ಲಿದೆ. ನಮ್ಮ ಕನ್ನಂಬಾಡಿ ಅಚ್ಚುಕಟ್ಟು ಪ್ರದೇಶದ ರೈತರಿಗೆ ಸರ್ಕಾರದಿಂದ ನೋಟೀಸ್ ಕೊಡುತ್ತಿದ್ದಾರೆ. ಏನೆಂದರೆ ಬೇಸಿಗೆ ಬೆಳೆಯನ್ನು ಯಾರೂ ಮಾಡಬಾರದು? ಒಂದು ವೇಳೆ ಮಾಡಿದರೆ ಸರ್ಕಾರ ಅದಕ್ಕೆ ಜವಾಬ್ದಾರರಲ್ಲ ಎಂದು. ಕಾರಣವೇನೆಂದರೆ ನೀರು ಇಲ್ಲದೆ ಇರುವುದೇ ಕಾರಣವೆಂದು ಸಹ ಅವರು ತಿಳಿಸಿದ್ದಾರೆ. ಆದರೆ ಇವತ್ತು ಅಲ್ಲಿ ಸುಮಾರು 60 ಸಾವಿರ ಎಕರೆಯಷ್ಟು ಜಮೀನಿನಲ್ಲಿ ರೈತರು ಬೇಸಾಯ ಮಾಡಿದ್ದಾರೆ. ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತಿದೆ. ಇದಕ್ಕೆ ಯಾರು ಜವಾಬ್ದಾರರು? ಸರ್ಕಾರದವರು ಕೊಟ್ಟಂತಹ ಹೇಳಿಕೆಗಳಿಗೆ ಇದು ತದ್ವಿರುದ್ಧವಾಗುವುದಿಲ್ಲವೇ? ಇದೇ ರೀತಿಯಲ್ಲಿ ನಾವು ಬೇರೆ ರಾಜ್ಯಗಳಿಗೆ ನೀರು ಕೊಡುತ್ತಾ ಹೋದರೆ ನಮ್ಮ ಹಕ್ಕನ್ನು ನಾವೇ ಕಳೆದುಕೊಂಡಂತೆ ಆಗುತ್ತದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು

ಶ್ರೀ ಸಿ. ಬೈರೇಗೌಡ.— ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲು ನಿಂತಾಗ ನಾನು ತಿಳಿದುಕೊಂಡಿದ್ದೆ, ಅವರು ಅವರ ರಾಜೀನಾಮೆಯನ್ನು ಕೊಡುತ್ತಾರೆಂದು. ಆದರೆ ಅವರು ಆ ಕೆಲಸವನ್ನು ಮಾಡಲಿಲ್ಲ. ಸ್ವಾಮಿ ನಾನು ಸುಮಾರು ಮೂರುದಿವಸಗಳ ಹಿಂದೆ ನನ್ನ ಅಧ್ಯಕ್ಷಗಿರಿಗೆ ರಾಜೀನಾಮೆಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಬರೆದು ಕೊಟ್ಟಿದ್ದೇನೆ. ಆ ಪತ್ರ

ಈಗ ಮಾನ್ಯಮುಖ್ಯಮಂತ್ರಿಗಳ ಬಳಿಯಲ್ಲಿ ಇದೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ನಾನು ಕೂಡ ನ್ಯಾಯಾಂಗ ತನಿಖೆಯನ್ನು ಸ್ವಾಗತ ಮಾಡುತ್ತೇವೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂತಹ ಕೆಲವು ಅಂಕಿಅಂಶಗಳ ಬಗ್ಗೆ ಬಜೆಟ್ ಭಾಷಣ ಬಂದಾಗ ಮಾತನಾಡುತ್ತೇನೆಂದು ಹೇಳಿದರು. ಆ ಒಂದು ಮುನ್ಸೂಚನೆಯನ್ನು ಮಾನ್ಯ ವಿರೋದಪಕ್ಷದ ನಾಯಕರು ಕೊಟ್ಟಿದ್ದಾರೆ. ಅವರೆ ಅವರು ರಾಜೀನಾಮೆಯನ್ನು ಕೊಡುವಂಥ ಯೋಚನೆಯನ್ನು ಏತಕ್ಕೆ ಮಾಡಬಾರದು? ಮಾನ್ಯ ವಿರೋಧಪಕ್ಷದ ನಾಯಕರು ಕರ್ನಾಟಕ ರಾಜ್ಯದ 4 ಕೋಟಿ ಜನತೆಯ ಬಗ್ಗೆ ಬಹಳ ಅಮೋಘವಾದಂಥ ಭಾಷಣವನ್ನು ಸುಮಾರು 5 ಗಂಟೆಗಳ ಕಾಲ ಮಾಡಿದ್ದಾರೆ. ಆದ್ದರಿಂದ ಕರ್ನಾಟಕ ರಾಜ್ಯದ ಜನತೆಯ ಮನಸ್ಸನ್ನು ತಾವು ಒಲಿಸಿಕೊಳ್ಳಬೇಕಾದರೆ ತಾವು ರಾಜೀನಾಮೆಯನ್ನು ಕೊಡುವುದು ಬಹಳ ಅಗತ್ಯವಿದೆ ....

ಶ್ರೀ ಎಂ. ವೀರಪ್ಪಮೊಯಿಲಿ.— ಮಾನ್ಯ ಅಧ್ಯಕ್ಷರೇ, ಈಗ ನನ್ನ ಮೇಲೆ ಮಾನ್ಯ ಸದಸ್ಯರು ಮಾಡಿದಂಥ ಆಪಾದನೆಗೆ ಸಂಬಂಧಪಟ್ಟ ಹಾಗೆ ನ್ಯಾಯಾಂಗ ತನಿಖೆಯನ್ನು ಸರ್ಕಾರದವರು ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ನನ್ನ ಮೇಲೆ ಒಂದು ಮಿತ್ಯಾರೋಪವನ್ನು ಮಾನ್ಯ ಮುಖ್ಯ ಮಂತ್ರಿಗಳು ಹೊರಗೆಡೆ ಮಾಡಿದರು. ಆ ಮಿತ್ಯಾರೋಪವಾದರೂ ಏನೆಂದರೆ ಸುಮಾರು 3ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ತಂದು ಆ 3ಕೋಟಿ ರೂಪಾಯಿಗಳಲ್ಲಿ ಸುಮಾರು ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟು ಒಬ್ಬ ಶಾಸಕರನ್ನು ಖರೀದಿ ಮಾಡುತ್ತಿದ್ದಾರೆಂದು. ಅದಕ್ಕೆ ನಾನು ಕೂಡ ಪತ್ರಿಕೆಯಲ್ಲಿ ಉತ್ತರ ಕೊಟ್ಟಿದ್ದೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕೂಡ ನನ್ನ ಮೇಲೆ ಸುಮಾರು 3ಕೋಟಿ ರೂಪಾಯಿಗಳ ಒಂದು ಆರೋಪವನ್ನು ಮಾಡಿದ್ದಾರೆ. ಆ ಬಗ್ಗೆ ಕೂಡ ವಿಚಾರಣೆ ನಡೆಯಬೇಕು. ಆ ಬಗ್ಗೆ ಒಂದು ನ್ಯಾಯಾಂಗ ತನಿಖೆಯಾಗಬೇಕು........ ....

ಶ್ರೀ ಸಿ. ಬೈರೇಗೌಡ.— ತಾವು ನಿಮ್ಮ ಎದೆಯ ಮೇಲೆ ಕೈಇಟ್ಟುಕೊಂಡು ನಿಮ್ಮ ಆತ್ಮ ಸಾಕ್ಷಿ ಯಾಗಿ ನಾನು ಕೊಟ್ಟಿಲ್ಲವೆಂದು ಹೇಳಿ ನೋಡೋಣ.

ಶ್ರೀ ಎಂ. ವೀರಪ್ಪಮೊಯಿಲಿ.— ಯಾರ ಮನಸ್ಸಿನಲ್ಲಿ ಕಲುಷಿತವಾಗಿದೆ ಎಂಬುದು ಜನರಿಗೆ ಈಗಾಗಲೇ ಚೆನ್ನಾಗಿ ಗೊತ್ತಾಗಿದೆ.

ಶ್ರೀ ಸಿ. ಬೈರೇಗೌಡ.— ನಿಮ್ಮ ಆತ್ಮಸಾಕ್ಷಿಯಾಗಿ ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ.— ಮಾನ್ಯ ಸದಸ್ಯರು ರಾಜಕೀಯ ಬಣ್ಣ ಕಟ್ಟಿ ಈ ರೀತಿ ಮಾಡಿದ್ದಾರೆ. ಅದು ಏನೇ ಆದರೂ ಪರವಾಗಿಲ್ಲ. ತಾವು ನ್ಯಾಯಾಂಗ ತನಿಖೆಯನ್ನು ಸುಪ್ರೀಂ ಕೋರ್ಟಿನ ನ್ಯಾಯಾಧೀಶರಿಂದ ಮಾಡಿಸಿದರೆ ಒಳ್ಳೆಯದು, ಏತಕ್ಕೆಂದರೆ ನಿಮ್ಮ ಮುಖ್ಯ ಮಂತ್ರಿಗಳು ಸುಮಾರು 3ಕೋಟಿ ರೂಪಾಯಿಗಳ ಒಂದು ಆರೋಪವನ್ನು ಮಾಡಿದ್ದಾರೆ. ಆದ್ದರಿಂದ ಅವರು ಕೂಡ ಕಟಕಟೆಯಲ್ಲಿ ನಿಲ್ಲಬೇಕು. ಆದ್ದರಿಂದ ಮೊದಲು ನಿಮ್ಮ ಮುಖ್ಯ ಮಂತ್ರಿಗಳು ರಾಜೀನಾಮೆಯನ್ನು ಕೊಡಲಿ ಆ ಮೇಲೆ ಬೇಕಾದರೆ ನಾನು ರಾಜೀನಾಮೆಯನ್ನು ಕೊಡುತ್ತೇನೆ. ಸುಮಾರು 3ಕೋಟಿ ರೂಪಾಯಿಗಳ ಒಂದು ಆಪಾದನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಜವಾಬ್ದಾರಿಯಿಂದ ಮಾಡಿದ್ದಾರೆ. ಆದರೆ ಇವತ್ತು ಅವರು ಆ ಒಂದು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಆ ಒಂದು ಜವಾಬ್ದಾರಿಯಿಂದ ನುಣುಚಿಕೊಳ್ಳುವ ಪ್ರಯತ್ನವನ್ನು ಮಾಡಿದಂಥ ಒಬ್ಬ ಹೇಡಿ ಮುಖ್ಯ ಮಂತ್ರಿಗಳು ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಮಾನ, ಮರ್ಯಾದೆ, ನಾಚಿಕೆ ಎಂಬುದು ಏನಾದರೂ ಇದ್ದರೆ ಅವರು ತಕ್ಷಣ ರಾಜೀನಾಮೆಯನ್ನು ಕೊಟ್ಟು ಸುಪ್ರೀಂ ಕೋರ್ಟಿನ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆಯನ್ನು ಮಾಡಿಸಲಿ. ಆದರೆ ಅವರು ಆ ಕೆಲಸವನ್ನು ಮಾಡದೆ ಪಲಾಯನವಾಗುವಂಥ ಕೆಲಸವನ್ನು ಮಾಡಿ ನನ್ನ ಮೇಲೆ ನ್ಯಾಯಾಂಗ ತನಿಖೆಯನ್ನು ಮಾಡುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.— ಅವರು ರಾಜೀನಾಮೆ ಕೊಡಬೇಕೆಂದು ಇವರು ಹೇಳುತ್ತಾರೆ, ಇವರು ರಾಜೀನಾಮೆ ಕೊಡಬೇಕೆಂದು ಅವರು ಹೇಳುತ್ತಾರೆ. ಇಬ್ಬರೂ ರಾಜೀನಾಮೆಯನ್ನು ಕೊಟ್ಟರೆ, ವಿರೋಧಪಕ್ಷದ ನಾಯಕರು ಮತ್ತು ಮುಖ್ಯಮಂತ್ರಿಗಳು ರಾಜೀನಾಮೆಯನ್ನು ಕೊಟ್ಟರೆ ಈ ಸದನ ಏನಾಗಬೇಕು. ಆ ಕಡೆ ಯಾರನ್ನು ಕೂರಿಸಬೇಕು, ಈ ಕಡೆ ಯಾರನ್ನು ಕೂರಿಸಬೇಕೆಂಬುದರಲ್ಲಿ ತಕರಾರು ಬರುತ್ತದೆ.

ಶ್ರೀ ಟಿ.ಎಚ್. ಹನುಮಂತರಾಯಪ್ಪ — ಕಾನೂನು ಪ್ರಕಾರ ಕೆಲಸ ಮಾಡುತ್ತೇವೆಂದು ನೀವು ಹೇಳಿಕೊಳ್ಳುತ್ತೀರಿ. ಆಸ್ಪತ್ರೆಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಕೊಡಬೇಕಾದರೆ ಕೆಲವು ನಿಯಮಗಳನ್ನು ಪಾಲನೆ ಮಾಡಬೇಕಾಗುತ್ತದೆ. ಈಗ ಸರ್ಕಾರ ಯಾವುದೇ ಆಸ್ಪತ್ರೆಗಳನ್ನು ಕೊಡುವುದಿಲ್ಲವೆಂದು ಹೇಳಿದ್ದೀರಿ. ಕೊಡುವುದಿಲ್ಲವೆಂದು ಹೇಳಿದ್ದರೂ 60 ಆಸ್ಪತ್ರೆಗಳನ್ನು ಕೊಟ್ಟಿದ್ದೀರಿ. ಆಸ್ಪತ್ರೆಗಳನ್ನು ಕೊಡಬೇಕಾದರೆ ಸರ್ಕಾರಿ ಕಾನೂನು ಇದೆ. 25 ಸಾವಿರ ರೂಪಾಯಿಗಳನ್ನು ಡಿಪಾಸಿಟ್ ಆಗಿ ಹಣ ಕೊಡಬೇಕು, 2 ಎಕರೆ ಜಮೀನು ಕೊಡಬೇಕು ಅದು ಕಾನೂನಿನಲ್ಲಿದೆ. ನೀವು ಕೊಟ್ಟಿರತಕ್ಕ

ಆಸ್ಪತ್ರೆಗಳನ್ನು ಯಾರ್ಯಾರಿಗೆ ಕೊಟ್ಟಿದ್ದೀರಿ? ಅವರು ಎಷ್ಟೆಷ್ಟು ಜಮೀನು ಕೊಟ್ಟಿದ್ದಾರೆ? ನನ್ನ ಕ್ಷೇತ್ರದ ದೊಡ್ಡೇರಿ ಮತ್ತು ಬಡವನಹಳ್ಳಿಯವರು ಆಸ್ಪತ್ರೆ ಬೇಕೆಂದು ಡಿಪಾಸಿಟ್ ಹಣ ಮತ್ತು ಭೂಮಿಯನ್ನು ಕೊಟ್ಟಿದ್ದರೂ ಅವರಿಗೆ ಕೊಡದೆ ಬೇರೆಯವರಿಗೆ ಕೊಟ್ಟಿದ್ದೀರಿ. ಅವರಿಗೆ ಏತಕ್ಕೆ ಕೊಡಲಿಲ್ಲ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ಉದ್ಯೋಗ ದೃಢೀಕರಣ ಯೋಜನೆ ಅಂಗವಾಗಿ ಕೆಲಸ ಮಾಡಿರತಕ್ಕ ಕೂಲಿಕಾರರಿಗೆ ಇದುವರೆಗೆ ಕೂಲಿ ಕೊಟ್ಟಿಲ್ಲ. ತುಮಕೂರು ಜಿಲ್ಲೆಗೆ ಇದುವರೆಗೆ 15ಲಕ್ಷ ರೂಪಾಯಿಗಳನ್ನು ಕೊಟ್ಟಿಲ್ಲ. ಕೂಲಿಕಾರರು ಕಂಟ್ರ್ಯಾಕ್ಟರುಗಳ ಹತ್ತಿರ ತಿರುಗಿ ತಿರುಗಿ ಸಾಕಾಗಿ ಮನೆ ಕಡೆ ಹೋಗುತ್ತಾರೆ. ನಿಮ್ಮ ಹತ್ತಿರ ಹಣ ಇಲ್ಲದಿದ್ದರೆ ಇಂತಹ ಯೋಜನೆಗಳನ್ನು ಏತಕ್ಕೆ ಕೈಗೊಳ್ಳುತ್ತೀರಿ? ನಿಮ್ಮ ಹತ್ತಿರ ಇರತಕ್ಕ ಯೋಜನೆಗಳಿಗೆ ಹಣ ಇಲ್ಲದೇ ಇರುವಾಗ ಬೇರೆ ಯೋಜನೆಗಳನ್ನು ಏತಕ್ಕೆ ಹಾಕಿಕೊಳ್ಳುತ್ತೀರಿ? ಕೂಲಿ ಮಾಡಿರತಕ್ಕ ಬಡ ಜನರಿಗೆ ಕೊಡಬೇಕಾದ ಹಣವನ್ನು ಮೊದಲುಕೊಡುವ ವ್ಯವಸ್ಥೆ ಮಾಡಿ. ರಾಜ್ಯದ ಯಾವುದೇ ಅಭಿವೃದ್ಧಿ ಕಾರ್ಯಗಳಲ್ಲಿ ನಾವೆಲ್ಲರೂ ಒಂದಾಗಿ ಹೋಗಬೇಕು. ನಾವು ಎಲ್ಲರೂ ಸಂಯಮದಿಂದ ಇರಬೇಕು. ನಮ್ಮ ಮುಖ್ಯ ಮಂತ್ರಿಗಳು ನಮ್ಮ ಕ್ಷೇತ್ರಗಳಲ್ಲಿ ಪ್ರವಾಸ ಮಾಡತಕ್ಕ ಕಾಲದಲ್ಲಿ ಕಾಂಗ್ರೆಸ್–(ಐ) ಶಾಸಕರನ್ನು ಸೇರಿಸಿಕೊಳ್ಳುವುದಿಲ್ಲ. ಅವರ ಪಾರ್ಟಿಯ ಜನರನ್ನು ಮಾತ್ರ ಸೇರಿಸಿಕೊಳ್ಳುತ್ತಾರೆ. ನಮ್ಮ ರಾಜ್ಯದ ಹಣವನ್ನು ವೆಚ್ಚ ಮಾಡಿ ಸಾರ್ವಜನಿಕ ಸಮಾರಂಭಗಳನ್ನು ಮಾಡುವಾಗ ಲೋಕಸಭಾ ಸದಸ್ಯರು ಮತ್ತು ಸ್ಥಳೀಯ ಶಾಸಕರನ್ನು ಕರೆಯದೆ ಕೈಬಿಡುತ್ತಾರೆ. ನಮಗೆ ಆ ಸಮಾರಂಭಗಳಲ್ಲಿ ಹಾರ ಹಾಕಿಸಿಕೊಳ್ಳಬೇಕೆಂಬ ಹಂಬಲ ಇರುವುದಿಲ್ಲ. ಮುಖ್ಯಮಂತ್ರಿಗಳು ಬಂದಂತಹ ಕಾಲದಲ್ಲಿ ನಮ್ಮ ಕ್ಷೇತ್ರದಲ್ಲಿ ಆಗಬೇಕಾಗಿರುವ ಕೆಲಸಕಾರ್ಯಗಳನ್ನು ತಮ್ಮ ಗಮನ ತರಲಿಕ್ಕೆ ಅವಕಾಶ ಮಾಡಿ ಕೊಡಿ. ಬೇರೆ ಪಕ್ಷದ ಶಾಸಕರಿಗೆ ಯಾವುದೇ ಅವಕಾಶಗಳನ್ನು ಮಾಡಿಕೊಡುತ್ತಿಲ್ಲ. ಇವತ್ತು ಜನತಾ ಪಕ್ಷದ ಕಾರ್ಯಕ್ರಮಗಳು ಎಂದು ಹೇಳಿಕೊಂಡು ಸಾರ್ವಜನಿಕ ಸಭೆಗಳನ್ನು ಮಾಡಿದ್ದಾರೆ. ಇದರ ಬಗ್ಗೆ ಮುಖ್ಯಮಂತ್ರಿಗಳಿಗೆ ನಾನು ಬರೆದಿದ್ದೇನೆ. ಜನತಾ ಪಕ್ಷದ ಕಾರ್ಯಕ್ರಮಗಳು ಎಂದು ಹೇಳಿಕೊಂಡು ಸರ್ಕಾರಿ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಸರ್ಕಾರದ ಕಾರುಗಳನ್ನು ಉಪಯೋಗಿಸಿದ್ದಾರೆ, ಸರ್ಕಾರಿ ಯಂತ್ರಗಳನ್ನು ಬಳಸಿಕೊಂಡಿದ್ದಾರೆ. ಯಾವ ತಾರತಮ್ಯವನ್ನು ಮಾಡದೇ ಎಲ್ಲರೂ ಒಂದೇ ಎನ್ನುವ ಭಾವನೆಯನ್ನು ಇಟ್ಟುಕೊಂಡು ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಾಣಿಕ್‌ರಾವ್ ಪಾಟೀಲ್.— Sir, today is rather a sort of..............

ಶ್ರೀ ಜಿ ಎಂ. ಕಾನಡೆ.— ದಯವಿಟ್ಟು ಕನ್ನಡದಲ್ಲಿ ಮಾತನಾಡಿ.

ಶ್ರೀ ಮಾಣಿಕ್‌ರಾವ್ ಪಾಟೀಲ್.— ಮಾನ್ಯ ಮುಖ್ಯ ಮಂತ್ರಿಯವರು ಮಾತನಾಡುವಾಗ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಬೈರೇಗೌಡರ ಪರಸ್ಪರ ಕೌಂಟರ್ ಚಾರ್ಜಸ್ ವಿಷಯದಲ್ಲಿ ಇವತ್ತು ಜ್ಯುಡಿಶಿಯಲ್ ಎನ್‌ಕ್ವೈಯರಿ ಮಾಡತಕ್ಕ ಒಂದು ನಿರ್ಣಯ ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ನಾನು ವೈಯುಕ್ತಿವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. It is a feather on his cap. ಅದೇ ರೀತಿ ಇನ್ನೊಂದು ಅಭಿನಂದನೆ ಅಂದರೆ ಒಂದು ಸತ್‌ಸಂಪ್ರದಾಯ ಹಾಕಿದ್ದಾರೆ. ಮಾನ್ಯ ಬೈರೇಗೌಡರ ಛೇರ್ಮನ್‌ಗಿರಿಗೆ ರಾಜೀನಾಮೆಯನ್ನು ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ಕೂಡ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದೇ ರೀತಿ ....

Sri Ramakrishna Hegde.—That is in anticipation of my decision.

Sri Manik Rao Patil—Sir, I have full faith in the hon'ble Chief Minister and in his sincerity and honesty. There is no doubt about it. I know him from so many years and he was also my 'Guru'

ಶ್ರೀ ಎಂ. ಎಸ್. ಕೃಷ್ಣನ್.—ರಾಮಕೃಷ್ಣಹೆಗ್ಗಡೆಯವರು ಗುರು ಆದಮೇಲೆ, ಗುರುವಿಗೇ ತಿರುಮಂತ್ರ ಹಾಕುತ್ತಿದ್ದೀರಿ ?

ಶ್ರೀ ಮಾಣಿಕ್‌ರಾವ್ ಪಾಟೀಲ್.— ಈಗ ಜ್ಯುಡಿಷಿಯಲ್ ಎನ್‌ಕ್ವಯರಿ ಕಮಿಷನ್ ನೇಮಕ ಮಾಡಲಾಗುತ್ತದೆಂದು ಹೇಳಿದ್ದಾರೆ. ಇವತ್ತು ಬೇರೆ ವಿಷಯಗಳಿಗೆ ಸಂಬಂಧ ಪಟ್ಟಹಾಗೆ ಇಬ್ಬರು ಮಂತ್ರಿಗಳು ಸಂಬಂಧ ಪಟ್ಟಿದ್ದಾರೆ. ಅದರ ಬಗ್ಗೆ ಕೂಡ ಜುಡಿಶಿಯಲ್ ಎನ್‌ಕ್ವಯರಿ ಮಾಡುವುದಕ್ಕೆ ತೀರ್ಮಾನ ಮಾಡಿದ್ದಾರೆ. ಜುಡಿಶಿಯಲ್ ಎನ್‌ಕ್ವಯರಿಯಲ್ಲಿ ತೀರ್ಮಾನ ಆಗುವ ತನಕ ಇಬ್ಬರು ಸಚಿವರ ರಾಜೀನಾಮೆಯನ್ನು ತೆಗೆದುಕೊಳ್ಳಬೇಕು. ಮೇಲ್ಮನೆಯಲ್ಲಿ ಕೂಡ ಇದರ ಬಗ್ಗೆ ಯುನಾನಿಮಸ್ ಆಗಿ ತೀರ್ಮಾನ ಮಾಡಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಯುನಾನಿಮಸ್ ಆಗಿ ಎಲ್ಲಿ ತೀರ್ಮಾನ ಮಾಡಿದ್ದಾರೆ ?

Sri Manik Rao Patil.—When it is passed by majority of votes,

it is an unanimous decision. If at all the Hon'ble Chief Minister wanted to be fair in politics and wanted to maintain his integrity, he must force those two Ministers to submit their resignations, otherwise it will have far reaching consequences

Sri C Byregowda – What about your dear leader ?

Sri Manik Rao Patil —Sir, once again through you I appeal to the Hon'ble Chief Minister to clear the doubt. Sir, I hope that the Hon'ble Chief Minister will accept the resignation of Mr. Byregowd's and also force the two ministers to submit their resignation until judicial probe is over.

Sri C Byregowda.—What about your dear leader ?

ಶ್ರೀ ಎಂ. ಎಸ್. ಕೃಷ್ಣನ್.— ನಾನು ಮಾತನಾಡುವಾಗ ಎರಡು ಮೂರು ಸಲಹೆಗಳನ್ನು ಕೊಟ್ಟಿದ್ದೇನೆ. ಒಂದು ಬೆಲೆ ಏರಿಕೆಯ ಬಗ್ಗೆ, ಅದರ ಬಗ್ಗೆ ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಗರಗಳಲ್ಲಿ ಮುಖ್ಯವಾಗಿ ಬೇರೆ ಪಟ್ಟಣಗಳಲ್ಲಿ ಬೆಲೆಗಳು....

ಶ್ರೀ ಕೆ. ಹೆಚ್. ರಂಗನಾಥ್.—ಹಳ್ಳಿಗಳಲ್ಲೂ ಸಹ ರಾಗಿ ಇವತ್ತು 2ರೂಪಾಯಿ 10ಪೈಸೆಗೆ ಮಾರುತ್ತಿದ್ದಾರೆ. ಮುಖ್ಯಮಂತ್ರಿಗಳು ರಾಗಿಯ ಬೆಲೆ 1—80ರಿಂದ 1—90ಇದೆಯೆಂದು ಹೇಳಿದ್ದಾರೆ. ನಗರಗಳಲ್ಲಿ ಎಂದು ಏತಕ್ಕೆ ಹೇಳುತ್ತೀರಿ ?

ಶ್ರೀ ಎಂ. ಎಸ್. ಕೃಷ್ಣನ್.—ಆಯಿತು ಸ್ವಾಮಿ. ಮೊದಲು ನಗರ, ಆಮೇಲೆ ಪಟ್ಟಣ ಆಮೇಲೆ ಹಳ್ಳಿ, ಅದು ಆದಮೇಲೆ ರಂಗನಾಥ್‌ರವರ ಊರು ಅಲ್ಲಿ ಮಾಡೋಣ. ನನ್ನ ಪ್ರಶ್ನೆ ಏನೆಂದರೆ ಸಾರ್ವಜನಿಕ ವಿತರಣಾ ವ್ಯವಸ್ಥೆ ಬಗ್ಗೆ ಮಾತನಾಡಿದ್ದೇನೆ. ಅದನ್ನು ಗ್ರಾಮಾಂತರ ಪ್ರದೇಶಗಳಿಗೆ ವಿಸ್ತರಿಸುವ ರೀತಿಯಲ್ಲಿ ಮಾಡಬೇಕು. ಅತ್ಯಾವಶ್ಯಕ ವಸ್ತುಗಳು ಆದಷ್ಟು ಕಡಿಮೆ ಬೆಲೆಗೆ ಸಿಗುವಂತೆ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕು. ನಗರದ ಹೋಟೆಲ್‌ಗಳಲ್ಲಿ ಬೆಲೆ ವಿಪರೀತ ಜಾಸ್ತಿಯಾಗಿದೆ. ಹಿಂದೆ ಒಂದು ಸಮಿತಿ ಮಾಡಿ ಹೋಟೆಲ್ ಬೆಲೆಗಳು ಇಳಿಯುವಂತೆ ಮಾಡಿದ್ದರು. ಒಂದು ಸಮಿತಿಯನ್ನಾದರೂ ಮಾಡಿ ಅಥವಾ ಎಸ್ಟಿಮೇಟ್ ಕಮಿಟಿಗೆ ಆ ಕೆಲಸ ವಹಿಸಿಕೊಡಬೇಕೆಂದು ಹೇಳುತ್ತೇನೆ. ಇವು ಸಣ್ಣ ಸಣ್ಣ ವಿಷಯಗಳೇ ಇರಬಹುದು, ಪರಿಣಾಮ ಜಾಸ್ತಿ ಇದೆ. ಗ್ರಾಮಾಂತರ ಪ್ರದೇಶದಲ್ಲಿ ಐ ಆರ್. ಡಿ.ಪಿ. ಮತ್ತು ಎನ್ ಆರ್. ಇ ಪಿ. ಯೋಜನೆಗಳಲ್ಲಿ ಯಾವ ರೀತಿ ಕೆಲಸವಾಗಿದೆ, ಅದರ ಬಗ್ಗೆ ತಜ್ಞರ ಕಮಿಟಿ ಮಾಡಿ, ನಿಮ್ಮ 'ಥಿಂಕ್ ಟ್ಯಾಂಕ್' ಬೇರೆ ಇದೆ. ಅದು ಗ್ರಾಮಾಂತರ ಪ್ರದೇಶಗಳ ಬಗ್ಗೆ ಎಷ್ಟು ಗಮನ ಹರಿಸಿದೆ? ಗ್ರಾಮಾಂತರ ಪ್ರದೇಶಗಳ ಜನರಿಗೆ ಯಾವ ರೀತಿಯ ಸೌಲಭ್ಯಗಳನ್ನು ಕೊಡಬೇಕು ಅದರ ಬಗ್ಗೆ ನಾನು ಸುಮಾರು ವಿಷಯಗಳನ್ನು ಹೇಳಿದ್ದೇನೆ. ಅದರ ಬಗ್ಗೆ ತಾವು ಹೇಳಬೇಕು.

ಶ್ರೀ ಎಸ್. ಭೀಮಣ್ಣ ಖಂಡ್ರೆ.—'ಅಕ್ಷರ ಸೇನೆ' ಬಗ್ಗೆ ಹೇಳಿದ್ದೀರಿ. ಕಡ್ಡಾಯ ಶಿಕ್ಷಣ ಆಕ್ಟ್ ಇದೆ. ವಯಸ್ಕರ ಶಿಕ್ಷಣ ಯೋಜನೆ ಇದೆ. ಅಕ್ಷರ ಸೇನೆ ಎಂದು ಹೇಳಿದ್ದೀರಿ ಅದರ ಅರ್ಥವೇನು ? ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದ್ದಾರೆ. ಅದೇನೆಂದರೆ ಕೇಂದ್ರದಿಂದ ಮೂರು ಕೋಟಿ ರೂಪಾಯಿಗಳನ್ನು ತಂದು ಬೈರೇಗೌಡರಿಗೆ 2ಲಕ್ಷ ರೂಪಾಯಿ ಕೊಡಲಾಗಿದೆ ಎಂದು ಹೇಳಿದ್ದಾರೆ ನೀವು ಕೂಡ ಒಂದು ಪಕ್ಷದವರು ಇದ್ದೀರಿ. ಈಗ ಅದರ ಬಗ್ಗೆ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ ಮಾಡಲಿಕ್ಕೆ ಹೊರಟಿದ್ದೀರಿ. ಎನ್‌ಕ್ವಯರಿ ಮಾಡಲಿಕ್ಕೆ ಟರ್ಮ್ಸ್‌ಆಫ್ ರೆಫರೆನ್ಸ್‌ನಲ್ಲಿ ಮುಖ್ಯಮಂತ್ರಿಗಳು ಹೇಳಿರುವ ಮಾತನ್ನು ಸೇರಿಸಬೇಕು. ಒಂದು ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದರು. 'ರೈತರ ಮೂತ್ರ' ಎಂದು ಅವರು ಹೇಳಿದ್ದಾರೆ. ಅದು ನಮಗೆ ಗೊತ್ತಾಗಿಲ್ಲ.

ಉಪಾಧ್ಯಕ್ಷರು.—ಅದು ಹೋಗಲಿ ಬಿಡಿ.

ಶ್ರೀ ಭೀಮಣ್ಣ ಖಂಡ್ರೆ.—ವ್ಯಂಗ್ಯದ ಮಾತನಾಡುವಾಗ ಅದು ನಮಗೆ ಗೊತ್ತಾಗಬೇಕು. ಮೇಲಾಗಿ ಆ ಪದ ಮುಖ್ಯಮಂತ್ರಿಯವರ ಬಾಯಿಂದ ಹೊರಟಿದೆ. ಇದರ ಬಗ್ಗೆ ಕ್ಲಾರಿಫಿಕೇಷನ್ ಮಾಡಿದರೆ ಒಳ್ಳೆಯದ .

ಶ್ರೀ ಎಂ.ಎಸ್. ಕೃಷ್ಣನ್.—ಶಾಲಾ ಶಿಕ್ಷಕರನ್ನು ಟರ್ಮಿನೇಟ್ ಮಾಡುವುದಿಲ್ಲ ಎಂದು ನಾನು ಆಸೆ ಪಡುತ್ತೇನೆ. ಸಾಯಂಕಾಲ ಕ್ಯಾಬಿನೆಟ್ ಮೀಟಿಂಗ್ ಇದೆ ಅದರ ಬಗ್ಗೆ ತೀರ್ಮಾನ ಮಾಡಲಾಗುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ತೀರ್ಮಾನ ಮಾಡುವಾಗ ಒಳ್ಳೆಯ ತೀರ್ಮಾನ ತೆಗೆದುಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ತೆಗೆದುಕೊಂಡ ತೀರ್ಮಾನವನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಮುಖ್ಯಮಂತ್ರಿಯವರು ಕಾವೇರಿ ನೀರನ್ನು ಐದು

ಟಿ ಎಂ ಸಿ ಹೆಚ್ಚು ಬಿಡಬೇಕಾಗುತ್ತದೆ ಎಂದು ಹೇಳಿದರು. ಹೆಚ್ಚು ನೀರು ಬಿಡುವುದಿದ್ದರೆ ನಮ್ಮನ್ನು ಕೇಳುತ್ತೇನೆ ಎಂದು ಅವರು ಅಪ್ಪಣೆ ಕೊಟ್ಟಿದ್ದರು. ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಪ್ರಕಾರ ಇನ್ನೂ ಐದು ಟಿ.ಎಂ.ಸಿ. ನೀರು ಬಿಡಬೇಕಾಗುತ್ತದೆ. ಇಲ್ಲಿರುವ ಪರಿಸ್ಥಿತಿಯನ್ನು ತಾವು ದಯವಿಟ್ಟು ನೋಡಬೇಕು. ಆ ಸ್ಥಳದ ಶಾಸಕರನ್ನು ಕೇಳಿದರೆ ಅವರು ಹೇಳುತ್ತಾರೆ ರೈತರಿಗೆ ಇರತಕ್ಕಂಥ ತೊಂದರೆಗಳನ್ನು ಪೂರ್ಣವಾಗಿ ತಿಳಿದು ವಿರೋಧ ಪಕ್ಷದ ನಾಯಕರ ಜೊತೆ ಸಮಾಲೋಚನೆ ಮಾಡಿ ನೀರು ಬಿಡುವ ವ್ಯವಸ್ಥೆ ಮಾಡಬೇಕು. ಇಲ್ಲದೇ ಹೋದರೆ ಇದೊಂದು ಅಭ್ಯಾಸವಾಗಿಬಿಡುತ್ತದೆ. ಹಿಂದಿನ ಸರ್ಕಾರದವು ಕೊಟ್ಟಿದ್ದರು. ನಾವೇಕೆ ಕೊಡಬಾರದು ಎಂದು ಕೇಳಬಹುದು, ಪ್ರಶ್ನೆ ಇರುವುದು ಇದಲ್ಲ. ಬಹುಮುಖ್ಯವಾಗಿ ನಮ್ಮ ರಾಜ್ಯದ ಹಿತವನ್ನು ಕಾಪಾಡತಕ್ಕಂಥ ದೊಡ್ಡ ಪ್ರಶ್ನೆ. ವಿರೋಧ ಪಕ್ಷದ ನಾಯಕರುಗಳನ್ನು, ನಮ್ಮ ಪಕ್ಷದ ನಾಯಕರನ್ನೂ ಸೇರಿಸಿ ಮುಂದಿನ ಕ್ರಮ ಏನು ಮಾಡಬೇಕು ? ತಾತ್ಕಾಲಿಕವಾಗಿ ಕೊಟ್ಟಿದ್ದು, ಇನ್ನೂ ಹೆಚ್ಚು ಕೊಡಬೇಕಾದರೆ ಪರಿಸ್ಥಿತಿ ಏನಾಗುತ್ತದೆ ? ಇದರ ಬಗ್ಗೆ ಪೂರ್ಣವಾಗಿ ಸಮಾಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಪಂಪಾಪತಿ.— ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ಆದರೆ ಕೃಷಿ ಕಾರ್ಮಿಕರ ಬಗ್ಗೆ ನಾನು ಒಂದು ಮಾತನ್ನು ಹೇಳಿದ್ದೆ. ಕೃಷಿ ಕಾರ್ಮಿಕರಲ್ಲಿ ಹೆಚ್ಚಾಗಿ ಹೆಂಗಸರು ಹಳ್ಳಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಹೆಂಗಸರು ಕೈಗಾರಿಕೆಗಳಲ್ಲಿ ಕೆಲಸ ಮಾಡುವುದೇ ಆಗಲಿ ಅಥವಾ ಸರ್ಕಾರಿ ನೌಕರಿಯಲ್ಲಿದ್ದರೆ ಅವರಿಗೆ ಹೆರಿಗೆ ಭತ್ಯ ಅಂತ ಕೊಡುತ್ತಾರೆ. ಇದನ್ನು ಕೃಷಿ ಕಾರ್ಮಿಕರಿಗೂ ಕೂಡ ಅನ್ವಯಿಸುವ ರೀತಿಯಲ್ಲಿ ಸರ್ಕಾರ ಒಂದು ಅವಕಾಶವನ್ನು ಒದಗಿಸಿಕೊಡಬೇಕೆಂದು ನಾನು ಹಿಂದಿನ ಸರ್ಕಾರ ಇದ್ದಾಗಲೂ ಹೇಳಿದ್ದೆ. ಈಗಲೂ ಕೂಡ ಹೇಳಿದ್ದೇನೆ. ಇದರ ಬಗ್ಗೆ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತದೆ ಎನ್ನುವುದು ಒಂದು. ಎರಡನೆಯದು ನಗರಸಭೆಗಳಿಗೆ ಇತ್ತೀಚೆಗೆ ಆದಾಯವೇ ಇಲ್ಲ. ಅನೇಕ ನಗರಸಭೆಗಳು ತಮ್ಮ ಸಿಬ್ಬಂದಿ ವರ್ಗಕ್ಕೆ ಸಂಬಳ ಕೊಡುವುದಕ್ಕೆ ಹಣ ಇಲ್ಲದೇ ಇರುವುದರಿಂದ ಬಹಳ ಕಷ್ಟ ಪಡುತ್ತಿದ್ದಾರೆ. ಯಾವ ನಗರಸಭೆಯವರೂ ಕೂಡ ತಮ್ಮ ಪ್ರತಿನಿತ್ಯದ ಕಾರ್ಯಕ್ರಮಗಳನ್ನು ಸರಿಯಾದಂಥ ರೀತಿಯಲ್ಲಿ ನಡೆಸಲು ಸಾಧ್ಯವಾಗುತ್ತಿಲ್ಲ. ನಗರವನ್ನು ಸ್ವಚ್ಛವಾಗಿಡುವುದೇ ಆಗಲಿ, ನಗರ ಪ್ರದೇಶವನ್ನು ಅಭಿವೃದ್ಧಿ ಪಡಿಸುವುದಕ್ಕೇ ಆಗಲಿ, ಇವತ್ತು ಹಣದ ಕೊರತೆ ಬಹಳವಾಗಿದೆ. ಆದ್ದರಿಂದ ನಗರಸಭೆಗಳಿಗೆ ಹೆಚ್ಚಿನ ಆದಾಯಕ್ಕೆ ಏನು ವ್ಯವಸ್ಥೆಯನ್ನು ಸರ್ಕಾರದವರು ಮಾಡಿಕೊಡುತ್ತಾರೆ ಎನ್ನುವುದು ನನ್ನ ಮತ್ತೊಂದು ಪ್ರಶ್ನೆ. ಮತ್ತೆ ಆಹಾರದ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಆಹಾರದ ಲೆವಿ ವಸೂಲು ಮಾಡುತ್ತಿರುವುದರಿಂದ ಪಟ್ಟಣಗಳಲ್ಲಿ ಆಹಾರ ಪದಾರ್ಥಗಳ ಬೆಲೆ ಹೆಚ್ಚಾಗುತ್ತಿದೆ. ಲೆವಿ ಸಂಗ್ರಹಣೆ ಮಾಡಿ ಪಟ್ಟಣ ವಾಸಿಗಳಿಗೆ ಹಂಚತಕ್ಕ ವ್ಯವಸ್ಥೆ ಇದೆ. ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡುತ್ತಿದೆ. ಈ ಲೆವಿ ಪದ್ಧತಿಯನ್ನು ಬಿಟ್ಟುಬಿಟ್ಟು ಸಗಟು ವ್ಯಾಪಾರವನ್ನು ಸರ್ಕಾರವೇ ವಹಿಸಿಕೊಂಡು ಸರಿಯಾದ ನ್ಯಾಯ ಬೆಲೆಯನ್ನು ರೈತರಿಗೆ ಕೊಡತಕ್ಕಂಥಾದ್ದು, ಸೂಕ್ತ ಬೆಲೆಯಲ್ಲಿ ನ್ಯಾಯ ಬೆಲೆ ಅಂಗಡಿಗಳ ಮೂಲಕ ಗ್ರಾಮಾಂತರ ಪ್ರದೇಶಗಳಿಗೆ ಮತ್ತು ಪಟ್ಟಣಗಳಲ್ಲಿ ಕೂಡ ವಿತರಣೆ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಈ ಸರ್ಕಾರವೇನಾದರೂ ಕೈಗೊಳ್ಳುವುದಕ್ಕೆ ಯೋಚನೆ ಮಾಡಿದೆಯೇ ಎನ್ನುವುದು ನನ್ನ ಮತ್ತೊಂದು ಪ್ರಶ್ನೆಯಾಗಿದೆ. ಈ ಮೂರು ಪ್ರಶ್ನೆಗಳಿಗೆ ಉತ್ತರ ನೀಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಡಾ. ವಿ. ಎಸ್. ಆಚಾರ್ಯ.— ಸನ್ಮಾನ್ಯ ಅಧ್ಯಕ್ಷರೇ, ಅನೇಕ ಸಂಗತಿಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಅಂಕಿಅಂಶಗಳನ್ನು ಅದರಲ್ಲೂ ಕೂಡ ಮುಖ್ಯವಾಗಿ ಯೋಜನಾ ಕಾರ್ಯಕ್ರಮದಲ್ಲಿ ಎಷ್ಟೆಷ್ಟು ಬಂಡವಾಳ ಹೂಡಲಾಗಿದೆ, ಎಷ್ಟು ಕಾರ್ಯಗತವಾಗಿದೆ ಎಂಬುದನ್ನು ವಿವರಿಸಿದ್ದಾರೆ. ಬೇರೆ ಪ್ರಸ್ತಾಪ ಮಾಡಲಿಕ್ಕೆ ಏನೂ ಉಳಿದಿಲ್ಲ. ಆದರೆ ಇನ್ನೂ ಅನೇಕ ವಿಷಯಗಳನ್ನು ಆಡಳಿತಾತ್ಮಕವಾಗಿ ಮಹತ್ವ ಇರುವಾಗ ಅವುಗಳ ಬಗ್ಗೆ ಅವರು ಉತ್ತರಿಸಿಲ್ಲವೆಂದು ಕಾಣುತ್ತದೆ. ಒಂದನೆಯದು, ಮಾಜಿ ಗೇಣಿದಾರರ ಬಗ್ಗೆ ಅವರು ಹೇಳಬೇಕಾಗಿತ್ತು. ಸಾವಿರ ಗಟ್ಟಲೆ ಕೇಸುಗಳು ಹೈಕೋರ್ಟಿನಲ್ಲಿ ಪೆಂಡಿಂಗ್ ಇವೆ. ಮಾಜಿ ಗೇಣಿದಾರರು ಏನು ಭೂಮಿಯ ಒಡೆಯರಾಗಿದ್ದಾರೆ, 15 ವರ್ಷ ಅಂತ ಹಿಂದಿನ ಸರ್ಕಾರದವರು ಮಾಡಿದ್ದರು. ಅವರಿಗೆ ಪೂರ್ಣ ಹಕ್ಕು ಕೊಡತಕ್ಕಂಥ ಪ್ರಶ್ನೆ ಮತ್ತು ಈ ರೀತಿಯ ಮೂಲ ಗೇಣಿದಾರರ ವಿಷಯವನ್ನು ಕಂದಾಯ ಸಚಿವರು ಪೂರ್ತಿಯಾಗಿ ಹಕ್ಕು ಕೊಡುವ ಬಗ್ಗೆ ಕಾನೂನು ತಿದ್ದುಪಡಿ ಮಾಡಬೇಕೆಂದು ನಾನು ಹೇಳಿದ್ದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಭಾಷಣದಲ್ಲಿ ಪ್ರಸ್ತಾಪವೇ ಇಲ್ಲ. ಈ ಆಹಾರ ಬೆಲೆಯ ಬಗ್ಗೆ ಮಾನ್ಯ ಮಿತ್ರರಾದಂಥ ಪಂಪಾಪತಿಯವರು ಹೇಳಿದ ಹಾಗೆ ಲೆವಿ ಪದ್ಧತಿ ಭ್ರಷ್ಟಾಚಾರಕ್ಕೆ ಆಸ್ಪದ ಕೊಟ್ಟಿದೆ. ಓಪನ್ ಮಾರ್ಕೆಟ್‌ನಲ್ಲಿ ಆಹಾರ ಸಾಮಗ್ರಿಗಳನ್ನು ಒದಗಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ದುರ್ಬಲ ವರ್ಗದವರಿಗೆ ಮನೆ ಕೊಡುವ ಬಗ್ಗೆ ಹೇಳುವುದಾದರೆ, ಅಂಕಿಅಂಶಗಳ ಪ್ರಕಾರ ಒಂದು ಲಕ್ಷ ಇಪ್ಪತ್ಮೂರು ಸಾವಿರ ಮನೆಗಳನ್ನು ಕೊಡಬೇಕಾಗಿತ್ತು,

ಎಂದು ಕಳೆದ ವರ್ಷ ಮುಂಗಡ ಪತ್ರ ಮಂಡಿಸುವ ಸಂದರ್ಭದಲ್ಲಿ ಹೇಳಿದ್ದರು. ಹಿಂದಿನ ಸರ್ಕಾರ ಮಂಜೂರು ಮಾಡಿದ ಮನೆಗಳನ್ನು ಕಟ್ಟಿ ಪೂರೈಸಿದ ನಂತರವೇ ಹೊಸ ಮನೆಗಳನ್ನು ಮಂಜೂರು ಮಾಡುತ್ತೇವೆ ಎಂದು ಹೇಳಿದ್ದರು. ಒಂದು ಲಕ್ಷ ಐದು ಸಾವಿರ ಮನೆಗಳನ್ನು ಕೊಡುವುದು ಬಾಕಿ ಇತ್ತು. ಈಗ ಐವತ್ತೆಂಟು ಸಾವಿರ ಮನೆಗಳನ್ನು ಕೈಗೆ ತೆಗೆದುಕೊಂಡಿದ್ದೇವೆ ಎಂದು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಹೇಳಿದ್ದಾರೆ. ಇನ್ನೂ ಸುಮಾರು ನಲವತ್ತೈದು ಸಾವಿರ ಮನೆಗಳು ಆಗಬೇಕಾಗಿದೆ. ಇನ್ನು ಎಷ್ಟು ಸಮಯ ಅಂತ ಜನರು ಕಾಯಬೇಕು. ಅವರನ್ನು ಹೀಗೆ ಕಾಯಿಸುವುದು ಸರಿಯಲ್ಲ. ಎಲೆಕ್ಟ್ರಿಸಿಟಿ ಬಗ್ಗೆ ಯೋಜನಾ ವೆಚ್ಚದಲ್ಲಿ ಹೋದವರ್ಷ 96 ಕೋಟಿ ರೂಪಾಯಿ ಮತ್ತು ಈ ವರ್ಷ 109 ಕೋಟಿ ರೂಪಾಯಿ ಖರ್ಚಾಗಿದೆ. ರಾಜ್ಯದಲ್ಲಿ ಇರತಕ್ಕಂಥ ವಿದ್ಯುತ್ ಕೊರತೆಯನ್ನು ಅರಿತು ಕೊಂಡು ಇರುವ ವಿದ್ಯುಚ್ಛಕ್ತಿಯನ್ನು ಸಮನಾಗಿ ಹಂಚತಕ್ಕ ಸಂದರ್ಭದಲ್ಲಿ ಲೋಡ್ ಶೆಡ್ಡಿಂಗ್ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಲೋಡ್ ಶೆಡ್ಡಿಂಗ್ ಮೂರು ಗಂಟೆಗಳಲ್ಲದೆ. ಸಿಕ್ಕಾಪಟ್ಟೆ ಹೋಗು ವುದರಿಂದ ಸಣ್ಣಪುಟ್ಟ ಕೈಗಾರಿಕೆಗಳಿಗೆ ಎಷ್ಟು ಕಷ್ಟವಾಗುತ್ತದೆ ಎನ್ನುವ ಅಂಕಿಅಂಶಗಳನ್ನು ತರಿಸಿಕೊಂಡಿ ದ್ದೇನೆ. ಆರೇಳು ಗಂಟೆ ಬದಲಿಗೆ ಹನ್ನೆರಡು ಗಂಟೆ ಲೋಡ್ ಶೆಡ್ಡಿಂಗ್ ಆಗಿದೆ. ವಿದ್ಯುಚ್ಛಕ್ತಿ ಎಂದರೆ ಉತ್ಪಾದನೆಗೆ ಬಹಳ ಮುಖ್ಯವಾಗಿ ಬೇಕಾದ ಅಂಶ. ಇದರಿಂದ ದೊಡ್ಡಬಳ್ಳಾಪುರದಲ್ಲಿ ಏನಾಗಿದೆ ಎಂಬುದನ್ನು ನೋಡಿದ್ದೇವೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ರಬಕವಿ ಪ್ರದೇಶದಲ್ಲಿ ವಿದ್ಯುಚ್ಛಕ್ತಿ ಸಿಕ್ಕಾ ಪಟ್ಟೆ ನಿಂತುಹೋಗುವುದರಿಂದ ಜನರು ತೊಂದರೆಗೀಡಾಗಿದ್ದಾರೆ. ಇರುವ ವಿದ್ಯುತ್ತನ್ನು ಸಮಾನವಾಗಿ ಹಂಚುವಂತಾಗಬೇಕು. ಇನ್ನು, ನಗರಸಭೆಗಳಿಗೆ ಆರ್ಥಿಕ ಸ್ಥಿತಿಯ ಬಗ್ಗೆ ಮಾನ್ಯ ಸಂಪಾಪತಿಯವರು ಪ್ರಸ್ತಾಪ ಮಾಡಿದ್ದಾರೆ. ಅವುಗಳ ಆರ್ಥಿಕ ಪರಿಸ್ಥಿತಿ ಸುಧಾರಿಸದೇ ಹೋದರೆ ಅವುಗಳು ನಿರ್ನಾಮ ವಾಗುವ ಪರಿಸ್ಥಿತಿ ಬರಬಹುದು. ಇದರ ಬಗ್ಗೆ ಆದ್ಯ ಗಮನ ಕೊಡಬೇಕು. ಹಾಗೆಯೇ ಸ್ಟೈಫೆಂಡರಿ, ಮತ್ತು ಸ್ಥಳೀಯ ಅಭ್ಯರ್ಥಿಗಳ ಬಗ್ಗೆ ಸ್ಪಷ್ಟವಾದಂಥ ಟೈಮ್‌ಬೌಂಡ್ ಕ್ರಮ ತೆಗೆದುಕೊಳ್ಳಬೇಕು. ಇನ್ನೊಂದು ವಿಚಾರ, ಸಂಕಷ್ಟ ನಿವಾರಣೆ ಖಾತೆಯ ಬಗ್ಗೆ ಏನೂ ಬರಲೇ ಇಲ್ಲ. ಸುಮ್ಮನೆ ಖಾತೆ ಯನ್ನು ಸೃಷ್ಟಿಮಾಡಿಬಿಟ್ಟಿದ್ದಾರೆ.

ಇದು ಬರೇ ಪ್ರಚಾರಕ್ಕೆ ದಾರಿಯಾಯಿತು. ಅದಕ್ಕೆ ನೀವು ಇನ್ನೂ ಮನಸ್ಸು ಕೊಟ್ಟಿಲ್ಲ ಎಂದು ಕಾಣುತ್ತದೆ. ಕಾರಣ ನೀವು ಹೇಳಿದಂತೆ ಆ ಕಾರ್ಯಕ್ರಮಗಳು ಯಾವುದೂ ಕೂಡ ಇದುವರೆಗೆ ಕಾರ್ಯ ರೂಪಕ್ಕೆ ಬರಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುವಾಗ We should be interduced our programmes ಎಂದು ಹೇಳಿದರು. ಅವರು ಹೇಳಿದಂತೆ ಅದನ್ನು ಕಾರ್ಯಾಚರಣೆಗೆ ತರಬೇಕಾಗಿತ್ತು. ಆದರೆ ಇದರ ಬಗ್ಗೆ ಪ್ರಚಾರ ಮಾತ್ರ ಜಾಸ್ತಿಯಾಗುತ್ತಾ ಇದೆ. ಇದೇ ರೀತಿ ಇನ್ನು ಕೆಲವು ವಿಷಯಗಳು ಇವೆ, ಅದರ ಬಗ್ಗೆಯೂ ಪ್ರಸ್ತಾಪ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.— ಮಾನ್ಯ ಸಭಾಪತಿಗಳೇ, ಈಗ ವಿದ್ಯುಚ್ಛಕ್ತಿ ಕಡಿತ ವನ್ನು 3 ರಿಂದ 6 ಗಂಟೆಯವರೆಗೆ ಎಂದು ಮಾಡಿರುವುದರಿಂದ ಅನೇಕ ಜಿನ್ನಿಂಗ್ ಫ್ಯಾಕ್ಟರಿಯವರಿಗೆ ಮತ್ತು ಸಣ್ಣ ಸಣ್ಣ ಕೈಗಾರಿಕೆಗಳವರಿಗೆ ತುಂಬಾ ತೊಂದರೆಯಾಗಿದೆ. ಅದರಲ್ಲೂ ಕೂಡ ಮಹಿಳೆಯರು ಕೆಲಸ ಮಾಡತಕ್ಕಂಥಾ ಕಾರ್ಖಾನೆಯಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದುದರಿಂದ, ಇದರ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ ವಾರಕ್ಕೆ ಯಾವುದಾದರೂ ಒಂದು ದಿವಸ ಪವರ್ ಕಟ್ ಆಗುವುದನ್ನು ಮಾಡಿ 5 ದಿವಸಗಳು ಆ ಕಾರ್ಖಾನೆಗಳು ಕೆಲಸ ಮಾಡುವಂತೆ ಮಾಡಬೇಕು ಎಂದು ಹೇಳುತ್ತೇನೆ.

ಎರಡನೆಯದಾಗಿ, ಇನ್ನು ಪಡಿತರ ವ್ಯವಸ್ಥೆ ಬಗ್ಗೆ ಹೇಳುವುದಾದರೆ ಅನೇಕ ಕೃಷಿ ಕಾರ್ಮಿಕರಿಗೆ ಹಾಗೂ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥಾ ಜನರಿಗೆ ಈ ಪಡಿತರ ವ್ಯವಸ್ಥೆ ಅಷ್ಟು ವ್ಯವಸ್ಥಿತವಾಗಿ ಇಲ್ಲ. ಈ ಬಗ್ಗೆ ನಾನು ಹೇಳಿದ್ದರೂ ಕೂಡ ಬಹಳ ಸೈಲೆಂಟ್ ಆಗಿದ್ದೀರಿ, ಇದಕ್ಕೆ ತಾವು ಉತ್ತರ ಕೊಡಬೇಕು.

ಮೂರನೆಯದಾಗಿ ಈ ಕಾರ್ಮಿಕರ ಬಗ್ಗೆ ಒಂದು ತೀರ್ಮಾನ ಮಾಡಲು ಮಾನ್ಯ ಮುಖ್ಯ ಮಂತ್ರಿ ಗಳು ಕಾರ್ಖಾನೆಗಳ ಮಾಲೀಕರುಗಳನ್ನು ಮಾತುಕತೆಗೆ ಕರೆಸಿದರೂ ಕೂಡ ಅವರು ಮಾತುಕತೆಗೆ ಬರುವು ದಿಲ್ಲ. ಹಾಗೆ ಬರದೇ ಹೋದರೆ ಅಂಥಾ ಮಾಲೀಕರುಗಳಿಗೆ ಸರ್ಕಾರದ ಸಹಾಯ ಏನು ಇದೆ ಅದು ಸಿಕ್ಕುವುದಿಲ್ಲ ಎಂದು ಹೇಳಬೇಕು. ನಾವು ನೋಡಿದ ಹಾಗೆ ಅವರು ಸರ್ಕಾರದೊಂದಿಗೆ ಮಾತುಕತೆಗೆ ಬರದೇ ಇದ್ದರೂ ಕೂಡ ಅವರಿಗೆ ಪೋಲೀಸರ ಸಹಾಯ ಸಿಕ್ಕುತ್ತದೆಯಲ್ಲಾ, ಇದರ ಬಗ್ಗೆ ಸರ್ಕಾರದ ನಿಲುವು ಏನು ಅನ್ನುವುದನ್ನು ಸ್ಪಷ್ಟಪಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ನಾಲ್ಕನೆಯದಾಗಿ ಹೇಳಬೇಕಾದರೆ ಕೃಷಿ ಕಾರ್ಮಿಕರಿಗೆ ಮಿನಿಮಮ್ ವೇಜಸ್ 10 ರೂಪಾಯಿ ಅಂತ ಅಡ್ವೈಸರಿ ಕಮಿಟಿಯವರು ನಿಗದಿ ಮಾಡಿದ್ದಾರೆ. ಆದರೆ ಅದಕ್ಕೆ ಸರ್ಕಾರದ ಮಂಜೂರಾತಿ ಇನ್ನೂ ಸಿಕ್ಕಿಲ್ಲ ಸರ್ಕಾರ ಅದಕ್ಕೆ ಮಂಜೂರಾತಿ ಕೊಟ್ಟು ಆ ಕೃಷಿ ಕಾರ್ಮಿಕರಿಗೆ ಸಹಾಯ ಮಾಡಿ ಕೊಡಬೇಕು ಎಂದು ಹೇಳುತ್ತೇನೆ.

ಐದನೆಯದಾಗಿ ಲೇಬರ್ ಇಲಾಖೆಯಲ್ಲಿ ಕೆಲವು ಕೇಸಸ್‌ಗಳ ಬಗ್ಗೆ ವಾದ ವಿವಾದ ಆಗಿದ್ದರೂ

ಕೂಡ ಆ ಕಾರ್ಖಾನೆಯ ಕಾರ್ಮಿಕರ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಆ ತರಹ ಕೇಸಸ್ 1–2 ಸಾವಿರ ಇದೆ ಎಂದು ಗೊತ್ತಾಗಿದೆ. ಅವರನ್ನು ಕೇಳಿದರೆ ಏನು ಹೇಳುತ್ತಾರೆ ಎಂದರೆ ಇದು ಪ್ರಿಂಟಿಗ್ ಗೌರ್ನ್ಮೆಂಟ್ ಪ್ರೆಸ್‌ಗೆ ಹೋಗಿದೆ, ಅದು ಇನ್ನೂ ನಮಗೆ ಬಂದಿಲ್ಲ ಎಂದು ಹೇಳುತ್ತಾರೆ. ಇದರ ಬಗ್ಗೆ ತಾವು ಗಮನ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ರಾಮಚಂದ್ರ ವೀರಪ್ಪ.— ಸ್ವಾಮಿ, ಯಾವ ಸ್ವತಂತ್ರ ಸೇನಾನಿಗಳಿಂದ ಈ ದೇಶವನ್ನು ಪಡೆದಿದ್ದರೋ ಅವರ ಸಲುವಾಗಿ ಈ ಬಡ್ಜೆಟ್‌ನಲ್ಲಿ ಏನೂ ಹಣ ಇಟ್ಟಿಲ್ಲ. ಅವರು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ್ದಾರೆ. ಅವರಲ್ಲಿ ಎಷ್ಟೋ ಜನ ಮಡಿದು ಹೋಗಿದ್ದಾರೆ. ಕೆಲವು ದಿವಸದ ಹಿಂದೆ ತಾವು ಗುಲ್ಬರ್ಗಾಕ್ಕೆ ಬಂದಾಗ ಸೇನಾನಿಗಳ ಒಂದು ಕಾನ್‌ಫರನ್ಸ್‌ನಲ್ಲಿ ಮಾತನಾಡುವಾಗ ಹೇಳಿದಿರಿ. ಇವರ ಬಗ್ಗೆ ಈ ವರ್ಷದಲ್ಲಿ ನಾವು ಏನಾದರೂ ಮಾಡುತ್ತೇವೆ ನನಗೆ ಪತ್ರ ಬರೆಯಿರಿ ಎಂದು ಹೇಳಿದಿರಿ. ನಾವು ತಮಗೆ ಆ ಬಗ್ಗೆ ಒಂದು ಪತ್ರ ಬರೆದಿದ್ದೇವೆ. ಇದರ ಬಗ್ಗೆ ಏನಾದರೂ ಸ್ವಲ್ಪ ಬಡ್ಜೆಟ್‌ನಲ್ಲಿ ಸೇರಿಸಿ ಸಹಾಯ ಮಾಡಿಕೊಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ.

ಇನ್ನು ಎರಡನೆಯದಾಗಿ, ನನ್ನ ಕ್ಷೇತ್ರದಲ್ಲಿ ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ 2–3 ಕಡೆ ವಾಟರ್ ಸಪ್ಲೈ ಇರುವುದಿಲ್ಲ. ಅಲ್ಲಿ ರಿಜರ್ವಾಯರ್‌ಗೆ ಹಾಕಿದ್ದ ಪೈಪನ್ನು ಕಡಿದು ಹಾಕಿದ್ದಾರೆ, ಮತ್ತು ವೈರನ್ನು ಕಿತ್ತು ಹಾಕಿದ್ದಾರೆ. ತಮಗೆ ಹೇಳಬೇಕಾದರೆ ನಮ್ಮ ಕಡೆ ಮೇಕರ್ ಅನ್ನುವ ಒಂದು ವಿಲೇಜ್ ಇದೆ. ಅವರು ಕುಡಿಯುವ ನೀರನ್ನು ಮೂರು ಹರಿದಾರಿಯಿಂದ ತರುತ್ತಾರೆ. ಇದನ್ನು ತಾವು ನೋಟ್ ಮಾಡಿಕೊಂಡು ಅವರಿಗೆ ಸಹಾಯ ಮಾಡಿಕೊಡಬೇಕೆಂದು ಹೇಳುವುದಲ್ಲದೆ ಅದಕ್ಕಾಗಿ ತಮಗೆ ನನ್ನ ಧನ್ಯವಾದಗಳನ್ನೂ ಸಹ ಅರ್ಪಿಸುತ್ತೇನೆ.

ಮೂರನೆಯದಾಗಿ ವಕ್ಕಲುತನದವರ ಬಗ್ಗೆ ತಾವು ಹೆಚ್ಚು ಗಮನ ಇಡಬೇಕು ಎಂದು ಹೇಳುತ್ತೇನೆ. ಈ ಮಾತನ್ನು ಸಾಮಾನ್ಯವಾಗಿ ಎಲ್ಲರೂ ಹೇಳಿದ್ದಾರೆ. ನಮ್ಮ ಏರಿಯಾದಲ್ಲಿ ಎಷ್ಟೋ ಜನ ವಕ್ಕಲುತನದವರಿಗೆ ಊಟ ಇಲ್ಲದೆ ಬಹಳ ತೊಂದರೆಗೊಳಗಾಗಿದ್ದಾರೆ. ಅವರ ಸಂಕಷ್ಟವನ್ನು ನಿವಾರಣೆ ಸರ್ಕಾರದವರೇ ಮಾಡಬೇಕು, ಇನ್ನಾರೂ ಮಾಡುವುದಕ್ಕಾಗುವುದಿಲ್ಲ. ಅವರಿಗೆ ನೀವು ಸಹಾಯ ಮಾಡದೇ ಹೋದರೆ ಅವರೆಲ್ಲಾ ಸೇರಿಕೊಂಡರೆ ಕ್ರಾಂತಿಯಾಗುತ್ತದೆ. ಆದ್ದರಿಂದ ಅವರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಾಲ್ಕನೆಯದಾಗಿ ಒಂದು ಮುಖ್ಯವಾದ ವಿಷಯ ಏನೆಂದರೆ ನಮ್ಮ ಭಾಗಕ್ಕೆ ಅತಿ ಮುಖ್ಯವಾದಂಥ ಪ್ರಾಜೆಕ್ಟ್ ಕಾರಂಜಿ ಪ್ರಾಜೆಕ್ಟ್, ಅದೊಂದೇ ಇರುವುದು. ಈ ಪ್ರಾಜೆಕ್ಟ್‌ಗೆ ಈ ಬಡ್ಜೆಟ್‌ನಲ್ಲಿ ಜಾಸ್ತಿ ಹಣ ಕೊಟ್ಟು ನಮ್ಮ ಭಾಗದ ಜನಗಳಿಗೆ ಸಹಾಯ ಮಾಡಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹನುಮಗೌಡ ಶಂಕರಗೌಡ.— ಹಿಂದೆ 20 ಅಂಶದ ಕಾರ್ಯಕ್ರಮ ಏನು ಇತ್ತು ಈಗ ಏನಾಗಿದೆ ಎಂದರೆ ಈ ಸರ್ಕಾರ ಬದಲಾವಣೆಯಾದ ಮೇಲೆ ಅದಕ್ಕೆ ಬೇರೆ ಒಂದು ಹೊಸ ಹೆಸರು ಕೊಟ್ಟಿದ್ದಾರೆ. ಕರ್ನಾಟಕ ಡೆವಲಪ್‌ಮೆಂಟ್ ಪ್ರೋಗ್ರಾಂ ಎಂದು ಹೊಸ ಹೆಸರು ಕೊಟ್ಟಿದ್ದಾರೆ. ಮೊದಲು ಈ ಹಿಂದೆ ಇದರ ಬಗ್ಗೆ ಶಾಸಕರಿಗೆ ರಿವ್ಯೂ ಮಾಡುವ ಅಧಿಕಾರ ಇತ್ತು. ಅವರು ಇದನ್ನು ರಿವ್ಯೂ ಮಾಡಿ ಅದರ ಬಗ್ಗೆ ಪ್ರಗತಿಪರ ಕಾರ್ಯಕ್ರಮಗಳನ್ನು ಹಾಕಿ ಕೆಲಸ ಮಾಡಿಸುತ್ತಿದ್ದರು. ಹಿಂದಿನ ಸರ್ಕಾರ ಇದ್ದಾಗ ಜನತಾ ಪ್ರತಿನಿಧಿಗಳಿಗೆ ಈ ರೀತಿಯಾದ ಒಂದು ಅವಕಾಶ ಇತ್ತು. ಆ ಸರ್ಕಾರ ಬದಲಾವಣೆ ಮಾಡಿದ ನಂತರ ಹೊಸ ಸರ್ಕಾರ ಬಂದ ಮೇಲೆ ಈ 20 ಅಂಶದ ಕಾರ್ಯಕ್ರಮಕ್ಕೆ ಕರ್ನಾಟಕ ಡೆವಲಪ್‌ಮೆಂಟ್ ಪ್ರೋಗ್ರಾಂ ಎಂದು ಹೊಸ ಹೆಸರು ಇಟ್ಟರು ಅಲ್ಲದೆ ಈಗ ಅದರ ಬಗ್ಗೆ ಶಾಸಕರಿಗೆ ರಿವ್ಯೂ ಮಾಡತಕ್ಕಂಥಾ ಅಧಿಕಾರವನ್ನೂ ಕೈಬಿಡಲಾಗಿದೆ. ಇದರ ಬಗ್ಗೆ ನನ್ನ ಕ್ಷೇತ್ರದ ಒಂದು ಉದಾಹರಣೆಯನ್ನೇ ಕೊಡುತ್ತೇನೆ. ಹೀಗೆ ಶಾಸಕರನ್ನು ಕೈಬಿಟ್ಟಿರುವುದರಿಂದ ಅಲ್ಲಿ ಜನತಾ ಪ್ರತಿನಿಧಿಗಳು ಕಾರ್ಯಕ್ರಮ ಏನು ಆಗುತ್ತಿದೆ ಎಂದು ಆ ಕ್ಷೇತ್ರದ ಶಾಸಕರಿಗೇನೇ ಗೊತ್ತಾಗುವುದಿಲ್ಲ. ಆ ಜಿಲ್ಲೆಯಲ್ಲಿ ಅಧಿಕಾರಿಗಳು, ಜಿಲ್ಲಾಧಿಕಾರಿಗಳು ಏನು ಇದ್ದಾರೆ ಅವರು ಯಾವ ಕೆಲಸ ಮಾಡುತ್ತಾರೆ ಅನ್ನುವುದೇ ಗೊತ್ತಾಗುವುದಿಲ್ಲ. ಶಾಸಕರಿಗೆ ರಿವ್ಯೂ ಮಾಡುವಂಥಾ ಒಂದು ಅಧಿಕಾರ ಈ ಯೋಜನೆಯಲ್ಲಿ ಕೈಬಿಟ್ಟಿದ್ದರೆ ಅದನ್ನು ಮತ್ತೆ ಸೇರಿಸುವುದಕ್ಕೆ ತಾವು ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ ಗ್ರಾಮಾಂತರ ಪ್ರದೇಶದಲ್ಲಿರುವ ಹರಿಜನ ಗಿರಿಜನರಿಗೆ ಹಿಂದಿನ ಸರ್ಕಾರ ಕೆಲವು ಸೌಲಭ್ಯಗಳನ್ನು ನೀಡಿತ್ತು. ಈ ಸರ್ಕಾರ ಬಂದ ಮೇಲೆ ಅವರಿಗೆ ಇದುವರೆಗೆ ಯಾವ ಸೌಲಭ್ಯವನ್ನೂ ಕೊಟ್ಟಿಲ್ಲ. ಅದರಲ್ಲೂ ಕೂಡ ಉತ್ತರ ಕರ್ನಾಟಕ ಭಾಗದ ಜನತೆ ನಮಗೆ ಏನು ಸಹಾಯ ಈ ಸರ್ಕಾರ ಮಾಡಿ ಕೊಟ್ಟಿಲ್ಲ ಅನ್ನುವ ಒಂದು ಶಂಕೆಯು ಮೂಡಿದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಗಮನಹರಿಸಿ ಅವರ ಶಂಕೆಯನ್ನು ಹೋಗಲಾಡಿಸಲು ಸ್ಪಷ್ಟವಾದ ನಿಲುವು ಏನು ಅನ್ನುವುದನ್ನು ಹೇಳಬೇಕು ಎಂದು ಕೇಳುತ್ತೇನೆ.

ಮೂರನೆಯದಾಗಿ ಈ ಸರ್ಕಾರ ಬಂದ ಮೇಲೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಅಂತ

ಒಂದು ಸ್ಕೀಂ ತಂದಿದ್ದಾರೆ. ಹಿಂದೆ ಅಫರ್ಮೇಷನ್ ಸ್ಕೀಂ ಇತ್ತು. ಆವಾಗ ಈ ಒಂದು ಯೋಜನೆಯನ್ನು ಪ್ರಾರಂಭ ಮಾಡಿ ಕನಿಷ್ಟ ಪಕ್ಷ 100 ದಿವಸವಾದರೂ ಕೂಡ ಅವರಿಗೆ ಕೆಲಸ ಕೊಡುತ್ತಿದ್ದರು. ಈಗ ಈ ಸರ್ಕಾರ ಬಂದ ಮೇಲೆ ಇಂತಹ ಒಂದು ಹೊಸ ಯೋಜನೆ ತೆಗೆದುಕೊಂಡಿದ್ದಾರೆ. ಅಂದರೆ ಅಂತ್ಯೋದಯ ಅಂತ ಹೆಸರು ಇಟ್ಟು ಆ ಯೋಜನೆಯಲ್ಲಿ ಕೇವಲ 45 ತಾಲ್ಲೂಕುಗಳನ್ನು ಮಾತ್ರ ತೆಗೆದುಕೊಂಡಿದ್ದಾರೆ. ನಾನು ಅವರಿಗೆ ಪದೇ ಪದೇ ಹೇಳುತ್ತಿದ್ದೇನೆ, ನಮ್ಮ ಭಾಗ ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಾ ಇದೆ ಅಂತ ಹೇಳಿದರೂ ಸಹ ಇನ್ನೂ ಅನೇಕ ತಾಲ್ಲೂಕುಗಳನ್ನು ಈ ಯೋಜನೆಯಲ್ಲಿ ಕೈಬಿಟ್ಟಿದ್ದಾರೆ. ಈ ಬಗ್ಗೆ ತಾರತಮ್ಯ ಏತಕ್ಕೆ ಮಾಡಬೇಕು ಎಂದು ಕೇಳುತ್ತೇನೆ. ಈ ಒಂದು ಯೋಜನೆಯಲ್ಲಿ ರಾಯಚೂರಿನ ದೇವದುರ್ಗವನ್ನು ಆಳವಡಿಸಿದ್ದೀರಿ. ತುಂಬಾ ಬರಗಾಲ ಪ್ರದೇಶವಾದಂಥ ಕುಷ್ಟಗಿ ಮತ್ತು ಯಲಬುರ್ಗಿ ಈ ಎರಡು ತಾಲ್ಲೂಕುಗಳನ್ನು ಕೈಬಿಟ್ಟಿದ್ದೀರಿ. ಇದನ್ನು ಸೇರಿಸುವ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಾಲ್ಕನೆಯದಾಗಿ ಹೇಳಬೇಕಾದರೆ ಇನ್ನು ಜನತಾ ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳಿದ್ದೀರಿ. ಈಗಾಗಲೇ ಮನೆಗಳನ್ನು ಕಟ್ಟಬೇಕಾದರೆ ಸಾಮಾನುಗಳ ಬೆಲೆ ಸಾಕಷ್ಟು ಏರಿದೆ. ಮನೆಗಳನ್ನು ಕಟ್ಟಬೇಕಾದರೆ ಅದಕ್ಕೆ ತಕ್ಕ ಉಪಕರಣಗಳು ಬೇಕಾಗುತ್ತದೆ. ಇದನ್ನು ಸರ್ಕಾರದವರೇ ಕಟ್ಟಿಕೊಡಬೇಕು, ಆ ಜನರಿಗೇನೇ ವಹಿಸಿದರೆ ಯಾವುದಾದರೂ ಕಳಪೆ ಸಾಮಾನುಗಳನ್ನು ತಂದು ಹಾಕಿ ಮನೆಗಳನ್ನು ಕಟ್ಟಿಬಿಟ್ಟರೆ ಅದು ಹೆಚ್ಚು ದಿವಸ ಬರುವುದಿಲ್ಲ. ಈ ಬಗ್ಗೆ ಆ ಜನಗಳು ಹೋಗಿ ಕೇಳಿದರೆ ಸಂಬಂಧಪಟ್ಟ ಅಧಿಕಾರಿಗಳಾದ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಮತ್ತು ಜ್ಯೂನಿಯರ್ ಇಂಜಿನಿಯರ್ಸ್ ಏನು ಹೇಳುತ್ತಾರೆ ಎಂದರೆ ನೀನೇ ಕಲ್ಲು ಹೊಡೆದುಕೊ, ನೀನೇ ಹೆಂಚು ತಂದುಕೊ, ನೀನೇ ಮರಮುಟ್ಟುಗಳನ್ನು ತಂದುಕೊ ಅದಕ್ಕೆ ಬೇಕಾದ ಉಪಕರಣಗಳನ್ನು ತಂದುಕೊಂಡು ಮನೆ ಕಟ್ಟಿಕೊಂಡು ಬಿಲ್ಲು ತಂದುಕೊಡು ಎಂದು ಹೇಳುತ್ತಾರಂತೆ. ಅವರೇ ಕಟ್ಟಿಕೊಂಡರೆ ಎಲ್ಲಾ ಕಳಪೆ ಸಾಮಾನುಗಳನ್ನು ತಂದುಕೊಂಡು ಮನೆ ಕಟ್ಟಿಕೊಳ್ಳುತ್ತಾರೆ. ಅದು ಹೆಚ್ಚು ಕಾಲ ಬರುವುದಿಲ್ಲ. ಇದರ ಬಗ್ಗೆ ತಾವು ಗಮನ ಕೊಡಬೇಕು ಎಂದು ಹೇಳುತ್ತೇನೆ.

ಐದನೆಯದಾಗಿ ಹೇಳಬೇಕಾದರೆ ತಾವು ಗ್ರಾಮಾಂತರ ಪ್ರದೇಶದಲ್ಲಿರುವ ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದೇವೆ ಅಂತ ಹೇಳಿ ಅಲ್ಲಿಯ ವಿದ್ಯುತ್ ಕಡಿತ 6 ಗಂಟೆ ಇದ್ದುದ್ದನ್ನು 3 ಗಂಟೆಗೆ ಇಳಿಸಲಾಗಿದೆ ಎಂದು ಹೇಳಿದ್ದೀರಿ. ಈ ವಿದ್ಯುತ್ ಅಭಾವದಿಂದ ಅನೇಕ ಪಂಪ್‌ಸೆಟ್ಸ್‌ನವರಿಗೆ ಬಹಳ ತೊಂದರೆಯಾಗಿದೆ. ತಮಗೆ ಹೇಳಬೇಕಾದರೆ ನಮ್ಮ ಊರಿನಲ್ಲಿ ಸುಮಾರು 8-10 ದಿವಸ ವಿದ್ಯುತ್ ಇರಲೇ ಇಲ್ಲ. ಕೇಳಿದರೆ ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಗಿದೆ ಅಂತ ಹೇಳಿದರು. ನೀವು ವಿದ್ಯುತ್ ಕಡಿತವನ್ನು 6 ಗಂಟೆಯಿಂದ 3 ಗಂಟೆಯವರೆಗೆ ಇಳಿಸಿದರೂ ಕೂಡ ಆ ರೈತರಿಗೆ ಏನೂ ಪ್ರಯೋಜನವಾಗುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಆ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಪ್ರಾಥಮಿಕ ಶಾಲೆಯಲ್ಲಿ ಕೆಲಸ ಮಾಡತಕ್ಕ ಸ್ಥಳೀಯ ಅಭ್ಯರ್ಥಿಗಳನ್ನು ಕುರಿತು ಒಂದು ಮಾತನ್ನು ಹೇಳಿದ್ದಾರೆ; ಅದೇನೆಂದರೆ, ಹೈಕೋರ್ಟಿನ ಆಜ್ಞೆಯ ಪ್ರಕಾರ ಇವರನ್ನು ಖಾಯಂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಎಂದು. ಸ್ಥಳೀಯ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಅವರೇ ಹೇಳಿದಂತೆ ಎಲ್ಲಾ ನಿಯಮಗಳಿಗನುಸಾರವಾಗಿ ಆಯ್ಕೆ ಮಾಡಿದ್ದಾರೆ. ಹಿಂದಿನ ಸರ್ಕಾರ ಅವರನ್ನು ಆಯ್ಕೆ ಮಾಡಿದ ಕಾಲಕ್ಕೆ ತೊಂದರೆಯುಂಟಾಗಿದೆ ಎಂದು ಹೇಳಿದ್ದಾರೆ. ಈಗ ಪ್ರಾಥಮಿಕ ಶಾಲಾ ಆಯ್ಕೆ ಸಮಿತಿಯವರು ಆಯ್ಕೆ ಮಾಡುವಾಗ ಇವರನ್ನು ಖಾಯಂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. 1981ರಲ್ಲಿ ಹಿಂದಿನ ಸರ್ಕಾರ ಇವರಿಗೋಸ್ಕರ ಸ್ಪೆಷಲ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಮಾಡಿ ಆಗ 29 ವರ್ಷ ವಯಸ್ಸಿಗಿಂತ ಹೆಚ್ಚಾದವರಿಗೆ ಆದ್ಯತೆಕೊಟ್ಟು ನೇಮಕ ಮಾಡಬೇಕು ಎಂದು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಅದೇ ರೀತಿಯಲ್ಲಿ ಈಗಲೂ ಸಹ ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಿ ಇವರನ್ನು ಆದ್ಯತೆ ಮೇರೆಗೆ ನೇಮಕ ಮಾಡಬೇಕು ಎಂದು ನಾನು ತಮ್ಮನ್ನು ಮಾನ್ಯ ಅಧ್ಯಕ್ಷರ ಮೂಲಕ ಪ್ರಶ್ನೆ ಮಾಡುತ್ತಿದ್ದೇನೆ.

ಎರಡನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳು ಭ್ರಷ್ಟಾಚಾರದ ವಿಷಯದಲ್ಲಿ ತಮ್ಮ ನಿಲುವು ಏನು ಎನ್ನುವುದನ್ನು ಹೇಳಿದರು. ಯಾವುದೇ ಸ್ಪಷ್ಟ ನಿದರ್ಶನಗಳನ್ನು ಯಾರಾದರೂ ಕೊಟ್ಟರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಯ ಅಧ್ಯಾಪಕರನ್ನು ಆಯ್ಕೆ ಮಾಡತಕ್ಕ ಸಂದರ್ಭದಲ್ಲಿ ನಡೆದಂಥ ಭ್ರಷ್ಟಾಚಾರದ ಬಗ್ಗೆ ಸ್ಪಷ್ಟವಾದ ನಿದರ್ಶನಗಳನ್ನು ಕೊಟ್ಟಿದ್ದೇವೆ. ಆದರೂ ಸಹ ಇದರ ಬಗ್ಗೆ ತಾವು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದು ಕಂಡುಬರುತ್ತಿಲ್ಲ. ಆದ್ದರಿಂದ ನಾನು ತಮ್ಮನ್ನು ಇದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ಕೇಳಬಯಸುತ್ತೇನೆ.

ಇನ್ನೊಂದು ಉದ್ಯೋಗ ದೃಢೀಕರಣ ಯೋಜನೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೊಸದಾದ ಯೋಜನೆಯನ್ನು ತಯಾರಿಸಿದ್ದೇವೆ ಅದನ್ನು ನಮ್ಮ ರಾಜ್ಯದ 45ತಾಲ್ಲೂಕುಗಳಲ್ಲಿ

ಜಾರಿಯಲ್ಲಿ ತಂದಿದ್ದೇವೆಂದು ಹೇಳಿದ್ದಾರೆ. ಇದನ್ನು ಜಾರಿಯಲ್ಲಿ ತರುವಾಗ ಇವರು ಪಕ್ಷಪಾತ ಮಾಡಿದ್ದಾರೆ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಡಿ. ಡಿ. ಸಿ. ಮೀಟಿಂಗ್‌ನಲ್ಲಿ ನಮ್ಮ ಜಿಲ್ಲೆಯಲ್ಲಿ ಈ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿದಾಗ, ಕಾರವಾರ, ಶಿರಸಿ ಮತ್ತು ಕುಮಟ ಈ 3 ವಿಭಾಗಗಳನ್ನು ಬಿಟ್ಟು ಹಳಿಯಾಳ ಒಂದನ್ನು ಮಾತ್ರ ಆರಿಸಿಕೊಂಡಿದ್ದಾರೆ. ಇದಕ್ಕೆ ಕಾರಣವೆಂದರೆ, ಈ ಮೂರು ಭಾಗಗಳಲ್ಲಿಯೂ ವಿರೋಧ ಪಕ್ಷದ ಸದಸ್ಯರು ಆರಿಸಿಬಂದಿದ್ದು, ಹಳಿಯಾಳ ಕ್ಷೇತದಿಂದ ಮಾತ್ರ ಇವರ ಪಕ್ಷದವರು ಆರಿಸಿ ಬಂದಿರುವುದರಿಂದ ಆ ತಾಲ್ಲೂಕನ್ನು ಆರಿಸಿಕೊಂಡಿದ್ದಾರೆ. ಈ ರೀತಿಯಲ್ಲಿ ಪಕ್ಷಪಾತ ಮಾಡದೆ ಈ ಮೂರು ತಾಲ್ಲೂಕುಗಳನ್ನು ಈ ಯೋಜನೆಯಲ್ಲಿ ಸೇರಿಸಿಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ (ಹುಮ್ನಾಬಾದ್).—ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸರ್ಕಾರದಲ್ಲಿ ಚಾಕು ಚೂರಿ ಸಂಸ್ಕೃತಿ ಇಲ್ಲ. ರಾಜ್ಯದಲ್ಲಿ ನಾವು ಬಂದ ಮೇಲೆ ಇದು ಬಹಳ ಕಡಿಮೆಯಾಗಿದೆ ಇದರ ಬಗ್ಗೆ ಯಾರೂ ಅನುಮಾನ ಪಡಬೇಕಾಗಿಲ್ಲ ಎಂದು ಹೇಳಿದರು. ಆದರೆ ಇವರು ಬಂದಮೇಲೆ ಇದು ಜಾಸ್ತಿಯಾಗಿದೆ ಎಂದು ನಾನು ಹೇಳಬೇಕಾಗಿದೆ. ಮಟ್ಕಾ ಗ್ಯಾಂಬ್ಲಿಂಗ್ ಏನು ನಡೆದಿದೆ ಅದು ಜಾಸ್ತಿಯಾಗಿದೆ ಮತ್ತು ಇದರಿಂದ ಗಲಾಟೆಗಳಾಗಿ ಜನರು ಜೀವನ ಮಾಡುವಂತಿಲ್ಲ, ಸಂಸಾರಸ್ಥರು ಉಳಿಯುವುದೇ ಕಷ್ಟವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಸರಿಯಾದ ಕ್ರಮವನ್ನು ತೆಗೆದುಕೊಂಡು ಅಧಿಕಾರಿಗಳಿಗೆ ಎಚ್ಚರಿಕೆ ಕೊಟ್ಟರೆ ನಮ್ಮ ಕಡೆ ಜನರು ಉಳಿಯುತ್ತಾರೆ ಇಲ್ಲದೇ ಹೋದರೆ ಉಳಿಯುವುದಿಲ್ಲವೆಂದು ನಾನು ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ಬಿ. ಶರಣಪ್ಪ.—ಮಾನ್ಯ ಮುಖ್ಯಮಂತ್ರಿಗಳು ಎನ್ ಆರ್ ಇ ಪಿ ಸ್ಕೀಂ ಬಗ್ಗೆ ಮತ್ತು ಎಂ ಎನ್ ಪಿ ಸ್ಕೀಂ ಬಗ್ಗೆ ಹೇಳಿದರು. ಇವು ನಮ್ಮ ಜಿಲ್ಲೆಯಲ್ಲಿ ಇಂಪ್ಲಿಮೆಂಟ್ ಆಗಿಲ್ಲ. ರೂರಲ್ ಡೆವಲಪ್‌ಮೆಂಟ್ ಗೋಸ್ಕರ ಅನೇಕ ಕಾರ್ಯಕ್ರಮಗಳನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ. ಆದರೆ ನಮ್ಮ ಜಿಲ್ಲೆಯ ಅಧಿಕಾರಿಗಳನ್ನು ನಾವು ಈ ಬಗ್ಗೆ ಕೇಳಿದಾಗ ಈ ಕಾರ್ಯಕ್ರಮಗಳಿಗೆ ನಮಗೆ ಸರ್ಕಾರದಿಂದ ಹಣ ಬಂದಿಲ್ಲ, ಆದ್ದರಿಂದ ಈ ಕಾರ್ಯಕ್ರಮಗಳನ್ನು ಇಂಪ್ಲಿಮೆಂಟ್ ಮಾಡಲಾಗಿಲ್ಲ ಎಂದು ಹೇಳಿದ್ದಾರೆ. ನಮಗೆ ತಿಳಿದಮಟ್ಟಿಗೆ ಈ ಸ್ಕೀಂಗಳನ್ನು ಕೆಲವು ಜಿಲ್ಲೆಗಳಲ್ಲಿ ಮಾತ್ರ ಇಂಪ್ಲಿಮೆಂಟ್ ಮಾಡಿದ್ದಾರೆ. ಸರ್ಕಾರದವರು ರೂರಲ್ ಡೆವಲಪ್‌ಮೆಂಟ್‌ಗೆ ಪ್ರಾಧಾನ್ಯತೆ ಕೊಡುವಾಗ ನೂರಾರು ಹಳ್ಳಿಗಳಲ್ಲಿ ಸರಿಯಾದ ರಸ್ತೆಗಳಿಲ್ಲ, ರಸ್ತೆಗಳಿದ್ದರೆ ಸರಿಯಾದ ಮೆಂಟೆನೆನ್ಸ್ ಇಲ್ಲ. ಇವುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಯಾವ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೋ ಗೊತ್ತಿಲ್ಲ. ಕಳೆದ ಐದು ವರ್ಷದಿಂದ ಈ ರಸ್ತೆಗಳಿಗೆ ರಿಪೇರಿಯಾಗಿಲ್ಲ, ಸರ್ಕಾರದವರು ವರ್ಷಂಪ್ರತಿ ಟಾರ್ಗೆಟ್ಟನ್ನು ಗೊತ್ತು ಮಾಡಿಕೊಂಡು ಒಂದು ಸಾವಿರ ಕಿಲೋಮೀಟರ್ ರಸ್ತೆಯನ್ನಾದರೂ ಸರಿಯಾದ ರೀತಿಯಲ್ಲಿ ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ವಿವರವಾದ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕು.

ಶ್ರೀ ಕಾನಡೆ ಗೋಪಾಲ ಮುಕುಂದ್ —ಮಾನ್ಯ ಹೆಗಡೆಯವರು ಹರಿಜನರ ಅಭಿವೃದ್ಧಿಯ ಬಗ್ಗೆ ಮಾತನಾಡಿದರು. ಬೆಂಗಳೂರಿನಲ್ಲಿರುವ ಕರ್ನಾಟಕ ಸೋಪ್ ಫ್ಯಾಕ್ಟರಿಯಲ್ಲಿ ಐದು ಜನ ಹರಿಜನ ನೌಕರರನ್ನು ಡಿಸ್‌ಮಿಸ್ ಮಾಡಿದ್ದಾರೆ. ಇದರ ಬಗ್ಗೆ ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಆದರೂ ಯಾವ ಕ್ರಮವನ್ನೂ ಸಹ ಇವರು ತೆಗೆದುಕೊಂಡಿಲ್ಲ. ನಮ್ಮ ಶಿರಸಿ ಟೌನಿನಲ್ಲಿ ನೀರಿನ ತೊಂದರೆ ಇದೆ. ಅಲ್ಲಿ ಒಂದು ಬಾವಿಯನ್ನೂ ಸಹ ತೋಡಿಲ್ಲ. ಉಳಿದ ತಾಲ್ಲೂಕುಗಳಲ್ಲಿ ಕೆಲಸಗಳನ್ನು ಮಾಡಿರುವಂತೆ ನಮ್ಮ ತಾಲ್ಲೂಕುಗಳಲ್ಲಿಯೂ ಮಾಡುತ್ತೀರಾ ? ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ವಿರೋಧ ಪಕ್ಷದವರು ಉಚ್ಚೆಯಲ್ಲಿ ಮೀನು ಹಿಡಿಯುತ್ತಾರೆಂದು ಹೇಳಿದ್ದಾರೆ. ಇದು ಯಾವ ಉಚ್ಚೆ ಎಂದು ಹೇಳಿದರೆ ಒಳ್ಳೆಯದು.

ಶ್ರೀ ಹೆಚ್. ಡಿ. ದೇವೇಗೌಡ.— ಮಾನ್ಯ ಸದಸ್ಯರಾದ ಖಂಡ್ರೆಯವರು ಕಾರಂಜಿ ಪ್ರಾಜೆಕ್ಟ್ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಸರ್ಕಾರದವರು ಕಾರಂಜಿ ಪ್ರಾಜೆಕ್ಟ್ ಕೆಲಸವನ್ನು ವೇಗದಲ್ಲಿ ಮಾಡಬೇಕು ಎನ್ನುವ ಆಶಾಭಾವನೆಯನ್ನು, ಫ್ಲಡ್ ಗೇಟ್‌ಮುಚ್ಚತಕ್ಕ ಪೋರ್ಷನ್ ಕೆಲಸಕ್ಕೆ ಟೆಂಡರನ್ನು ಕರೆದಿದ್ದಾರೆ. ಹಿಂದಿನ ಸರ್ಕಾರದವರೂ ಕೂಡ ಇದಕ್ಕೆ ಟೆಂಡರ್ ಕರೆದಿದ್ದು ಆಗ ಟೆಂಡರ್ ರೇಟ್ ಜಾಸ್ತಿಯಾಯಿತು ಎಂದು ಅದನ್ನು ತಿರಸ್ಕಾರ ಮಾಡಿತು. ಎರಡನೆಯ ಬಾರಿ ಇದಕ್ಕೆ ಕೆಲಸ ಮಾಡಲು ಬೇರೆಯಾರೂ ಬರಲಿಲ್ಲ. ಮೂರನೆಯಬಾರಿ ಟೆಂಡರ್ ಕರೆದಿದ್ದೇವೆ. ಆಗ ಬಂದಿರತಕ್ಕ ಕಂಟ್ರಾಕ್ಟರ್ 96ಪರ್ಸೆಂಟ್ ಹೆಚ್ಚು ಕೇಳಿದ್ದಾರೆ ಆದ್ದರಿಂದ ಇದನ್ನು ನಾವು ಒಪ್ಪಿಕೊಳ್ಳಬೇಕೇ ಬೇಡವೇ ಎನ್ನುವುದು ಮುಂದೆ ಇರತಕ್ಕ ಪ್ರಶ್ನೆ. ಇದರ ಬಗ್ಗೆಯೂ ಸಹ ನಾವು ಅತ್ಯಂತ ಶೀಘ್ರವಾಗಿ ನಿರ್ಣಯ ಮಾಡುತ್ತೇವೆ. ಈ ಎಲ್ಲಾ ಕಾರಣಗಳಿಂದ ನಾವು ಈ ಕೆಲಸವನ್ನು ವಿಳಂಬ ಮಾಡುವ ಪ್ರಶ್ನೆಯೇ ಇಲ್ಲ. ನಾವು ಫ್ಲಡ್ ಗೇಟನ್ನು ಮುಚ್ಚದೇ ಹೋದರೆ ಅಲ್ಲಿ ನೀರನ್ನು ಶೇಖರಣೆ ಮಾಡಲಿಕ್ಕಾಗುವುದಿಲ್ಲ. ಇದರಿಂದ ಕೆನಾಲ್ ಕೆಲಸವೂ ನಡೆಯುವುದಿಲ್ಲ ಫ್ಲಡ್ ಗೇಟನ್ನು ಮುಚ್ಚಿ ಪ್ರತಿವರ್ಷ

ನೀರನ್ನು ಕೊಡಬೇಕಾಗಿದೆ. ನಾವು ಈ ಕೆಲಸಕ್ಕೆ ಮೂರು ಸಾರಿ ಟೆಂಡರನ್ನು ಕರೆದಿದ್ದೇವೆ. ಹಿಂದಿನ ಸರ್ಕಾರ ಒಂದೇ ಸಾರಿ ಟೆಂಡರ್ ಕರೆದಿದ್ದು 56 ಪರ್ಸೆಂಟ್ ಎಕ್ಸೆಸ್ ಬಂದಿದ್ದರಿಂದ ಅದನ್ನು ರಿಜೆಕ್ಟ್ ಮಾಡಿದರು. ನಾವು ಇದರ ಬಗ್ಗೆ ಇಲಾಖಾ ಅಧಿಕಾರಿಗಳಿಗೆ ನೆಗೋಷಿಯೇಟ್ ಮಾಡಿ ಎಂದು ಹೇಳಿದ್ದೇವೆ. ಒಂದು ವಾರದಲ್ಲಿಯೇ ಸೂಕ್ತವಾದ ನಿರ್ಣಯವನ್ನು ಮಾಡಬೇಕು ಎನ್ನುವ ಆಸೆ ಇದೆ, ಮತ್ತು ಎರಡು ತಿಂಗಳಲ್ಲಿಯೇ ನಮ್ಮಲ್ಲಿರತಕ್ಕ ಪೂರ್ತಿ ಹಣವನ್ನು ಖರ್ಚು ಮಾಡಬೇಕೆಂದೂ ಸಹ ಸರ್ಕಾರದ ಇಚ್ಛೆ ಇದೆ. ಇರಿಗೇಷನ್ ಅಲೋಕೇಟ್ ಮಾಡಿರತಕ್ಕ ಹಣವನ್ನು ಪೂರ್ಣವಾಗಿ ನಾವು ಖರ್ಚು ಮಾಡುತ್ತಿದ್ದೇವೆ. ಇಟ್ಟಿರತಕ್ಕ ಹಣವನ್ನು ನಾವು ಲ್ಯಾಪ್ಸ್ ಆಗಲಿಕ್ಕೆ ಬಿಡುವುದಿಲ್ಲ, ಇನ್ನೂ ಸ್ವಲ್ಪ ಹೆಚ್ಚು ಖರ್ಚು ಮಾಡಿ ಎಂದು ಹೇಳಿದ್ದೇವೆ.

\+ ಈ ಚಿನ್ಹೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕೆಲಸ ನಿಲ್ಲಿಸಬೇಕು ಎನ್ನತಕ್ಕದ್ದಾಗಲೀ, ವಿಳಂಬ ಮಾಡಬೇಕು ಎನ್ನತಕ್ಕದ್ದಾಗಲೀ. ಅಥವಾ ತಾತ್ಸಾರ ಮನೋಭಾವನೆ ಮಾಡತಕ್ಕದ್ದಾಗಲೀ ಆ ರೀತಿಯಾಗಿ ಮಾಡಿಲ್ಲ. ನಾವು ಈ ಮೊದಲೇ ಈ ಸದನದಲ್ಲಿ ಆಶ್ವಾಸನೆ ಕೊಟ್ಟ ಹಾಗೆ ಐದು ನೂರು ಹೆಕ್ಟೆರ್ ಜಮೀನಿಗೆ ನೀರು ಕೊಡುತ್ತೇವೆಂದು ಹೇಳಿದ್ದೆವು. ಆಗ ಆ ಕೆಲಸ ನಾಲ್ಕು—ನಾಲ್ಕೂವರೆ ತಿಂಗಳಿಂದ ವೇಗದಲ್ಲಿ ಮಾಡಿಸುತ್ತಿದ್ದೇವೆ. ನಾವು ಕೊಟ್ಟಂಥ ವಾಗ್ದಾನವನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈ ಕಡೆ 15 ಕಿಲೋಮೀಟರ್ ಕಾಲುವೆ ಆಗಬೇಕಾಗಿದೆ. ಇನ್ನೊಂದು ಕಡೆ 10 ಕಿಲೋಮೀಟರ್ ಕಂಪ್ಲೀಟ್ ಆಗಬೇಕಾಗಿದೆ. ಈಗ ಇದರ ಬಗ್ಗೆ ನಾವು ಬದಲಾವಣೆ ಮಾಡಿ ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಅದರ ಪ್ರಕಾರವಾಗಿ ಕೆಲಸ ಪೂರೈಸುತ್ತೇವೆ. ಆಫೀಸರ್ಸ್ ಮೀಟಿಂಗಿನಲ್ಲಿ ರಿವ್ಯೂಸ್ ಮಾಡಿ ಈ ಯೋಜನೆಗೆ 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು ಎನ್ನತಕ್ಕ ಆಸೆ ಇಟ್ಟು ಕೊಂಡಿದ್ದೇವೆ

ಶ್ರೀ ಭೀಮಣ್ಣ ಖಂಡ್ರೆ.— ಈ ವರ್ಷವಾದರೂ 5 ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ —ಟೆಂಡರ್ ನಿಗದಿಯಾಗಿಲ್ಲ. ಆದ್ದರಿಂದ ತಡವಾಗುತ್ತದೆ. ನಿಮ್ಮ ಸರ್ಕಾರ ಇದ್ದಾಗಲೇ ಟೆಂಡರ್ ಕಾಲ್‌ಫಾರ್ ಮಾಡಿದ್ದರು, ಅವರು ದುಡ್ಡು ಹೆಚ್ಚಿಗೆ ಕೇಳಿದ್ದರಿಂದ ರಿಜೆಕ್ಟ್ ಮಾಡಿದ್ದೀರಿ. ಎರಡನೇ ಸಲ ಯಾರೂ ಬರಲಿಲ್ಲ. ಅದಕ್ಕೆ ನಾನು ನಮ್ಮ ಇಲಾಖೆಯವರಿಗೆ ಸೂಚನೆ ಕೊಟ್ಟು ಬಂದಿದ್ದೇನೆ. ನಮ್ಮ ಇಲಾಖಾ ವತಿಯಿಂದ ಕೆಲಸ ನಡೆಯುತ್ತಿದೆ. ಉಳಿದ ಕೆಲಸಗಳನ್ನು ಮಾಡುವ ಬಗ್ಗೆ ನಾವು ಮೂರನೇ ಬಾರಿ ಕಾಲ್‌ಫಾರ್ ಮಾಡಿದಾಗ ಶೇಕಡಾ 99 ರಷ್ಟು ಹೆಚ್ಚಿಗೆ ಕೇಳುತ್ತಿದ್ದಾರೆ. ಅದರ ಬಗ್ಗೆ ನಾವು ಒಂದು ಪಂಚಾಯಿತಿ ಮಾಡಿ ತೀರ್ಮಾನವನ್ನು ಮಾಡಬೇಕು ಎಂದಿದ್ದೇವೆ.

ಶ್ರೀ ಭೀಮಣ್ಣ ಖಂಡ್ರೆ.— ಲ್ಯಾಂಡ್ ಅಕ್ವಿಸಿಷನ್‌ಗೆ 3 ಕೋಟಿ ಹಣ ಕೊಡುವುದಿದೆ. ಇದಲ್ಲದೆ ನೀವು ಟೆಂಡರ್ ಬೇರೆ ಕರೆದಿದ್ದೀರಿ, ಅದಕ್ಕೆ ಬೇರೆ ಹಣವನ್ನು ಪ್ರತ್ಯೇಕವಾಗಿ ಕೊಡ ಬೇಕಾಗುತ್ತದೆ. ಆದ್ದರಿಂದ ಇದಕ್ಕೆ ಹೆಚ್ಚಿಗೆ ಹಣವನ್ನು ಒದಗಿಸಿಕೊಟ್ಟು ಈ ಕೆಲಸವನ್ನು ಬೇಗ ಮುಗಿಸುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.— ಅಲ್ಲಿ 7 ಹಳ್ಳಿಗಳು ಮುಳುಗಡೆಯಾಗಿವೆ. ಅದರಲ್ಲಿ 5 ಹಳ್ಳಿಯವರನ್ನು ಬೇರೆ ಕಡೆಗೆ ಸ್ಥಳಾಂತರ ಮಾಡಿ ಪುನರ್ವಸತಿ ಕಲ್ಪಿಸಿಕೊಡಲಾಗಿದೆ. ಇನ್ನು 2 ಹಳ್ಳಿಗಳ ಹೆಸರು ನನಗೆ ಜ್ಞಾಪಕಕ್ಕೆ ಇಲ್ಲ. ಅದರ ಬಗ್ಗೆಯೂ ಸಹ ಅಧಿಕಾರಿಗಳಿಗೆ ತನಿಖೆ ಮಾಡಬೇಕೆಂದು ತಿಳಿಸಿದ್ದೇನೆ. ಮೊನ್ನೆಯೂ ಸಹ ಚೀಫ್ ಇಂಜಿನಿಯರ್ ಮತ್ತು ಸೆಕ್ರೆಟರಿ ಮತ್ತಿತರ ಅಧಿಕಾರಿಗಳ ಸಭೆಯನ್ನು ಕರೆದು ರಿವ್ಯೂ ಮಾಡಿದ್ದೇನೆ. ಆದುದರಿಂದ ನಾವು ಏನು ಆಶ್ವಾಸನೆ ಕೊಟ್ಟಿದ್ದೇವೆ ಅದನ್ನು ಈಡೇರಿಸದೇ ಕೈಬಿಡುವುದಿಲ್ಲ.

ಶ್ರೀ ಮಾಣಿಕ್‌ರಾವ್ ಪಾಟೀಲ್.— ಮಾನ್ಯ ಶ್ರೀ ದೇವೇಗೌಡರವರು ಅವರ ತಾಪತ್ರಯವನ್ನು ಹೇಳಿಕೊಂಡರು. ಟೆಂಡರ್ ಕಾಲ್‌ಫಾರ್ ಮಾಡಿದರೆ ಯಾರೂ ಬರುತ್ತಿಲ್ಲ ಎಂದು ಹೇಳಿದರು. ನಾನು ಸಲಹೆ ಕೊಡುವುದೇನೆಂದರೆ ಟೆಂಡರನ್ನು ಬೇರೆಯವರಿಗೆ ಕೊಟ್ಟು ಕೆಲಸ ಮಾಡಿಸುವ ಬದಲು ನಿಮ್ಮ ಸರ್ಕಾರದ್ದೇ ಒಂದು ಕನ್ಸ್‌ಸ್ಟ್ರಕ್ಷನ್ ಕಾರ್ಪೋರೇಷನ್ ಇರುವಾಗ ಇದರ ಮುಖಾಂತರವಾಗಿ ಏತಕ್ಕೆ ಕೆಲಸ ಮಾಡಿಸಬಾರದು. ನಿಮ್ಮ ಹತ್ತಿರ ಲ್ಯಾಂಡ್ ಆರ್ಮಿ ಇದೆ, ಚೀಫ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಇದ್ದಾರೆ, ಎಕ್ಸಿಕ್ಯೂಟೀವ್ ಇಂಜಿನಿಯರ್ ಇದ್ದಾರೆ ಮತ್ತು ಇನ್ನಿತರ ಸಾಕಷ್ಟು ಸಿಬ್ಬಂದಿ ಇಟ್ಟುಕೊಂಡಿರುವಾಗ ಇವರ ಮುಖಾಂತರ ಏತಕ್ಕೆ ಮಾಡಿಸಬಾರದು.

ಶ್ರೀ ಹೆಚ್. ಡಿ. ದೇವೇಗೌಡ.— ಸ್ವಾಮಿ, ಈ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್‌ಗೆ ವಹಿಸಿಕೊಡಲಿ ಎಂದು ಭೀಮಣ್ಣ ಖಂಡ್ರೆಯವರು ಈಗಲೇ ಹೇಳಲಿ. ನಾನು ಈ ಸದನದಲ್ಲೇ ಇದರ ಬಗ್ಗೆ ಡಿಕ್ಲೇರ್ ಮಾಡಿ ಅವರಿಗೆ ವಹಿಸಿ ಕೊಡುತ್ತೇನೆ. ಆಮೇಲೆ ನನ್ನ ಮೇಲೆ ಆಕ್ಷೇಪಣೆ ಮಾಡಬೇಡಿ. ಇದು ಸಮರ್ಥ

ವಾದ ರೀತಿಯಲ್ಲಿ ಬೆಳೆದಿಲ್ಲ. ಇದಕ್ಕೆ ಬೇರೆ ಬೇರೆ ಕಾರಣಗಳಿವೆ. ಇಲಾಖಾವಾರು ಚರ್ಚೆ ಬಂದಾಗ ಆ ಸಂದರ್ಭದಲ್ಲಿ ಬೇಕಾದರೆ ಉತ್ತರ ಕೊಡುತ್ತೇನೆ. ಈ ಸಂಸ್ಥೆಯ ಬಗ್ಗೆ ಬಹಳಷ್ಟು ಟೀಕೆಗಳು ಬಂದಿವೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಸಹ ಇದನ್ನು ಮುಚ್ಚಿಬಿಡಿ ಎಂದು ಹೇಳಿದ್ದಾರೆ. ಇದೂ ಸಹ ಪರಿಶೀಲನೆಯಲ್ಲಿದೆ. ಅದಕ್ಕೆ ಕೊಟ್ಟ 18 ಕೆಲಸಗಳನ್ನು ಸಹ ವಾಪಸ್ಸು ಪಡೆದುಕೊಂಡಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.— ಅವರಿಗೆ ಕೊಟ್ಟು ಅವರಿಂದ ನೀವು ಕೆಲಸ ಮಾಡಿಸಿ.

ಶ್ರೀ ಹೆಚ್. ಡಿ. ದೇವೇಗೌಡ. – ಅಲ್ಲಿ ಅವರಿಗೆ ಕೆಲಸ ಮಾಡಬೇಕು ಎನ್ನತಕ್ಕ ಆಸಕ್ತಿ ಇಲ್ಲ. ಅಲ್ಲಿ ಅಂಥಾ ಪರಿಸ್ಥಿತಿ ಇದೆ. ಎರಡು ಮೂರು ಟೆಂಡರ್ ಕಾಲ್‌ಫಾರ್ ಮಾಡಿದರೂ ಸಹ ಯಾರೂ ಬರುತ್ತಿಲ್ಲ. ಇದು ಸರ್ಕಾರದ ತಪ್ಪಲ್ಲ. ಈಗ ಬಂದಿರತಕ್ಕವರು ಶೇಕಡ 96 ರಷ್ಟು ಕೇಳುತ್ತಿದ್ದಾರೆ. ಅದಕ್ಕೆ ನಾವು ನೆಗೋಶಿಯೇಟ್ ಮಾಡುತ್ತಿದ್ದೇವೆ. ಇನ್ನು ಹಣದ ಪ್ರಶ್ನೆ ಬಗ್ಗೆ ಹೇಳುವುದಾದರೆ ಅದಕ್ಕೆ ಎಷ್ಟು ಬೇಕೋ ಅಷ್ಟನ್ನು ಒದಗಿಸಿ ಆ ಕೆಲಸವನ್ನು ತ್ವರಿತವಾಗಿ ಮಾಡಬೇಕು ಎನ್ನತಕ್ಕ ಇಚ್ಛೆ ನಮಗೂ ಇದೆ.

ಇನ್ನು ಕಾವೇರಿ ನೀರಿನ ಬಗ್ಗೆ ಶ್ರೀಮಾನ್ ಹುಚ್ಚಮಾಸ್ತಿಗೌಡರು, ಶ್ರೀ ಮಾದೇಗೌಡರು ಮತ್ತು ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿ ಹೇಳಿದರು. ಸ್ವಾಮಿ, ನಾನು ಎರಡು ಸಾರಿ ಸಭೆಯನ್ನು ಕರೆದಿದ್ದೆ. ಮೊದಲನೆ ಸಭೆಗೆ ಶ್ರೀಮಾನ್ ವೀರಪ್ಪಮೊಯಿಲಿಯವರು ಮತ್ತು ಶ್ರೀ ಹುಚ್ಚಮಾಸ್ತಿಗೌಡರವರು ಆ ಸಭೆಗೆ ಬರಲಿಕ್ಕೆ ಆಗಲಿಲ್ಲ. ಬಹುಶಃ ಕಾರಣಾಂತರದಿಂದ ಬರಲಿಕ್ಕೆ ಆಗಲಿಲ್ಲವೆಂದು ಕಾಣುತ್ತದೆ. 2ನೇ ಸಭೆಗೂ ಪ್ರಮುಖ ಮುಖಂಡರು ಬರಲಿಲ್ಲ. ಒಟ್ಟಾರೆ ಆ ಸಭೆಯಲ್ಲಿ ತೀರ್ಮಾನವಾದ ಪ್ರಕಾರ ನಮ್ಮ ರೈತರಿಗೆ ಅನಾಹುತ ಮಾಡಬೇಡಿ ಎನ್ನತಕ್ಕ ಅಭಿಪ್ರಾಯಕ್ಕೆ ಬಂದೆವು. ಮಾನ್ಯ ಶ್ರೀ ಹುಚ್ಚಮಾಸ್ತಿಗೌಡರವರಿಗೆ ಮತ್ತು ಇತರ ಮುಖಂಡರವರಿಗೂ ಗೊತ್ತಿದೆ, ಇದು ವ್ಯವಹಾರಿಕ ದೃಷ್ಟಿಯಿಂದ ನಮಗೆ ತೊಂದರೆಯಾದರೂ ಕೂಡ ಅವರಿಗೆ ನೀರನ್ನು ಸ್ವಲ್ಪ ಕೊಡಬೇಕಾಗುತ್ತದೆ ಎನ್ನತಕ್ಕ ಭಾಗವನ್ನು ಅಲ್ಲೂ ಕೂಡ ನಾನು ಹೇಳಿದ್ದೆ. ಮತ್ತು ನಮ್ಮ ಅಧಿಕಾರಿಗಳ ಅಭಿಪ್ರಾಯ ಕೂಡ ಹಾಗೆ ಇದೆ. ಎರಡನೇ ಸಭೆ 5ನೇ ತಾರೀಖು ಸೇರಿದಾಗ ತಮಿಳುನಾಡಿನ ಮುಖ್ಯ ಮಂತ್ರಿಗಳು ಬರುತ್ತಾರೆ, ಅವರು ನಮ್ಮ ಮುಖ್ಯ ಮಂತ್ರಿಗಳವರೊಡನೆ ಸಮಾಲೋಚನೆ ಮಾಡಿದ ಮೇಲೆ ಮತ್ತೊಂದು ಸಭೆಯನ್ನು 12ನೇ ತಾರೀಖು ಕರೆಯುತ್ತೇನೆಂದು ಹೇಳಿದೆ ಆನಂತರದ ಸಭೆಯಲ್ಲೂ ಕೂಡ ಕಾರಣಾಂತರದಿಂದ ಕೆಲವು ಮುಖಂಡರುಗಳು ಬರಲಿಕ್ಕೆ ಆಗಲಿಲ್ಲ. ಅವತ್ತು ಅಲ್ಲೂ ಕೂಡ ಪ್ರಸ್ತಾಪವಾದುದು ಏನೆಂದರೆ ನಮ್ಮ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಸ್ವಲ್ಪ ನೋಡಿಕೊಳ್ಳಬೇಕಾದ್ದು ನಮ್ಮ ಜವಾಬ್ದಾರಿ. ತಮಿಳುನಾಡಿನ ಮುಖ್ಯ ಮಂತ್ರಿಗಳವರ ಹತ್ತಿರ ನಾವು ನಮ್ಮಲ್ಲಿ ನೀರಿದೆ ಎಂದು ಹೇಳಲಿಲ್ಲ. ಇವತ್ತೂ ಕೂಡ ಇಲ್ಲ ಎಂದು ಪ್ರತಿಪಾದನೆ ಮಾಡುತ್ತಿದ್ದೇವೆ. ನಿಮ್ಮಲ್ಲಿ ನೀರು ಇದೆ, ಅದನ್ನು ಬಿಟ್ಟು ಕೊಡಲೇ ಬೇಕು ಎನ್ನತಕ್ಕ ಭಾವನೆಯನ್ನು ಅವರು ವ್ಯಕ್ತಪಡಿಸಲಿಲ್ಲ. ವಾಸ್ತವಾಂಶವಾಗಿ ಇವತ್ತು ಏನಿದೆ ಎಂದರೆ ನಮ್ಮ ರೈತರು ಕಷ್ಟದಲ್ಲಿದ್ದಾರೆ. ತಮಿಳುನಾಡಿನ ಮಾನ್ಯ ಮುಖ್ಯ ಮಂತ್ರಿಗಳು ಬಂದಾಗ ನೀರನ್ನು ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುವಂಥ ಪರಿಸ್ಥಿತಿ ಬಂದಾಗ ಮಾತುಕತೆ ಮುರಿದು ಬಿದ್ದು ಹೋಯಿತು ಎನ್ನುವ ಮಟ್ಟಕ್ಕೆ ಪರಿಸ್ಥಿತಿ ಬಂದಾಗ ಆ ರೀತಿ ಮುರಿದು ಬೀಳಬಾರದು, ಸೌಹಾರ್ದಯುತವಾಗಿ ನಾವು ನಿರ್ಣಯ ಮಾಡಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ನಮ್ಮ ಪಕ್ಕದ ರಾಜ್ಯದ ರೈತರು ಸಹ ನಮ್ಮ ರೈತರಿದ್ದ ಹಾಗೆ, ಅವರೂ ಕಷ್ಟ ಬಿದ್ದಿದ್ದಾರೆ, ಅವರನ್ನು ಸಮ ಭಾವನೆಯಿಂದ ನೋಡಿಕೊಳ್ಳಬೇಕೆನ್ನುವ ದೃಷ್ಟಿಯಿಂದ ನಮ್ಮ ರೈತರಿಗೆ 10 ದಿವಸಕ್ಕೆ ನೀರು ಕೊಡುವ ಬದಲು 12 ದಿವಸಕ್ಕೆ ಒಮ್ಮೆ ನೀರು ಕೊಡುವ ಗ್ಯಾಪ್ ಇಟ್ಟುಕೊಂಡು ಆ ರೀತಿ ಸ್ವಲ್ಪ ನೀರನ್ನು ಉಳಿಸಿಕೊಂಡು ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರನ್ನು ಮತ್ತು ಎಲ್ಲಾ ಪಕ್ಷದ ಮುಖಂಡರನ್ನು ಕರೆಸಿ ಸಮಾಲೋಚನೆ ಮಾಡಿ, ನಿರ್ಣಯ ಮಾಡುತ್ತೇವೆಂದು ಹೇಳಿದ್ದೆ. ಅದೇ ರೀತಿಯಾಗಿ ನಾನು ಸಭೆಯನ್ನು ಕರೆದು ಚರ್ಚೆ ಮಾಡಿದ ಮೇಲೆ ನಮ್ಮ ರೈತರು ಮತ್ತು ಪಕ್ಕದ ರಾಜ್ಯದ ರೈತರು ಸೌಹಾರ್ದಯುತವಾಗಿ ಒಂದೇ ವಾತಾವರಣದಲ್ಲಿ ಇರಬೇಕು ಎನ್ನುವ ದೃಷ್ಟಿಯಿಂದ ನಾವು ಈ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಆದುದರಿಂದ ತಮಿಳುನಾಡಿನ ಜನತೆಯಾಗಲೀ ಅಥವಾ ಅಲ್ಲಿಯ ಮುಖ್ಯ ಮಂತ್ರಿಗಳವರಾಗಲೀ, ಬಹಳ ದೊಡ್ಡ ಪ್ರಮಾಣದಲ್ಲಿ ನೀರನ್ನು ಇಟ್ಟುಕೊಂಡಿದ್ದೇವೆ ಎಂದು ಭಾವಿಸಬೇಕಾದ ಅವಶ್ಯಕತೆ ಇಲ್ಲ. ಆದರೆ ಇವತ್ತು ಇಲ್ಲಿ ಬೆಳೆದು ನಿಂತಿರತಕ್ಕ ಬೆಳೆಯನ್ನು ಉಳಿಸಬೇಕೆಂಬ ಮಾನವೀಯ ದೃಷ್ಟಿಯಿಂದ ನಿರ್ಣಯ ಮಾಡಬೇಕಾಗಿ ಬಂತು. ಇವೆಲ್ಲಕ್ಕಿಂತ ಹೆಚ್ಚಾಗಿ ತಾತ್ಕಾಲಿಕವಾಗಿ ಕೆಲವು ತೊಂದರೆಗಳನ್ನು ಸಹಿಸಿಕೊಳುವುದಕ್ಕೆ ತಯಾರಾಗಬೇಕಾಗುತ್ತದೆ. ಈ ವಿಷಯಕ್ಕೆ ಖಾಯಂ ಆಗಿ ಪರಿಹಾರ ಹುಡುಕಬೇಕು ಅಂದರೆ ಸಾಧ್ಯವಾದಷ್ಟು ಮಟ್ಟಿಗೆ ನಾವು ಎರಡೂ ಪಾರ್ಟೀಸ್ ಕುಳಿತುಕೊಂಡು ಸೌಹಾರ್ದಯುತವಾಗಿ ನಿರ್ಣಯ ಮಾಡಿಕೊಳ್ಳಬೇಕೆಂಬ ಆಶಯ, ಕರ್ನಾಟಕ ಸತತವಾಗಿ ಹೊಂದಿದೆ. ಇವತ್ತು ಅಲ್ಲ ಹಿಂದಿನ ಸರ್ಕಾರ ಇರಬಹುದು, ಶ್ರೀಮಾನ್ ದೇವರಾಜ ಅರಸರ ಸರ್ಕಾರ ಇರಬಹುದು ಅಥವಾ ಅದರ ಹಿಂದಿನ ಸರ್ಕಾರ ಇರಬಹುದು, ಈ ವಿಷಯವನ್ನು ನಾವೇ ಕುಳಿತುಕೊಂಡು ತೀರ್ಮಾನ ಮಾಡಬೇಕೆಂಬ ಸದಾಶಯದಿಂದ ಅಲ್ಪಸ್ವಲ್ಪ ನಮಗೆ ಇಕ್ಕ

ಟ್ಟಿಗೆ ಸಿಕ್ಕಿದರೂ ಕೂಡಾ, ಒಳ್ಳೆಯ ವಾತಾವರಣ, ಮಧುರ ಬಾಂಧವ್ಯ ಉಳಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ನಿರ್ಣಯವನ್ನು ತೆಗೆದುಕೊಂಡಿದ್ದೇವೆಯೇ ಹೊರತು ರಾಜ್ಯದ ಹಿತಕ್ಕೆ ಧಕ್ಕೆ ತರಬೇಕೆಂದಲ್ಲ, ರಾಜ್ಯದ ರೈತರಿಕೆಗೆ ಧಕ್ಕೆ ತರಬೇಕೆಂದಲ್ಲ ಎಂದು ಸ್ಪಷ್ಟೀಕರಣ ಮಾಡುತ್ತೇನೆ. ಇವತ್ತು ಇರತಕ್ಕಂಥ ಸನ್ನಿವೇಶದಲ್ಲಿ ಹಾಲಿ ಬೆಳೆದು ನಿಂತಿರತಕ್ಕ ಬೆಳೆ ಏನಿದೆ ಅದನ್ನು ಉಳಿಸಲಿಕ್ಕೆ ಸರ್ಕಾರ ಸಂಪೂರ್ಣವಾಗಿ ಪ್ರಯತ್ನ ಮಾಡುತ್ತದೆಂದು ಈ ಸದನದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ. ಮಾದೇಗೌಡ.— ಅಧ್ಯಕ್ಷರೇ, ಒಂದು ವಿಷಯ........ ....

ಶ್ರೀ ರಾಮಕೃಷ್ಣ ಹೆಗಡೆ.— ಅದರ ಬಗ್ಗೆ ಪ್ರತ್ಯೇಕ ಚರ್ಚೆ ಮಾಡೋಣ, ಪ್ರಶ್ನೆ ಉತ್ತರ ಅಲ್ಲ ಇದು. ಮಾನ್ಯ ಅಧ್ಯಕ್ಷರೇ, ಕೆಲವು ಸ್ಪಷ್ಟೀಕರಣವನ್ನು ಮಾನ್ಯ ಸದಸ್ಯರು ಕೇಳಿದ್ದಾರೆ, ಕೆಲವು ಪ್ರಶ್ನೆಗಳನ್ನೂ ಕೇಳಿದ್ದಾರೆ. ನಾನು ಮಾನ್ಯ ಮಾದೇಗೌಡರಿಂದಲೇ ಪ್ರಾರಂಭ ಮಾಡುತ್ತೇನೆ. ಅವರು ಹೇಳಿದರು, ಕೆಲವು ದುಷ್ಟ ಶಕ್ತಿಗಳು, ಕೆಲವು ರಾಜಕೀಯ ಶಕ್ತಿಗಳು, ಲಾ ಅಂಡ್ ಆರ್ಡರ್ ಸಿಚಿಯೇಷನ್ ಡಿಸ್ಟರ್ಬ್ ಮಾಡಲಿಕ್ಕೆ ಪ್ರಯತ್ನ ಮಾಡಿವೆ, ಅವು ಯಾವ ಶಕ್ತಿಗಳು ಹೇಳಿ ಎಂದು ಹೇಳಿದರು. ನಾನು ಅದನ್ನು ಬೇಕೆಂತಲೇ ಹೇಳಲಿಲ್ಲ. ಹೇಳತಕ್ಕಂಥ ಅಗತ್ಯವೂ ಇಲ್ಲ. ಬೇಕಾದರೆ ಒಂದೆರಡು ಉದಾಹರಣೆ ಕೊಡಬಲ್ಲೆ. ಪ್ರಸಂಗ ಬಂದಾಗ ಅದರ ಬಗ್ಗೆ ಹೇಳುತ್ತೇನೆ. ದಾವಣಗೆರೆಯಲ್ಲಿ ಒಂದು ಘಟನೆ ನಡೆಯಿತು. ಅಲ್ಲಿ ಮುಸಲ್ಮಾನ್ ಬಾಂಧವರ ಪೂಜಾ ಸ್ಥಾನದಲ್ಲಿ, ಮಸೀದಿಯಲ್ಲಿ, ಒಂದು ಸಲ ಅಲ್ಲ, ಎರಡು ಸಲ ಹಂದಿ ಮರಿಯನ್ನು ಕೊಯ್ದು ಅದರ ತುಂಡುಗಳನ್ನು ಹಾಕಿದರು. ಯಾರು ಹಾಕಿದರು ಗೊತ್ತಿಲ್ಲ, ಹೇಳಲೇ ಅದನ್ನು.

ಶ್ರೀ ಜಿ. ಮಾದೇಗೌಡ.— ಹೇಳಲೇ ಬೇಕು, ನಾವು ಸರ್ಕಾರ ನಡೆಸುತ್ತಿದ್ದೇವೆಯೆ ? ನೀವು ಸರ್ಕಾರ ನಡೆಸುತ್ತಿರುವವರು.

ಶ್ರೀ ರಾಮಕೃಷ್ಣ ಹೆಗಡೆ.— ಕಾಂಗ್ರೆಸ್-ಐಗೆ ಸಂಬಂಧಪಟ್ಟ ವ್ಯಕ್ತಿಗಳು ಹಾಕಿದರು.

ಶ್ರೀ ಮಾದೇಗೌಡ.— ಹೆಸರು ಹೇಳಬೇಕು, ಪಕ್ಷ ಹೇಳಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.— ಇದು ಎಷ್ಟರ ಮಟ್ಟಿಗೆ ಮುಸಲ್ಮಾನರ ಭಾವನೆಗಳನ್ನು ಕೆರಳಿಸುತ್ತದೆ ಅಂದರೆ ವರ್ಣನೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್. — ಹೆಸರು ಹೇಳುವುದಕ್ಕೆ ಸಾಧ್ಯವೇ, ತಾವು ಕಾಂಗ್ರೆಸ್–ಐ ಎಂದು ಹೇಳಿದಿರಿ, ಒಂದು ವೇಳೆ ಯಾರೋ ಮಾಡಿ, ಕಾಂಗ್ರೆಸ್–ಐ ಎಂದು ಹೇಳಿಕೊಂಡಿರಬಹುದು. ಆದುದರಿಂದ ಯಾರು ಎಂದು ಅವರ ಹೆಸರು ಕೊಟ್ಟರೆ ಅನುಕೂಲವಾಗುತ್ತದೆ.

(ಗೊಂದಲ)

ಶ್ರೀ ಭೀಮಣ್ಣ ಖಂಡ್ರೆ.—ಜವಾಬ್ದಾರಿಯಿಂದ ಮಾತನಾಡುವಾಗ ಅವರು ಹೆಸರು ಕೊಡಬೇಕು. ಜಾತಿ ಅಲ್ಲ, ಯಾವ ಪಕ್ಷ, ಯಾರು ಮಾಡಿದ್ದಾರೆ ಅದನ್ನು ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.— ಹೆಸರು ಗೊತ್ತಿದೆ.

ಉಪಾಧ್ಯಕ್ಷರು.— ಹೆಸರು ಗೊತ್ತಿದೆ ಎಂದು ಹೇಳುತ್ತಿದ್ದಾರೆ, ನೀವು ಕುಳಿತುಕೊಳ್ಳಿ, ಅವರು ಹೇಳುತ್ತಾರೆ, ನಿಮಗೆ ಅಷ್ಟೂ ಪೇಷನ್ಸ್ ಇಲ್ಲವೇ ?

ಶ್ರೀ ಭೀಮಣ್ಣ ಖಂಡ್ರೆ.—ಕಳ್ಳರಿಗೆ ಮೋಸಗಾರರಿಗೆ ಜಾತಿ ಇರುವುದಿಲ್ಲ, ಅವರು ಎಲ್ಲಾ ಜಾತಿ ಒಳಗೂ ಇರುತ್ತಾರೆ. ಪಕ್ಷ ಏಕೆ ಹೇಳಿದಿರಿ, ಹೆಸರು ಕೊಡಿ.

ಉಪಾಧ್ಯಕ್ಷರು.—ಖಂಡ್ರೆಯವರೇ, ಹೆಸರು ಗೊತ್ತಿದೆ ಎಂದು ಹೇಳುತ್ತಿದ್ದಾರೆ. ಕುಳಿತುಕೊಳ್ಳಿ.

ಶ್ರೀ ಭೀಮಣ್ಣ ಖಂಡ್ರೆ.— ಬೀದರ್ ಜಿಲ್ಲೆಯಲ್ಲಿ ಆಯಿತು, ನಾವು ಜನತಾ ಪಕ್ಷದವರು ಎಂದು ಹೇಳಲಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.— ಹೆಸರು ಕೊಡುತ್ತೇನೆಂದು ಹೇಳಿದರೂ ಮಾನ್ಯ ಖಂಡ್ರೆಯವರು ಈ ರೀತಿ ಮಾತನಾಡುತ್ತಾ ಇದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.— ಹೆಸರು ಕೊಡಲಿ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಅದನ್ನೂ ಹೇಳಲಿ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಅದಕ್ಕಾಗಿಯೇ ನಾನು ವಿವರಕ್ಕೆ ಹೋಗಲಿಲ್ಲ. ಸಂದರ್ಭ ಸಿಕ್ಕಾಗ ವಿಚಾರ ಹೇಳೋಣ ಎಂದು ಹೇಳಿದೆ. ಕಹಿ ಪ್ರಶ್ನೆ ಕೇಳಿದ್ದಕ್ಕಾಗಿ ಹೇಳಬೇಕಾಗಿ ಬಂತು. ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೂ, ಮಾನ್ಯ ಮಾದೇಗೌಡರಿಗೂ ಮತ್ತು ಇಷ್ಟು ಹೊತ್ತು ಆರ್ಭಟದಿಂದ ಮಾತನಾಡಿದ ಮಾನ್ಯ ಭೀಮಣ್ಣ ಖಂಡ್ರೆಯವರಿಗೂ ಯಾವ ಪ್ರಕಾರ ಯಾರ ಮೇಲೆ ಕೇಸ್ ಹಾಕಿದ್ದೇವೆ ಎಂಬ ಸಂಪೂರ್ಣ ಮಾಹಿತಿಯನ್ನು ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ರಾಜಕೀಯ ಪಕ್ಷದ ಮೇಲೆ ಆಪಾದನೆ ಮಾಡಿಕೊಂಡು ತಪ್ಪಿಸಲಿಕ್ಕೆ ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಸಂಸದೀಯ ವ್ಯವಹಾರದ ಕಲ್ಪನೆ ಅವರಿಗೆ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಮಾತು ಕೊಟ್ಟರೆ, ಕೊಡುತ್ತೇನೆಂದು ಹೇಳಿದ ಮೇಲೆ, ಕೊಡದೇ ಇದ್ದರೆ ಹಕ್ಕುಗಳ ಉಲ್ಲಂಘನೆ ಮಾಡಿದ ಅಪರಾಧಕ್ಕೆ ಗುರಿಯಾಗುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಅಂತಹ ನೂರಾರು ಹಕ್ಕುಗಳ ಉಲ್ಲಂಘನೆ ಆಗಿದೆ.

ಶ್ರೀ ರಾಮಕೃಷ್ಣಹೆಗಡೆ.— ಏನೋ ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಕೋತಿ ತಾನು ತಿಂದು ಬೇರೆಯವರಿಗೆ ಒರೆಸುವುದಕ್ಕೆ ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಪ್ರಿವಿಲೇಜ್ ಕಮಿಟಿಗೆ ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.— ಇಷ್ಟು ಲಘುವಾಗಿ ಆಪಾದನೆ ಮಾಡತಕ್ಕೆ ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಭೀಮಣ್ಣ ಖಂಡ್ರೆಯವರು ಬಾರ್ಡರ್ ಬಗ್ಗೆ ಪ್ರಸ್ತಾಪ ಮಾಡಿದರು. ಇದು ಮೊದಲನೇ ಸಲ ಅಲ್ಲ, ನಾಲ್ಕೈದು ಸಲ ಎತ್ತಿದ್ದಾರೆ. ಎಷ್ಟು ಸಲ ಎತ್ತಿದರೂ, ಇಲ್ಲಿವರೆಗೆ ಎಷ್ಟರಮಟ್ಟಿಗೆ ಡೆವಲಪ್‌ಮೆಂಟ್ ಆಗಿದೆ ಅಷ್ಟು ಮಾತ್ರ ಹೇಳಿದೆ. ಅದಕ್ಕಿಂತ ಹೆಚ್ಚು ಹೇಳುವುದಕ್ಕೆ ಸಾಧ್ಯವಿಲ್ಲ. ಸರ್ಕಾರದ ನೀತಿ ಕೂಡ ನಾನು ಹೇಳಿದ್ದೇನೆ. ಮಹಾಜನ್ ಕಮೀಷನ್ ಶಿಫಾರಸ್ಸು ಏನು ಇದೆ, ಅದರ ಚೌಕಟ್ಟಿನೊಳಗೆ ಏನಾದರೂ ಈ ಸಮಸ್ಯೆಯ ಪರಿಹಾರಕ್ಕೆ ಮಾರ್ಗ ಕಂಡು ಹಿಡಿಯುವುದಕ್ಕೆ ಸಾಧ್ಯವೋ ಎಂಬ ಬಗ್ಗೆ ಮಾತುಕತೆ ನಡೆಯುತ್ತಿದೆ. ನಿನ್ನೆ ಕೆಲವು ಪತ್ರ ಬಂದಿವೆ. ಫೆಬ್ರುವರಿ 15–16ನೇ ತಾರೀಖು ಮಾತುಕತೆ ಮಾಡೋಣ ಎಂದು ಇದ್ದೇವೆ. ಹಿಂದೆ ಒಂದು ಸಲ ನಾವು ಸೇರಿದ್ದೆವು. ಸೇರಿದ್ದಾಗ ಏನು ಚರ್ಚೆ ಮಾಡಿದ್ದೇವೆಂದು ಹೇಳಿದ್ದೇನೆ. ಈ ಸದನದಿಂದ ಯಾವ ವಿಚಾರವನ್ನೂ ಬಚ್ಚಿಡತಕ್ಕಂಥ ಪ್ರಶ್ನೆ ಇಲ್ಲ, ಬಚ್ಚಿಡುವುದಕ್ಕೆ ಕಾರಣ ಏನು ? ಅದರಿಂದ ಏನು ಪ್ರಯೋಜನ ಇದೆ ? ಒಂದಲ್ಲ ಒಂದು ದಿವಸ ಅದು ಈ ಮನೆಯ ಮುಂದೆ ಬರಲೇ ಬೇಕು. ಕದ್ದುಮುಚ್ಚಿ ಮಾಡುವುದಿಲ್ಲ.

ಡಾ. ವಿ. ಎಸ್ ಆಚಾರ್ಯ.— ಕಾಸರಗೋಡು ಪ್ರಶ್ನೆ ಎಲ್ಲವನ್ನೂ ಕೂಡಿಸಿ ಮಾತನಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.— ಅದಕ್ಕೂ ಬರುತ್ತೇನೆ. ಮಧ್ಯದಲ್ಲೇ ನೀವು ಈ ರೀತಿ ಮಾತನಾಡಿದರೆ ಹೇಗೆ ? ನಾನು ಹೇಳದೇ ಇದ್ದರೆ ಕೇಳಿ, ದಯವಿಟ್ಟು ನಾನು ಹೇಳುವುದು ಕೇಳಿ. ಒಂದು ಐಡಿಯಾ ಕಂಪ್ಲೀಟ್ ಆದಮೇಲೆ ಅದರಲ್ಲಿ ನಾನು ಹೇಳದೇ ಇದ್ದರೆ ಆಗ ಕೇಳಿ ಹೇಳುತ್ತೇನೆ. ಇದನ್ನು ಮುಗಿಸದೇ ಇರುವಾಗ ಮಧ್ಯದಲ್ಲೇ ಕಾಸರಗೋಡು ಎಂದರೆ ನಾನು ಹೇಗೆ ಹೇಳಲಿ. ಈಗ ಮಹಾಜನ್ ಕಮೀಷನ್‌ನ ಚೌಕಟ್ಟಿನಲ್ಲಿ ಏನಾದರೂ ಇತ್ಯರ್ಥ ಆಗುವುದಕ್ಕೆ ಸಾಧ್ಯವೇ ಎಂದು ಕೆಲವು ಜನ ಕೇಳಬಹುದು. ಕೆಲವು ಜನ ಮಹಾಜನ್ ಕಮೀಷನ್‌ನಿಂದ ಏನು ಪ್ರಯೋಜನ ಎಂದು ಹೇಳಬಹುದು. ನಾನು ಆ ಬುದ್ಧಿಯವನಲ್ಲ. ಯಾರಾದರೂ ಮಾತುಕತೆ ಆಡಬೇಕು, ಕುಳಿತುಕೊಂಡೆ ಚರ್ಚೆ ಮಾಡೋಣ ಎಂದು ಹೇಳಿದರೆ, ಇಲ್ಲ ಆಗುವುದಿಲ್ಲ, ಮಹಾಜನ್ ಕಮೀಷನ್ ವರದಿಯನ್ನು ನೀವು ನೂರಕ್ಕೆ ನೂರರಷ್ಟು ಒಪ್ಪಿಕೊಳ್ಳುವುದಾದರೆ ಒಪ್ಪಿಕೊಳ್ಳಿ, ಇಲ್ಲದೇ ಹೋದರೆ ಇಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಮೊದಲನೇ ಸುತ್ತಿನ ಮಾತುಕತೆಯಲ್ಲಿ ಮಹಾರಾಷ್ಟ್ರ ಗಡಿ ಪ್ರದೇಶದ ಒಳಗಡೆ ಇರತಕ್ಕಂಥ ಕನ್ನಡಿಗರ ಪರಿಸ್ಥಿತಿ ಏನು, ಅಲ್ಲಿರತಕ್ಕ ಕನ್ನಡಿಗರಿಗೆ ಅಭಿವೃದ್ಧಿ ಯೋಜನೆಗಳ ಫಲ ಏನು ಸಿಕ್ಕಿದೆ, ಅದೇ ರೀತಿ ಕರ್ನಾಟಕದ ಒಳಗಡೆ ಇರತಕ್ಕಂಥ, ಗಡಿ ಭಾಗದಲ್ಲಿರತಕ್ಕಂಥ ಮರಾಠಿ ಮಾತನಾಡತಕ್ಕವರಿಗೆ ಏನು ತೊಂದರೆ ಇದೆ, ಗ್ರಿವಿಯನ್ಸಸ್ ಏನಿದೆ ಎನ್ನುವುದರ ಬಗ್ಗೆ ಸ್ಟಡಿ ಮಾಡಿ, ರಿಪೋರ್ಟ್ ಮಾಡಬೇಕೆಂದು ಹೇಳಿ, ರಿಪೋರ್ಟ್ ತಯಾರಾಗಿದೆ. ಎರಡನೇ ಸಲ ಫೆಬ್ರುವರಿ 15–16ನೇ ತಾರೀಖಿಗೆ ತಿರುಗಿ ಮೀಟಿಂಗ್ ಸೇರುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ 17ನೇ ತಾರೀಖಿಗೆ ನಮ್ಮ ಬಡ್ಜೆಟ್ಟನ್ನು ಮಂಡನೆ ಮಾಡಬೇಕಾಗಿದೆ.

ಇನ್ನು ಕಾಸರಗೋಡಿನ ವಿಚಾರ. ಕಾಸರಗೋಡನ್ನು ಮರೆಯುವುದಕ್ಕೆ ಹೇಗೆ ಸಾಧ್ಯ ಇದೆ ಹೇಳಿ. ಕಾಸರಗೋಡಿನ ವಿಚಾರದಲ್ಲಿ ಕೇರಳದ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಕರುಣಾಕರನ್ ಅವರಿಗೆ ನಾನು ಎರಡು ಪತ್ರಗಳನ್ನು ಬರೆದಿದ್ದೇನೆ. ಮೊದಲನೇ ಪತ್ರಕ್ಕೆ ಅವರ ಉತ್ತರ ಬಂದಿದೆ. ಅವರು ಇಲ್ಲ, ಮತ್ತೆ ಆ ವಿಚಾರ ಎತ್ತಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಮತ್ತೊಂದು ಪತ್ರ ಬರೆದು, ಇಲ್ಲ, ಕೇರಳದಲ್ಲಿ ಹಿಂದಿನ ಸರ್ಕಾರದವರು ಕೆಲವೊಂದಕ್ಕೆ ಒಪ್ಪಿಕೊಂಡಿದ್ದಾರೆ. ಒಂದು ಫಿಕಾ ಕೊಡುವುದಕ್ಕೆ ಅವರಾಗೇ ಒಪ್ಪಿಕೊಂಡಿದ್ದಾರೆ, ನಮ್ಮದೇನೂ ತಕರಾರು ಇಲ್ಲ ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ತೀರ್ಮಾನಕ್ಕೆ ಬರೋಣ ಎಂದು ಪತ್ರ ಬರೆದಿದ್ದೇನೆ. ಅದಕ್ಕೆ ಉತ್ತರ ಬಂದಿಲ್ಲ. ನಾನು ಕಾಸರಗೋಡನ್ನು ಬಿಟ್ಟು ಹೋಗುತ್ತಾ ಇರಲಿಲ್ಲ. ಮಧ್ಯದಲ್ಲಿ ಮಾತನಾಡಿದ ತಕ್ಷಣ ಹೇಳಬೇಕೆಂದು ನಮ್ಮ ಆಚಾರ್ಯರು ಹೇಳಿದರೆ ಹೇಗೆ ? ನಾನೇನು ಬರೆದುಕೊಂಡು ಓದುತ್ತಿದ್ದೇನೆಯೇ ಇಲ್ಲಿ.

ಡಾ. ವಿ. ಎಸ್. ಆಚಾರ್ಯ.— ಈ ಸದನದಲ್ಲಿ ಇದರ ಬಗ್ಗೆ ಇಷ್ಟರವರೆಗೆ ಹೇಳಲಿಲ್ಲ.

ಶ್ರೀ ಭೀಮಣ್ಣ ಖಂಡ್ರೆ.— ಆಂಧ್ರದ ಬಗ್ಗೆ ಹೇಗೆ ಎಂಬುದನ್ನು ಹೇಳಿ.

ಒಬ್ಬ ಮಾನ್ಯ ಸದಸ್ಯರು.— ಪಾಕಿಸ್ತಾನದ ಬಗ್ಗೆಯೂ ಸ್ವಲ್ಪ ಮಾತನಾಡಿ.

(ಗೊಂದಲ)

ಶ್ರೀರಾಮಕೃಷ್ಣ ಹೆಗಡೆ.— ಮಾನ್ಯ ಸದ್ಯಸರಿಗೆ ಅದರ ವಿವೇಚನೆ ಬೇಡ. ಕನ್ನಡಿಗರ ಹಿತವನ್ನು ಅವರ ರಕ್ಷಣೆ ಸಂಬಂಧದಲ್ಲಿ ನಮಗೆ ಯಾವುದು ನ್ಯಾಯವಾಗಿ ಸಿಕ್ಕಬೇಕೋ ಅದನ್ನು ಬಿಟ್ಟುಕೊಡುವುದಕ್ಕೆ ಎಂದೂ ತಯಾರು ಇರುವುದಿಲ್ಲ. ಆ ಕೆಲಸ ಈ ಸರ್ಕಾರದಿಂದ ಆಗುವುದಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಶ್ರೀಮಾನ್ ದೇಸಾಯಿಯವರು ಹೆಲ್ತ್ ಸೆಂಟರ್ಸ್ ವಿಚಾರ ಹೇಳಿದ್ದಾರೆ. ತಕ್ಷಣ ಉತ್ತರ ಕೊಡುವಂತಹ ಸ್ಥಿತಿಯಲ್ಲಿ ಇಲ್ಲ. ಈಗಾಗಲೇ 60-62 ಹೆಲ್ತ್ ಸೆಂಟರ್ಸ್‌ಗಳನ್ನು ಕೊಟ್ಟಿದ್ದೇವೆ. ಈಗ ಕೇವಲ ಜಮೀನು ಮತ್ತು ಹಣವನ್ನು ಒದಗಿಸಿ ಕೊಟ್ಟಂತಹದ್ದನ್ನು ಒಂದನ್ನೇ ಆಧಾರವಾಗಿ ಇಟ್ಟುಕೊಂಡು ಹೆಲ್ತ್ ಸೆಂಟರ್ಸ್‌ಗಳನ್ನು ಹಂಚಿಲ್ಲ. ಅದರ ಜೊತೆಗೆ ಆ ಪ್ರದೇಶ ಎಷ್ಟು ಹಿಂದುಳಿದಿದೆ? ಹತ್ತಿರ ವೈದ್ಯಕೀಯ ಸೌಲಭ್ಯಗಳು ಇವೆಯೇ? ಇದ್ದರೆ ಎಷ್ಟು ಹತ್ತಿರದಲ್ಲಿದೆ? ಇವನ್ನೆಲ್ಲಾ ಗಣನೆಗೆ ತಗೆದುಕೊಳ್ಳಬೇಕಾಗುತ್ತದೆ. 15ಲಕ್ಷ ರೂಪಾಯಿಗಳನ್ನು ಕೊಟ್ಟಂತಹವರಿಗೆ ಮಾತ್ರ ಮಾಡುತ್ತಿದ್ದಾರೆ ಎಂಬುದು ಸರಿಯಲ್ಲ. ಇಲ್ಲದಿದ್ದರೆ ತಾವು ಈ ಬಗ್ಗೆ ಲಿಖಿತ ಪ್ರಶ್ನೆಯನ್ನಾದರೂ ಕೇಳಿ. ಇಲ್ಲ ಬಾಯಿ ಮಾತಿನ ಮೂಲಕ ಉತ್ತರಿಸುವ ಪ್ರಶ್ನೆಯನ್ನಾದರೂ ಕೇಳಬಹುದು ಅದಕ್ಕೆ ವಿವರವಾದ ಉತ್ತರವನ್ನು ಕೊಡುತ್ತೇವೆ, ಮತ್ತೆ ಆದಂತಹ ಕೆಲಸದ ಬಗ್ಗೆ 15ಲಕ್ಷ ರೂಪಾಯಿಗಳನ್ನು ಬಾಕಿ ಕೊಡಬೇಕಾಗಿದೆ ಎಂಬುದಾಗಿ ಹೇಳಿದ್ದಾರೆ. ನಾನು ಈ ಬಗ್ಗೆ ತಕ್ಷಣ ಜಿಲ್ಲಾಧಿಕಾರಿಗಳನ್ನು ಕೇಳಿ, ಅಷ್ಟು ಬಾಕಿ ಇದ್ದರೆ ಕೂಡಲೇ ಅದನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಿಸುತ್ತೇನೆ.

ಆ ಮೇಲೆ ಶ್ರೀಮಾನ್ ಮಾಣಿಕ್‌ರಾವ್ ಪಾಟೀಲ್‌ರವರು ಹೇಳಿದರು. ಈ ಒಂದು ನ್ಯಾಯಾಂಗ ತನಿಖೆಯನ್ನು ಮಾಡುವುದನ್ನು ಘೋಷಣೆ ಮಾಡಿದ್ದೀರಿ ಅದಕ್ಕೆ ನಾನು ಸಂತೋಷದಿಂದ ಅಭಿನಂದನೆಗಳನ್ನು ಸಲ್ಲಿಸಿದ್ದೇನೆಂದು ಹೇಳಿದ್ದಾರೆ. ಆವೇಲೆ ಮತ್ತೊಂದು, ಅಭಿನಂದನೆಯನ್ನು ಸಮಯಕ್ಕೆ ಮುಂಚಿತವಾಗಿ ಸಲ್ಲಿಸಿದ್ದಾರೆ. ನಿಮ್ಮ ಉದಾರತೆಗೆ ನಾನು ಕೃತಜ್ಞನಾಗಿದ್ದೇನೆ. ಮಾನ್ಯ ಬೈರೇಗೌಡರು ರಾಜೀನಾಮೆಯನ್ನು ಕಳುಹಿಸಿದ್ದಾರೆ. ಅದನ್ನು ಒಪ್ಪಬೇಕೋ, ಬಿಡಬೇಕೋ ಎಂಬುದರ ಬಗ್ಗೆ ನಾನು ನಿರ್ಧಾರ ಮಾಡಿಲ್ಲ ರಾಜೀನಾಮೆಯನ್ನು ಸ್ವೀಕರಿಸಬೇಕು, ಏತಕ್ಕೆ ಎನ್ನತಕ್ಕಂತಹ ಪ್ರಶ್ನೆಯ ವಿವರಕ್ಕೆ ನಾನು ಹೋಗಬೇಕಾಗುತ್ತದೆ. ಆದರೆ ಅದರ ಅಗತ್ಯ ಇಲ್ಲ. ಬೈರೇಗೌಡರ ಮೇಲೆ ಇರತಕ್ಕಂತಹ ಅಪರಾಧವಾದರೂ ಏನು? ಅವರಿಗೆ ಯಾರೋ ಲಂಚವನ್ನು ಕೊಟ್ಟರು. ಆ ಲಂಚವನ್ನು ಸ್ವೀಕರಿಸದೆ ಅದನ್ನು ಬಹಿರಂಗ ಮಾಡಿದರು. ಇದು ಯಾವ ಕಾಯಿದೆ ಪ್ರಕಾರ ಅಪರಾಧವಾಗುತ್ತದೆ ಎಂಬುದು ನನಗೆ ಗೊತ್ತಿಲ್ಲ. ಆದ್ದರಿಂದ ನ್ಯಾಯಾಂಗ ವಿಚಾರಣೆಯನ್ನು ಮಾಡುವಾಗ, ಅದಕ್ಕೆ ಮೊದಲು ಅವರ ಸ್ಥಾನ ಏನು ಅಂತ ನೋಡಬೇಕು. ಅವರು ಮಂತ್ರಿ ಇಲ್ಲ, ಮತ್ತೊಂದು ಇಲ್ಲ ಇರುವಂತಹ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದೇನೆ ಎಂದು ಹೇಳುವುದು ಅವರ ದಡ್ಡತನ. ಒಂದು ಸಾರ್ವಜನಿಕ ಜೀವನದಲ್ಲಿ ಅವರು ಅನುಸರಿಸಿರತಕ್ಕ ಮೌಲ್ಯದ ಸಂಕೇತ. ಆದರೆ ಸ್ವೀಕಾರ ಮಾಡುತ್ತೇನೆ ಅಂತ ಹೇಳುವುದಿಲ್ಲ ಇಲ್ಲಿ. ನಾನು ಯೋಚನೆ ಮಾಡುತ್ತೇನೆ. ಆ ಮೇಲೆ ಮಾಣಿಕ್ ರಾವ್ ಪಾಟೀಲ್‌ರವರು ಮತ್ತೊಂದು ವಿಚಾರವನ್ನು ಹೇಳಿದರು. ನಿನ್ನೆ ಮೇಲ್ಮನೆಯಲ್ಲಿ ಒಂದು ಪ್ರಸ್ತಾವನೆ ಪಾಸಾಯಿತು. ಅದಕ್ಕಾಗಿ ಇಬ್ಬರು ಮಂತ್ರಿಗಳು ರಾಜೀನಾಮೆಯನ್ನು ಕೊಡಬೇಕೆಂದು ಆಯಿತು. ಮಾನ್ಯ ಅಧ್ಯಕ್ಷರೇ ಪುನಃ ಅದೇ ಮಾತನ್ನು ನಾನು ಕೇಳಬೇಕಾಗುತ್ತದೆ. ಅವರು ಮೇಲ್ಮನೆಯಲ್ಲಿ ಒಂದು ನಿರ್ಣಯವನ್ನು ಪಾಸ್ ಮಾಡಿದರು. ನಾನು ನಿನ್ನೆ ಅಲ್ಲಿಯೂ ಕೂಡ ಇದೇ ಮಾತನ್ನು ಹೇಳಿದ್ದೇನೆ. ಇವತ್ತು ನೀವು ಇಲ್ಲಿ ಬಹುಮತ ವಿರೋಧಪಕ್ಷದಲ್ಲಿದ್ದೀರಿ. ಇದೇ ಒಂದು ಪರಿಸ್ಥಿತಿ 1977ನೇ ಇಸವಿಯಲ್ಲೂ ಇತ್ತು. ಅಲ್ಲಿ ವಿರೋಧಪಕ್ಷಕ್ಕೆ ಬಹುಮತ ಇತ್ತು. ಆವಾಗ ನಾನೇ ಅಲ್ಲಿ ವಿರೋಧಪಕ್ಷದ ನಾಯಕನಾಗಿದ್ದೆ. ಬಹುಮತ ತಾತ್ಕಾಲಿಕವಾಗಿ ಕೆಲವು ಕಾಲ ಇರಬಹುದು. 2ವರ್ಷ ಇರಬಹುದು. 4ವರ್ಷ ಇರಬಹುದು. ಅದಕ್ಕಿಂತ ಹೆಚ್ಚು ಏನೂ ಇರುವುದಿಲ್ಲ. ತಾತ್ಕಾಲಿಕವಾಗಿ ಬಹುಮತ ಇರುವಾಗ ಈ ತರಹದ ಲಾಭವನ್ನು, ರಾಜಕೀಯ ಪ್ರಯೋಜನವನ್ನು ತೆಗೆದುಕೊಳ್ಳತಕ್ಕದ್ದು ಅದು ನಮ್ಮ ಪರಂಪರೆಗೆ ಸರಿಯಾದುದಲ್ಲ ಅಂತ ಹೇಳಿದೆ. ಹಿಂದೆ ಇದೇ ಒಂದು ಪರಿಸ್ಥಿತಿ ಈ ಸದನದಲ್ಲಿದ್ದಾಗಲೂ ಕೂಡ ಯಾವ ಒಂದು ಸಂದರ್ಭದಲ್ಲೂ ಸರ್ಕಾರದ ಒಂದು ಮಸೂದೆಯನ್ನು ಕೂಡ ತಿರಸ್ಕರಿಸಿಲ್ಲ ಅಂತ ಹೇಳಿದ್ದೇನೆ. ಒಂದೇ ಒಂದು ಅಭೂತ ಸ್ವರೂಪದ್ದು ಅಂದರೆ ಲ್ಯಾಂಡ್‌ರಿಫಾರಂ ಬಗ್ಗೆ ತಿದ್ದುಪಡಿ ಮಸೂದೆ ಬಂತು. ಅದಕ್ಕೆ ಒಂದು ತಿದ್ದುಪಡಿಯನ್ನು ನಾವು ಸೂಚನೆ ಮಾಡಿದ್ದೆವು. ಅದು ರೈತರ ಪರವಾಗಿ ಇರತಕ್ಕಂತಹದ್ದು. ಆ ತಿದ್ದುಪಡಿಯನ್ನು ಪಾಸ್ ಮಾಡಿ ವಾಪಸ್ಸು ಈ ಮನೆಗೆ ಕಳುಹಿಸಿದ್ದು ನಿಜ. ಅದು ಒಂದನ್ನು ಬಿಟ್ಟರೆ. ಸರ್ಕಾರ ತಂದಂತಹ ಮನಿ ಬಿಲ್ಲನ್ನು ವಾಪಸ್ಸು ಕಳುಹಿಸಿರಲಿಲ್ಲ. ಅಪ್ರೋಪ್ರಿಯೇಷನ್ ಬಿಲ್ಲನ್ನು ವಾಪಸ್ಸು ಕಳುಹಿಸಿರಲಿಲ್ಲ. ಆದರೆ ಇದು ಅವರಿಗೆ ಉಚಿತ ಅಂತ ತಿಳಿದುಕೊಂಡಿದ್ದರೆ ಮಾಡಲಿ. ಅದನ್ನು ಆಕ್ಷೇಪಣೆ ಮಾಡುವುದಕ್ಕೆ

ನಗೆಗೆ ಏನೂ ಅಧಿಕಾರ ಇಲ್ಲ, ಅದು ಒಂದು ಮನೆ, ಸದನ. ನಿನ್ನೆ ಅದನ್ನೇ ಕೇಳಿಕೊಂಡೆ. ಇದು ಬಹಳ ಬ್ಯಾಡ್ ಪ್ರಿಸಿಡೆಂಟ್ ಆಗುತ್ತದೆ. ಮುಂದೆ 10 ವರ್ಷದ ನಂತರ ಇದೇ ಇರುವುದಿಲ್ಲ. ಕಾಲ ಬದಲಾದಾಗ, ಪರಿಸ್ಥಿತಿ ಬದಲಾದಾಗ, ಪಕ್ಷ ಬದಲಾದಾಗ ಇದೇ ತರಹದ ಪರಿಸ್ಥಿತಿ ನಿಮಗೂ ಬರ ಕೂಡದು. ಆದ್ದರಿಂದ ಆ ದೃಷ್ಟಿಯಿಂದ ವಿಚಾರ ಮಾಡಿ, ಇದರಿಂದ ಏನೂ ರಾಜಕೀಯವಾಗಿ ನಿಮಗೆ ವಿಶೇಷವಾಗಿ ಲಾಭವಾಗುವುದಿಲ್ಲ, ಜನರಲ್ಲಿ ಇದು ಒಳ್ಳೆಯ ಇಂಪ್ರೆಷನ್ ಉಂಟು ಮಾಡುವುದಿಲ್ಲ. ಕೌನ್ಸಿಲ್‌ನಲ್ಲಿ ಒಂದು ರೆಸಲ್ಯೂಷನ್ ಪಾಸಾಯಿತು, ಮೋಷನ್ ಪಾಸಾಯಿತು, ನಿರ್ಣಯ ಪಾಸಾಯಿತು, 2 ಮಂತ್ರಿಗಳು ರಾಜೀನಾಮೆಯನ್ನು ಕೊಡಬೇಕೆಂದು ಹೇಳಿದರೂ ಆ ಮಂತ್ರಿಗಳು ರಾಜೀನಾಮೆ ಯನ್ನು ಕೊಡಲಿಲ್ಲ. ಮುಖ್ಯಮಂತ್ರಿಗಳು ಕೊಡಿಸಲಿಲ್ಲ. ಈ ತರಹದ ಇಂಪ್ರೆಷನ್‌ನ್ನು ಕ್ರಿಯೇಟ್ ಮಾಡಿ, ಅದರಿಂದ ಲಾಭ ಸಿಕ್ಕುತ್ತದೆಂದು ಇದ್ದರೆ ಮಾಡಿಕೊಳ್ಳಲಿ. ನಿಮ್ಮ ಸಂತೋಷ. ಆದರೆ ಅದರಿಂದ ಏನೂ ಆಗುವುದಿಲ್ಲ. ಶ್ರೀಮಾನ್ ಉಗ್ರನರಸಿಂಹಪ್ಪನವರ ಪ್ರಕರಣದಲ್ಲಾಗಲಿ, ಶ್ರೀಮತಿ ಗಂಗವ್ವನವರ ಪ್ರಕರಣದಲ್ಲಾಗಲೀ ಯಾವುದೇ ಪ್ರಭಾವವನ್ನು ಹಾಕಿದ್ದಿಲ್ಲ. ಈ ಇಬ್ಬರೂ ಮಂತ್ರಿಗಳು ಏನೂ ಮಾಡಿಲ್ಲ. ಶ್ರೀಮತಿ ಗಂಗವ್ವನವರು ಕೊಟ್ಟಂತಹ ಅಫಿಡವಿಟ್‌ನ್ನೇ ತೆಗೆದು ಕೊಳ್ಳೋಣ. ಆ ಅಫಿಡವಿಟ್‌ನ್ನು ಕ್ರಾಸ್ ಎಕ್ಸಾಮಿನ್ ಮಾಡುವವರೆಗೂ ಅದರಲ್ಲಿ ಏನೇನೂ ಕಿಮ್ಮತ್ತು ಇಲ್ಲ. ಕಾಯಿದೆಯ ಪ್ರಕಾರ. ಅಥವಾ ಅದನ್ನೇ ತೆಗೆದುಕೊಳ್ಳೋಣ. ಅದರಲ್ಲಿರತಕ್ಕಂತಹ ಪ್ರತಿಯೊಂದು ಶಬ್ದವನ್ನೂ ಸತ್ಯ ಅಂತ ಎಂದು ನಾವು ತೆಗೆದುಕೊಳ್ಳೋಣ. ಅದರಲ್ಲಿ ಒಂದೇ ಒಂದು ಸಲ ಶ್ರೀಮಾನ್ ರಘುಪತಿಯವರ ಹೆಸರು ಇದೆ. ಅವರಲ್ಲಿ ಏನು "ಯಾರೋ ಒಬ್ಬರು ಹೇಳಿದರು, ರಘುಪತಿ ಅಂತ ಅಲ್ಲಿ ಕೂತಿದ್ದಾರೆ" ಅದು ಒಂದು ಇದು ಒಂದು ಆರೋಪವಾಯಿತೆ? ಅಥವಾ ಆಪಾದನೆಯಾಯಿತೇ? ಇಲ್ಲ. ಶ್ರೀಮಾನ್ ರೇವಣ್ಣನವರ ಹೆಸರು 7 ಸಲ ಬಂದಿದೆ. 7ನೇ ಸಲ ನಮೂದು ಆದಾಗ, ಏನು ಹೇಳಿದರು? ಇಲ್ಲಿರುವುದು ಬೇಡ ನನ್ನನ್ನು ತುಮಕೂರಿಗೆ ಕಳುಹಿಸಿಕೊಡಿ ಅಂತ. ಆವಾಗ ಅವರನ್ನು ತುಮಕೂರಿಗೆ ಕಳುಹಿಸಿಕೊಟ್ಟರು. ಅದಕ್ಕಿಂತ ಮೊದಲು ಶ್ರೀಮಾನ್ ರೇವಣ್ಣನವರ ಮನೆಯಲ್ಲಿ ಈ ಮಹಿಳೆ ಇದ್ದ ಬಗ್ಗೆ ಮತ್ತು ಅವರ ಮನೆಯಿಂದ ಟೆಲಿಫೋನ್ ಮಾಡಿ, ಆಕೆಯ ಗಂಡನ ಜೊತೆಯಲ್ಲಿ ಮಾತನಾಡುವುದಕ್ಕೆ ಕೊಟ್ಟಿದ್ದರ ಬಗ್ಗೆ ಇದೆಯೇ ಹೊರತು, ಅವರ ಜೊತೆಯಲ್ಲಿ ಅನಾಗರೀಕತೆಯಿಂದ ನಡೆದುಕೊಂಡದ್ದಾಗಲೀ, ಅಥವಾ ಅವರಿಗೆ ಅಪಮಾನ ಮಾಡುವ ರೀತಿಯಲ್ಲಿ ವರ್ತಿಸಿಲ್ಲ. ಅಥವಾ ಅವರಿಗೆ ಬೇರೆ ಹೊರಗೆ ಹೋಗುವುದಕ್ಕೆ ಅಡ್ಡಿಯಾಗಲೀ ಅಥವಾ ಬಲಾತ್ಕಾರದಿಂದ ಕೂರಿಸತಕ್ಕಂತಹ ಯಾವುದೇ ರೀತಿ ಇರಬಹುದು. ಆ ತರಹ ಒಂದು ಅಕ್ಷರ ಅದರಲ್ಲಿಲ್ಲ. ಅಷ್ಟೇ ಅಲ್ಲ ನೋಡಿದರೆ ಶ್ರೀಮಾನ್ ರೇವಣ್ಣನವರು ತನಗೆ ಸಹಾಯ ಮಾಡಿದ್ದಾರೆ ಎನ್ನತಕ್ಕಂತಹ ಅರ್ಥ ದಲ್ಲೇ ಬರುತ್ತದೇ ಹೊರತು ತೊಂದರೆ ಕೊಟ್ಟಿದ್ದಾರೆ ಎನ್ನತಕ್ಕಂತಹ ಒಂದು ಶಬ್ದ ಇಲ್ಲ. ಅಂತಹ ಒಂದು ಮಾರಲ್ ಟರ್ಪಿಟ್ಯೂಟ್ ನಮ್ಮ ಪಕ್ಷದ ಯಾರೇ ಮಂತ್ರಿಗಳ ಮೇಲೆ ಅದರ ಒಂದ ಛಾಯೇ ಅಥವಾ ನೆರಳು ಕೂಡಾ ಇದ್ದರೆ ಆ ಮಂತ್ರಿಗಳಿಗೆ ನಾನೇ ಹೇಳುತ್ತಿದ್ದೆ. ದಯಮಾಡಿ ರಾಜೀನಾಮೆ ಕೊಡಿ. ಕ್ಲಿಯರ್ ಆದ ಮೇಲೆ ವಾಪಸ್ಸು ಬರಬಹುದು ಅಂತ. ಆದ್ದರಿಂದ ಇಲ್ಲಿ ರಾಜೀನಾಮೆ ಕೊಡತಕ್ಕ ಅಗತ್ಯ ಇಲ್ಲ. ಅವರ ಮೇಲೆ ಕರಪ್‌ಶನ್ ಚಾರ್ಜಸ್ ಇದೆಯೇ? ಕಿಡ್ನಾಪ್ ಚಾರ್ಜಸ್ ಇದೆಯೇ? ಬೇರೆ ಯಾವುದೇ ರೀತಿಯ ಅನೈತಿಕ ಚಾರ್ಜಸ್ ಇದೆಯೇ? ಇಲ್ಲ. ಆದ್ದರಿಂದ ಅದರ ಅಗತ್ಯ ಇಲ್ಲ.

ಅನಂತರ ಪಡಿತರ ವ್ಯವಸ್ಥೆಯನ್ನು ಗ್ರಾಮಾಂತರ ಪ್ರದೇಶಗಳಲ್ಲೂ ಕಟ್ಟುನಿಟ್ಟಾಗಿ ಜಾರಿಗೆ ತರ ಬೇಕೆಂದು ಶ್ರೀಮಾನ್ ಕೃಷ್ಣನ್‌ರವರು ಹೇಳಿದರು. ಇದು ಬಹಳ ಕಷ್ಟಕರವಾದ ವಿಚಾರ. ಇಲ್ಲಿಯ ವರೆಗೂ ಯಾವ ರಾಜ್ಯದಲ್ಲೂ ಆಗಿಲ್ಲ. ಕೇರಳದಲ್ಲಿ ಮಾತ್ರ ಅದರ ಬಗ್ಗೆ ಮಾಡಿದ್ದಾರೆ. ಕೇರಳದಲ್ಲಿ ಒಂದು ಅಡ್ವಾಂಟೇಜ್ ಏನು ಇದೆ ಎಂದರೆ, ಎರಡು ಸಾವಿರ ಜನಸಂಖ್ಯೆ ಇರುವ ಕೆಲವು ಭಾಗಗಳನ್ನು ಬಿಟ್ಟರೆ ಇಡೀ ರಾಜ್ಯದಲ್ಲಿ ಒಂದು ತುದಿಯಿಂದ ಮತ್ತೊಂದು ತುದಿಯವರೆಗೂ ನೋಡುವುದಾದರೆ, ಒಂದು ಹಳ್ಳಿ ಮುಗಿಯುತ್ತಿದ್ದ ಹಾಗೆ ಮತ್ತೊಂದು ಹಳ್ಳಿ ಪ್ರಾರಂಭವಾಗುತ್ತದೆ. ಗಡಿ ಅಂತ ಇರ ತಕ್ಕಂತಹದ್ದೇ ಇಲ್ಲ. ಆದ್ದರಿಂದ ಸ್ಟ್ಯಾಟ್ಯುಟರಿ ರೇಷನಿಂಗ್ ಅನ್ನು ಅಲ್ಲಿ ತರತಕ್ಕಂತಹದ್ದು ಕಷ್ಟ ವಾಗುವುದಿಲ್ಲ. ಈಗಾಗಲೇ ಅಲ್ಲಿ ಅದನ್ನು ಜಾರಿಗೆ ತಂದಿದ್ದಾರೆ. ಅದರ ಹೊರತಾಗಿ ಈ ವ್ಯವಸ್ಥೆ ಬೇರೆ ಯಾವ ರಾಜ್ಯದಲ್ಲೂ ಇಲ್ಲ. ಆದರೆ ಹಳ್ಳಿಗಾಡಿನ ಪ್ರದೇಶದಲ್ಲಿರತಕ್ಕ ಅದರಲ್ಲೂ ದುರ್ಬಲ ವರ್ಗದವರಿಗೆ ಕೆಲವೊಂದು ಅನುಕೂಲತೆಯನ್ನು ಮಾಡಿಕೊಡಬೇಕೆಂದಿದ್ದೇವೆ. ಉದಾಹರಣೆಗಾಗಿ ಹೇಳುವುದಾದರೆ, ದೊಡ್ಡ ದೊಡ್ಡ ಯೋಜನೆಗಳು ನಡೆಯುತ್ತಿರುವ ಕಡೆ, ಅಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ಕೆಲಸ ಮಾಡುತ್ತಾರೆ. ಅಂತಹ ಕಡೆಗಳಲ್ಲಿ ಕಡಿಮೆ ದರದಿಂದ ಆಹಾರ ಪದಾರ್ಥಗಳನ್ನು ಒದಗಿಸತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದಿದ್ದೇವೆ. ಈ ರೀತಿ ಸ್ವಲ್ಪ ಮಟ್ಟಿಗೆ ಸುಧಾರಣೆ ಮಾಡ ಬಹುದೇ ಹೊರತು ಸಂಪೂರ್ಣವಾಗಿ ಎಲ್ಲ ಕಡೆ ಸ್ಟ್ಯಾಟ್ಯುಟರಿ ರೇಷನಿಂಗ್ ತರುತ್ತೇವೆ ಅಂತ ಹೇಳು ವುದು ಕಷ್ಟವಾಗುತ್ತದೆ. ಮತ್ತೆ ಅದಕ್ಕೆ ಬೇಕಾಗುವಷ್ಟು ಧಾನ್ಯದ ಸಂಗ್ರಹ ಇರಬೇಕು. ಧಾನ್ಯದ

ಸಂಗ್ರಹದ ಜೊತೆಗೆ ಕೇಂದ್ರ ಸರ್ಕಾರದವರು ನಮ್ಮ ಬಗ್ಗೆ ಸಹಾನುಭೂತಿಯಿಂದ ನಾವು ಕೇಳಿದಷ್ಟು ಆಹಾರ ಪದಾರ್ಥಗಳನ್ನು ಕೊಟ್ಟರೆ ಅದು ಬರುತ್ತದೆ. ಈಗ ಕೇರಳದ ವಿಚಾರ ಹೇಳುತ್ತೇನೆ ಅಲ್ಲಿ ರೇಷನಿಂಗ್ ಇದೆ. ಅವರಿಗೆ ಪ್ರತಿ ತಿಂಗಳು ಒಂದು ಲಕ್ಷದ 25 ಸಾವಿರ ಟನ್ ಅಕ್ಕಿ ಕೇಂದ್ರದಿಂದ ಹೋಗುತ್ತದೆ. ನಮಗೆ 15 ಸಾವಿರ ಟನ್ ಮಾತ್ರ ಬರುತ್ತಿತ್ತು. ಈಗ್ಗೆ 3–4 ತಿಂಗಳುಗಳಿಂದ ಮಾತ್ರ 20 ಸಾವಿರ ಟನ್ ಬರುತ್ತಿದೆ. ಕೇರಳದ ಜನಸಂಖ್ಯೆ ಎಷ್ಟು, ನಮ್ಮ ಜನಸಂಖ್ಯೆ ಎಷ್ಟು ಎಂಬುದನ್ನು ನಾವು ಯೋಚನೆ ಮಾಡಬೇಕು. ನಾವು 4 ಸಾರಿ ಭೇಟಿ ಆದಮೇಲೆ ಕೊಟ್ಟಿದ್ದಾರೆ. ಹಿಂದಿನ ಸರ್ಕಾರದವರು 1982ರಲ್ಲಿ ಕೇವಲ 13 ಸಾವಿರ ಟನ್ ಮಾತ್ರ ಅಕ್ಕಿಯನ್ನು ಪ್ರೊಕ್ಯೂರ್ ಮಾಡಿರುವುದರಿಂದಲೂ ನಮಗೆ ಕಷ್ಟವಾಗಿದೆ ಎಂದು ಹೇಳಬಯಸುತ್ತೇನೆ. ಹೋಟೆಲುಗಳಲ್ಲಿ ತಿಂಡಿಯ ದರವನ್ನು ಹೆಚ್ಚು ಮಾಡುತ್ತಾ ಹೋಗುತ್ತಿದ್ದಾರೆಂದು ಕೃಷ್ಣನ್‌ರವರು ಹೇಳಿದರು, ಅಲ್ಲದೆ ಅದಕ್ಕೆ ಒಂದು ಕಮಿಟಿ ಕೂಡ ಮಾಡಿ ಎಂದು ಹೇಳಿದರು. ನಾನು ಈ ವಿಚಾರವನ್ನು ಆಹಾರ ಮಂತ್ರಿಗಳಿಗೆ ಹೇಳಿದ್ದೇನೆ. ಇವತ್ತು ಹೋಟೆಲ್ ಮಾಲೀಕರ ಸಂಘ ಏನಿದೆ ಅವರ ಪ್ರತಿನಿಧಿಗಳನ್ನು ಕರೆಸಿ ಮಾತನಾಡಿ ಎಂದು ಸಹ ಹೇಳಿದ್ದೇನೆ. ಎಲ್ಲ ವಸ್ತುಗಳ ಬೆಲೆ ಹೆಚ್ಚಾಗುತ್ತಿದೆ ಎಂದು ಹೇಳಿ ಬೆಲೆ ಕಡಿಮೆ ಆಗಬೇಕು ಮತ್ತು ಕ್ವಾಂಟಿಟಿ ಕಡಿಮೆ ಆಗಬಾರದೆಂದು ಹೇಳುವುದು ನ್ಯಾಯವಲ್ಲ. ಅವರೊಡನೆ ಮಾತುಕತೆ ಆಡಿ ಒಂದು ತೀರ್ಮಾನಕ್ಕೆ ಬಂದರೆ ಸಂತೋಷ. ಅದು ಸಾಧ್ಯವಾಗದಿದ್ದರೆ ಕಮಿಟಿ ಮಾಡುವ ಪ್ರಸಂಗ ಬಂದರೆ, ಕಮಿಟಿ ಮಾಡುತ್ತೇವೆಂದು ಹೇಳಬಯಸುತ್ತೇನೆ. ಐ.ಆರ್.ಡಿ.ಪಿ. ವಿಚಾರದಲ್ಲಿ ಸರಿಯಾಗಿ ಬೆನಿಫಿಷರ್ಸ್‌ಗೆ ಅನುಕೂಲ ಆಗುತ್ತದೋ ಇಲ್ಲವೋ ಎಂಬ ವಿಚಾರವನ್ನು ಶರಣಪ್ಪನವರು ಹೇಳಿದರು. ಅವರ ಮಾತಿನಲ್ಲಿ ಅರ್ಥವಿಲ್ಲದೆ ಇಲ್ಲ. ಅನೇಕಲ್ಲಿನಲ್ಲಿ ಹೋದ ವರ್ಷ ಹರಿಜನರ ಹೆಸರಿನಲ್ಲಿ ಆದ ಘಟನೆ, ಬಗ್ಗೆ ದೇವೇಗೌಡರು ಹೋಗಿ ನೋಡಿದಾಗ ಯಾರ ಮನೆಯಲ್ಲಿ ಹಸು-ಎಮ್ಮೆಗಳು ಇರಬೇಕಾಗಿತ್ತೋ ಅವರ ಮನೆಯಲ್ಲಿ ಇರಲಿಲ್ಲ.

ಒಬ್ಬ ಸದಸ್ಯರು.— ಅವರು ಕೇಳಿರುವುದು ಎನ್. ಆರ್. ಇ. ಪಿ. ಬಗ್ಗೆ

ಶ್ರೀ ರಾಮಕೃಷ್ಣ ಹೆಗಡೆ.— ಅದೇ ರೀತಿ ಎನ್. ಆರ್. ಇ. ಪಿ. ಯಲ್ಲಿ ಕೂಡ ಯಾರಿಗೆ ನೌಕರಿ ಕೊಡುತ್ತಾರೆ ಅವರಿಗೆ ಸರಿಯಾಗಿ ಸಂಬಳ ಹೋಗುತ್ತದೋ ಇಲ್ಲವೋ ಅಥವಾ ಸುಳ್ಳು ಸಂಬಳ ಪಡೆಯುತ್ತಾರೆಯೇ ಎಂಬ ಬಗ್ಗೆ ಆಗಾಗ್ಗೆ ಚೆಕ್ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಮತ್ತು ವಿಶೇಷ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ. ಅದು ಸುಧಾರಿಸಬಹುದೆಂದು ಆಶಿಸಿದ್ದೇವೆ. ಅದೇ ರೀತಿ, ಶಿಕ್ಷಕರ ವಿಚಾರದಲ್ಲಿ ಕೃಷ್ಣನ್‌ರವರು ಹೇಳಿದರು. ನಿನ್ನೆ ನಮ್ಮ ಸಚಿವ ಸಂಪುಟದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ ಇದರ ಬಗ್ಗೆ ಬಹುಶಃ ಇನ್ನು 3–4 ದಿನಗಳಲ್ಲಿ ಒಂದು ನಿರ್ಣಯ ತೆಗೆದುಕೊಳ್ಳುತ್ತೇವೆ. ಮುನಿಸಿಪಾಲಿಟಿಗಳಿಗೆ ಹಣ ಇಲ್ಲವೆಂದು ಪಂಪಾಪತಿಯವರು ಹೇಳಿದರು. ಈ ವಿಚಾರವನ್ನು ಅವರು ಬಹಳ ದಿನಗಳಿಂದ ಹೇಳುತ್ತಿದ್ದಾರೆ. ನಗರದಲ್ಲಿರತಕ್ಕ ಜನರಿಗೆ ಒಂದಲ್ಲ ಒಂದು ರೀತಿಯ ಸೌಲಭ್ಯ ಇರುತ್ತದೆ. ಲ್ಯಾಂಡ್‌ಲೆಸ್ ಲೇಬರರ್ಸ್ ಏನು ಇರುತ್ತಾರೆ ಅವರ ಹೆಣ್ಣುಮಕ್ಕಳಿಗೆ ಹೆರಿಗೆ ಸಮಯದಲ್ಲಿ ಅನುಕೂಲ ಇಲ್ಲವೆಂದು ಹೇಳಿದ್ದಾರೆ. ಇದು ಬಹಳ ವ್ಯಾಪಕವಾದ ಸಮಸ್ಯೆ. ಲ್ಯಾಂಡ್‌ಲೆಸ್ ಲೇಬರ್ಸ್‌ಗೆ ಸಂಬಂಧಪಟ್ಟಂತೆ ಒಂದು ಕಾಯಿದೆಯನ್ನು ತರುವ ಆಲೋಚನೆಯಲ್ಲಿದ್ದೇವೆ ಕೇರಳದಲ್ಲಿ ಇಂಥ ಒಂದು ಕಾಯಿದೆ ಇದೆ. ಕೇರಳದಲ್ಲಿರತಕ್ಕ ಕಾಯಿದೆಗಿಂತ ಉತ್ತಮವಾದ ಕಾಯಿದೆಯನ್ನು ಈ ಅಧಿವೇಶನದಲ್ಲಿ ತರಬೇಕೆಂದಿದ್ದೇವೆ. ಮುನಿಸಿಪಾಲಿಟಿಗಳಿಗೆ ಹಣ ಸಾಲದು ಎಂಬುದನ್ನು ಒಪ್ಪುತ್ತೇನೆ ಆಕ್ಟ್ರಾಯಿನಿಂದ ಬರತಕ್ಕ ಆದಾಯ ಹೊರಟುಹೋಯಿತು. ಅದಕ್ಕೆ ಪ್ರತಿಯಾಗಿ ಯಾಪ ಕರವನ್ನು ಹಾಕಿದ್ದೇವೆ ಅದರಲ್ಲಿ ಸಂಪೂರ್ಣವಾಗಿ ಅವರಿಗೆ ಹೋಗಿಲ್ಲ ಇದಕ್ಕೆ ಕಾರಣಗಳನ್ನು ಬೇಕಾದಷ್ಟು ಹೇಳಬಹುದು. ಇಲ್ಲಿ ಒಂದು ಮಾತನ್ನು ಒಪ್ಪಿಕೊಳ್ಳಬೇಕಾಗಿದೆ. ಅವರಿಗೆ ಏನು ಜವಾಬ್ದಾರಿ ಇದೆಯೋ ಆ ಜವಾಬ್ದಾರಿಗೆ ಅನುಗುಣವಾಗಿ ಸಾಕಷ್ಟು ಸಂಪನ್ಮೂಲಗಳು ಅವರಲ್ಲಿ ಇಲ್ಲ. ಅದಕ್ಕಾಗಿ ಲೋಕಲ್ ಬಾಡೀಸ್ ಮತ್ತು ಫೈನಾಷಿಯಲ್ ಕಮೀಷನ್ ಅನ್ನು ನಾವು ನೇಮಕ ಮಾಡಿದ್ದೇವೆ ಈ ಒಂದು ವ್ಯವಸ್ಥೆಯನ್ನು ಇಡೀ ದೇಶದಲ್ಲಿ ನಾವೇ ಪ್ರಥಮ ಬಾರಿಗೆ ಮಾಡಿರತಕ್ಕವರು; ಬೇರೆ ಯಾವ ರಾಜ್ಯಗಳಲ್ಲಿಯೂ ಮಾಡಿಲ್ಲ. ಇದು ಸರ್ಕಾರದ ಒಂದು ನೈತಿಕ ಜವಾಬ್ದಾರಿ. ರಾಜ್ಯ ಸರ್ಕಾರದವರಾದ ನಾವು ಕೇಂದ್ರ ಸರ್ಕಾರದವರ ಹತ್ತಿರ ನಮಗೆ ಜವಾಬ್ದಾರಿ ಇಟ್ಟಿದೆ, ಆದರೆ ಸಂಪನ್ಮೂಲಗಳು ಕಡಿಮೆ ಇವೆ, ಅವನ್ನು ಹೆಚ್ಚು ಮಾಡಬೇಕು. ಅದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಂಬಂಧದ ಬಗ್ಗೆ ಚರ್ಚೆ ಆಗಬೇಕು ಮತ್ತು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಸಾಕಷ್ಟು ಸಂಪನ್ಮೂಲಗಳನ್ನು ಕೊಡದೇ ಇದ್ದರೆ ಅವರನ್ನು ನಾವು ಕೇಳತಕ್ಕ ಹಕ್ಕು ಇರುವುದಿಲ್ಲವೆಂದು ಹೇಳುತ್ತಿದ್ದೇವೆ. ಅದಕ್ಕಾಗಿ ರಚನೆಯಾಗಿರತಕ್ಕ ಸಮಿತಿಯವರು ಆದಷ್ಟು ಜಾಗ್ರತೆ ಒಂದು ಶಿಫಾರಸ್ಸನ್ನು ಮಾಡುತ್ತಾರೆಂದು ಅಂದುಕೊಂಡಿದ್ದೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.— ಆ ಸಮಿತಿ ಸೇರುತ್ತಿದೆಯೆ ?

ಶ್ರೀ ರಾಮಕೃಷ್ಣ ಹೆಗಡೆ.— ಸೇರುತ್ತಿದೆ; ಮತ್ತು ತಾತ್ಕಾಲಿಕವಾದ ವರದಿಯನ್ನು ಕೊಡಬಹು

ದೆಂದು ಆಸೆ ಮಾಡಿದ್ದೇವೆ, ಡಾ॥ ಆಚಾರ್ಯ ಮತ್ತು ಪಂಪಾಪತಿಯವರು ಪ್ರೊಕ್ಯೂರ್‌ಮೆಂಟ್ ಬಗ್ಗೆ ಹೇಳಿದರು. ಈಗ 160 ರೂಪಾಯಿ ಬೆಂಬಲ ಬೆಲೆ ಏನಿದೆ ಆ ದರಕ್ಕೆ ರೈತರು ಯಾವುದೇ ಜಿಲ್ಲೆಯಲ್ಲಿ ಎಷ್ಟೇ ಪ್ರಮಾಣದಲ್ಲಿ ಭತ್ತವನ್ನು ಮಾರಾಟ ಮಾಡಿದರೂ ಸರ್ಕಾರ ಕೊಳ್ಳಲಿಕ್ಕೆ ಸಿದ್ಧವಿದೆ ಎಂದು ಹೇಳುತ್ತೇನೆ. ನಮ್ಮ ತಾಲ್ಲೂಕು ಮಾರ್ಕೆಟ್‌ನಿಂದ ಸೊಸೈಟಿಗಳ ಮೂಲಕ ಭತ್ತವನ್ನು ಕೊಳ್ಳಲು ವ್ಯವಸ್ಥೆ ಮಾಡಿದ್ದೇವೆ. ಅದೇ ರೀತಿ, ಹತ್ತಿ ವಿಚಾರದಲ್ಲಿ ಕೂಡ ವ್ಯವಸ್ಥೆ ಮಾಡಿದ್ದೇವೆ. ನಿನ್ನೆ ನ್ಯಾಷನಲ್ ಕಾಟನ್ ಕಾರ್ಪೊರೇಷನ್‌ನ ಅಧ್ಯಕ್ಷರು ಬಂದಿದ್ದರು; ಅವರೊಡನೆ ವಿಚಾರವನ್ನು ಚರ್ಚೆ ಮಾಡಿದ್ದೇನೆ. ಪುನಃ ಅವರು ತಮ್ಮ ಕಾರ್ಯವನ್ನು ಪ್ರಾರಂಭ ಮಾಡಿದ್ದಾರೆ. ಅಲ್ಲಿ ಮತ್ತೊಂದು ಉಪಾಯವನ್ನು ಯೋಚನೆ ಮಾಡಿದ್ದೇವೆ, ಅವರು ಕೊಡತಕ್ಕ ದರ ಇವರಿಗೆ ಸರಿಯಾಗಿಲ್ಲವೆಂದು ಮನವರಿಕೆಯಾದರೆ ಹತ್ತಿಯನ್ನು ಅಡವು ಇಟ್ಟು ಅದರ ಮೇಲೆ ಸಾಲ ತೆಗೆದುಕೊಂಡು ಉತ್ತಮ ದರ ಬಂದಾಗ ಮಾರಾಟ ಮಾಡಬಹುದು. ಆಂಧ್ರದಿಂದ, ತಮಿಳ್ನಾಡಿನಿಂದ ಹತ್ತಿ ಬರುವುದಕ್ಕೆ ಪ್ರಾರಂಭ ವಾದಾಗ ಮಾರುಕಟ್ಟೆಯಲ್ಲಿ ದರ ಕಡಿಮೆಯಾಗುತ್ತದೆ. ಅದಕ್ಕೆ ಪರ್ಯಾಯ ವ್ಯವಸ್ಥೆ ಮಾಡುವ ವಿಚಾರವನ್ನು ಹೇಳಿದ್ದೇನೆ. ಯಾವ ರೈತರು ಈಗಲೇ ಮಾರಾಟ ಮಾಡುವುದಕ್ಕೆ ಸಿದ್ಧರಿರುವುದಿಲ್ಲವೋ ಅಥವಾ ದರ ಕಡಿಮೆ ಇದೆ ಎಂಬ ಅಭಿಪ್ರಾಯ ಇದೆಯೋ ಅಂಥವರು ಹತ್ತಿಯನ್ನು ಅಡವು ಇಟ್ಟು ಅದರ ಮೇಲೆ ಸಾಲ ತೆಗೆದುಕೊಳ್ಳಬಹುದು. ಆ ಒಂದು ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದೇನೆ. ಡಾ॥ ಆಚಾರ್ಯ ಅವರು ಮೂಲ ಗೇಣಿದಾರರ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದೂ ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ. ಡಾ॥ ಆಚಾರ್ಯ ಅವರು ಕೇಳುವುದು ಸ್ವಾಭಾವಿಕ; ಅದರಲ್ಲಿ ಯಾವುದೇ ತಪ್ಪು ಇದೆ ಎಂದು ಹೇಳುವುದಿಲ್ಲ. ಇನ್ನು ಹೌಸಿಂಗ್ ವಿಚಾರದಲ್ಲಿ ಹೆಚ್ಚು ಹೇಳಬಯಸುವುದಿಲ್ಲ. ಆದರೆ 1980-81, 81-82, 82-83ರ ಮಾಹಿತಿಯನ್ನು ಮಾತ್ರ ಈ ಮನೆಯ ಮುಂದಿಡುತ್ತೇನೆ. 1981-82, 82-83ರಲ್ಲಿ ಮುಖ್ಯವಾಗಿ ಇಂದಿನ ವಿರೋಧ ಪಕ್ಷದ ನಾಯಕರು ಅರ್ಥ ಮಂತ್ರಿಗಳಾಗಿದ್ದರು. ಆಗ ಅವರು ಅರ್ಧಂಬರ್ಧ ಮಾಡಿದ್ದ ಕೆಲಸಗಳನ್ನು ಕಳೆದ ವರ್ಷ ಮಳೆಗಾಲ ಪೂರೈಸುವುದರೊಳಗಾಗಿ ಪೂರ್ತಿ ಮಾಡಬೇಕಾದರೆ ಸಾಕಾಯಿತು. ಹೊಸದಾಗಿ ಮಾಡಬೇಕಾದುದು ನಿಜ. ಬೇರೆಬೇರೆ ಮತದಾರರ ಕ್ಷೇತ್ರದಿಂದ ಸದಸ್ಯರು ಆರಿಸಿ ಬಂದಿದ್ದಾರೆ; ಅಲ್ಲಿ ಸಾಕಷ್ಟು ಬೇಡಿಕೆಗಳು ಇವೆ. ಆದರೆ ದುಡ್ಡನ್ನು ಎಲ್ಲಿಂದ ತರುವುದು ಎಂಬುದು ಸಮಸ್ಯೆಯಾಗಿದೆ. ಹಿಂದಿನ ಸರ್ಕಾರ ಅರ್ಧಂಬರ್ಧ ಮಾಡಿದ್ದನ್ನು ಬಿಡುವುದು ಯೋಗ್ಯವಲ್ಲ. ಅವರು ನೆಲಗಟ್ಟು ಮಾತ್ರ ಹಾಕಿ ಮುಂದಕ್ಕೆ ಏನೂ ಮಾಡದೆ ಬಿಟ್ಟಿರುವುದನ್ನು ಪೂರ್ಣ ಮಾಡದೆ ಹಾಗೇ ಇಡುವುದು ಸರಿಯಾಗಿ ಕಾಣುವುದಿಲ್ಲ. ಅದಕ್ಕಾಗಿ ಅದು ಮುಗಿಸಬೇಕು. ಜೊತೆಗೆ ಹೊಸದನ್ನೂ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರಾದ ವಿ. ಎಸ್. ಆಚಾರ್ಯ ಅವರು ಪಬ್ಲಿಕ್ ಗ್ರಿವೆನ್ಸಸ್ ವಿಚಾರ ಏನಾಯಿತು ಎಂದು ಕೇಳಿದ್ದಾರೆ. ನಮಗೆ 36ಸಾವಿರ ಅರ್ಜಿಗಳು ಇಲ್ಲಿಯವರೆಗೆ ಬಂದಿದ್ದವು. ಆ ಅರ್ಜಿಗಳೆಲ್ಲಾ ನಾವು ಪರಿಹಾರ ಹುಡುಕಬೇಕಾದ ಅರ್ಜಿಗಳಲ್ಲ. ಅನೇಕ ಅರ್ಜಿಗಳು ಕೋರ್ಟಿನಲ್ಲಿ ಇರುವ ವಿಷಯಗಳಿಗೆ ಸಂಬಂಧಪಟ್ಟಂತೆ ಇರುತ್ತವೆ. ಇನ್ನು ಕೆಲವು ಅರ್ಜಿಗಳು ಲಕ್ಷ್ಮೀಸಾಗರ್ ಅವರು ಹೇಳಿದ ಹಾಗೆ ಗಂಡ ಹೆಂಡತಿ ಜಗಳದ ಬಗ್ಗೆ ಇದ್ದು ಇದನ್ನು ಹೇಗಾದದರೂ ಮಾಡಿ ಸರಿಮಾಡಿ ಎಂದು ಬರೆದಿದ್ದಾರೆ. ಮಕ್ಕಳಿಗೆ ಮದುವೆ ಮಾಡಬೇಕು ಧನ ಸಹಾಯ ಮಾಡಿ ಎಂದು ಬರೆದಿದ್ದಾರೆ. ಅನೇಕ ಜನರಿಗೆ ಸರ್ಕಾರದ ಹತ್ತಿರ ಹೋದರೆ ಒಂದಲ್ಲ, ಒಂದು ರೀತಿಯ ಪರಿಹಾರ ಸಿಗಬಹುದು ಎಂಬ ನಂಬಿಕೆ ಇದೆ. 36 ಸಾವಿರ ಅರ್ಜಿಗಳಲ್ಲಿ 18 ಸಾವಿರ ಅರ್ಜಿಗಳೇನಿವೆ ಅವುಗಳ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇನ್ನು 15 ಸಾವಿರ ಅರ್ಜಿಗಳ ಮೇಲೆ ಬೇರೆ ಬೇರೆ ಹಂತಗಳಲ್ಲಿ ಪರಿಶೀಲನೆ ನಡೆಯುತ್ತಿವೆ. 5500 ಅರ್ಜಿಗಳಲ್ಲಿ ಈಗಾಗಲೇ ನಾವು ಅವರು ಕೇಳಿದಂಥ ಪರಿಹಾರವನ್ನು ಕೊಟ್ಟಿದ್ದೇವೆ. ಇದು ಒಂದು ಹೊಸ ಪ್ರಯೋಗ. ಇದರಿಂದ ಜನರಿಗೆ ಬಹಳಷ್ಟು ಪ್ರಯೋಜನ ಆಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಕೊನೆಗೆ, ವಿರೋಧ ಪಕ್ಷದ ನಾಯಕರು ಟೇಪ್ ಪ್ರಕರಣದ ವಿಚಾರದಲ್ಲಿ ನ್ಯಾಯಾಂಗ ವಿಚಾರಣೆಗೆ ಸ್ವಾಗತಿಸಿ ಒಂದು ಕಂಡೀಷನ್ ಹಾಕಿದ್ದಾರೆ. ನ್ಯಾಯಾಂಗ ವಿಚಾರಣೆಯನ್ನು ಸುಪ್ರೀಂಕೋರ್ಟ್ ನ್ಯಾಯಾಧೀಶರಿಂದ ಮಾಡಿಸಬೇಕು ಎಂದು ಹೇಳಿದ್ದಾರೆ. ಅವರು ಸಿಕ್ಕರೆ ಮಾಡೋಣ. ಸಿಟಿಂಗ್ ಜಡ್ಜ್ ಸಿಗುವುದಿಲ್ಲ. ಅವರು ಆಗುವುದಿಲ್ಲ ಎಂದು ಹೇಳಬಹುದು. ರಿಟೈರ್ಡ್ ಜಡ್ಜ್ ಸಿಕ್ಕಿದರೆ ಮಾಡೋಣ. ಇಲ್ಲದಿದ್ದರೆ ರಿಟೈರ್ಡ್ ಹೈಕೋರ್ಟ್ ಮುಖ್ಯ ನ್ಯಾಯಾಧೀಶರಿಂದ ಮಾಡೋಣ ಅಥವಾ ಸಿಟಿಂಗ್ ಹೈಕೋರ್ಟ್ ಜಡ್ಜ್ ಅವರಿಂದ ನ್ಯಾಯಾಂಗ ತನಿಖೆ ಮಾಡೋಣ. ಕೊನೆಗೆ ಅವರು ಯಾವ ಕಾರಣದಿಂದ ಉದ್ರೇಕಗೊಂಡರೋ ಗೊತ್ತಾಗಿಲ್ಲ. ಮೂರು ಕೋಟಿ ರೂಪಾಯಿ ಬಂದಿದೆ ....

ಶ್ರೀ ಎಂ. ವೀರಪ್ಪ ಮೊಯಿಲಿ.— ಹೇಳಿದ್ದೀರಲ್ಲ ಅದನ್ನೆಲ್ಲಾ.

ಶ್ರೀ ರಾಮಕೃಷ್ಣ ಹೆಗಡೆ.—ಹೇಳುವುದಾಗಿದ್ದರೆ ಬಹಳ ಹೇಳಬಹುದಾಗಿತ್ತು. ನಾನು ಉದ್ದೇಶಪೂರ್ವಕವಾಗಿ ರಾಜಕೀಯವನ್ನು ಬೆರಸುವುದಕ್ಕೆ ಹೋಗಲಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ತಮ್ಮ ಭಾಷಣ ಪೂರ್ತಿ ರಾಜಕೀಯವೇ ಹೊರತು ಬೇರೇನೂ

ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಈ ಸದನದ ಸಮಯವನ್ನು ರಾಜಕೀಯ ಚರ್ಚೆ ಮಾಡಿ ಕಳೆಯ ತಕ್ಕದ್ದು ಒಳ್ಳೆಯದಲ್ಲ ಎಂದು ಬಿಟ್ಟಿದ್ದೇನೆ. ಹೇಳುವುದಿದ್ದರೆ ಬೇಕಾದಷ್ಟು ಹೇಳಬಹುದಾಗಿತ್ತು. ಸರ್ಕಾರವನ್ನು ಉರುಳಿಸುವುದಕ್ಕೆ ಮಾಡಿದ ಪ್ರಯತ್ನಗಳ ಬಗ್ಗೆ ಹೇಳುವುದಕ್ಕಾಗುತ್ತಿರಲಿಲ್ಲವೆ ? ನಾನು ಸೂಚ್ಯವಾಗಿ ಹೇಳಿದೆ, ಇಬ್ಬರೂ ಸೇರಿ ಕೆಲಸ ಮಾಡೋಣ ಎಂದು. ನೀವೇ ಹೇಳುತ್ತಿದ್ದಿರಿ, ನಾವು ಬೀಳಿಸಬೇಕಾಗಿಲ್ಲ, ಪಾಪದ ಭಾರದಿಂದ ಅದೇ ಬಿದ್ದು ಹೋಗುತ್ತದೆ ಎಂದು. ಪಾಪದ ಹೊರೆಯಿಂದ ಬಿದ್ದು ಹೋಗುವ ಹಾಗಿದ್ದರೆ ಬಿದ್ದು ಹೋಗಲಿ. ಅಲ್ಲಿಯವರೆಗಾದರೂ ಕಾಯಿರಿ. ಅದೂ ಕೂಡ ತಮಗೆ un-ತಡೆಯಬಲ್ ಆಗಿದೆ.

ಅಧ್ಯಕ್ಷರು.—ಆ ಪದ ಯಾವ ಭಾಷೆಯದು ?

ಶ್ರೀ ರಾಮಕೃಷ್ಣ ಹೆಗಡೆ.—ಹೊಸಗನ್ನಡ. ಪಂಜಾಬ್ ಕಾಂಗ್ರೆಸ (ಐ)ಅಧ್ಯಕ್ಷರಾದ ಶ್ರೀ ಆರ್. ಎಲ್. ಭಾಟಿಯಾ ಅವರು ನಾಲ್ಕೈದು ಸಲ ಇಲ್ಲಿಗೆ ಬಂದಿದ್ದರು. ಏತಕ್ಕೆ ಬಂದಿದ್ದರು ? ಶ್ರೀಮತಿ ಶಾಲಿನಿ ತಾಯಿ ಪಾಟೀಲ್ ಅವರು ಏತಕ್ಕೆ ಬಂದಿದ್ದರು ಹೇಳಲಿ. ಅವರು ಹೇಳಿದ್ದಕ್ಕಾಗಿ ನಾನು ಇದ ನ್ನೆಲ್ಲಾ ಹೇಳುತ್ತಿದ್ದೇನೆ. ಆ ಪಕ್ಷದ ಅಧ್ಯಕ್ಷರು ಹೇಳಿದ್ದಾರೆಂದರೆ ದಮ್ಮಿನ ನಿವಾರಣೆಗಾಗಿ ಅವರು ಇಲ್ಲಿ ಬಂದಿದ್ದರು ಎಂದು ಹೇಳಿದ್ದಾರೆ. ತುಂಬಾ ಸಂತೋಷ. ಮಹಾರಾಷ್ಟ್ರದ ಮುಖ್ಯ ಮಂತ್ರಿಗಳ ಪತ್ನಿ ಯವರು ಬಂದರೆ ಸಂತೋಷ. ಅಲ್ಲಿನ ಮುಖ್ಯ ಮಂತ್ರಿಗಳು ನನ್ನ ಸ್ನೇಹಿತರು. ಅವರ ಪತ್ನಿಯವರು ಇಲ್ಲಿಗೆ ಬಂದರೆ ಅವರನ್ನು ರಾಜ್ಯದ ಅತಿಥಿಗಳನ್ನಾಗಿ ಟ್ರೀಟ್ ಮಾಡುತ್ತೇವೆ. ಮೊದಲನೆ ಸಲ ಅವರು ಬಂದಾಗ ನನಗೆ ತಿಳಿಸಿದ್ದರು. ನನ್ನನ್ನು ಭೇಟಿಯಾಗಿದ್ದರು. ಅದಾದ ಮೇಲೆ ಇಲ್ಲಿಗೆ ಅನೇಕ ಸಾರಿ ಇಲ್ಲಿ ಬಂದರು. ಆದರೆ ಸರ್ಕಾರಕ್ಕೆ ಸೂಚನೆ ಬರಲಿಲ್ಲ. ಹಿಂದೆ ಅವರು ಮಂತ್ರಿಗಳಾಗಿದ್ದವರು, ಪಾರ್ಲಿ ಮೆಂಟ್ ಸದಸ್ಯರಾಗಿದ್ದಾರೆ. ಅಷ್ಟೇ ಅಲ್ಲ ಮುಖ್ಯ ಮಂತ್ರಿಗಳ ಪತ್ನಿಯವರು. ಆದ್ದರಿಂದ ನಾವು ಅವರು ಬಂದರೆ ಅವರನ್ನು ಸ್ಟೇಟ್ ಗೆಸ್ಟ್ ಎಂದು ಟ್ರೀಟ್ ಮಾಡುತ್ತೇವೆ. ಅವರು ಹೇಳಿ ಬಂದರೆ ಯಾರನ್ನೂ ಭೇಟಿಯಾಗಬಾರದು ಎಂದು ಬಂದೀಖಾನೆಯಲ್ಲಿ ಇಡುವುದಿಲ್ಲ. ಅನೇಕ ಜನ ಕೇಂದ್ರ ಸರ್ಕಾರದ ಮಂತ್ರಿಗಳು ಇಲ್ಲಿಗೆ ಬರುತ್ತಾರೆ. ನಾವು ಅವರನ್ನು ಸ್ಟೇಟ್ ಗೆಸ್ಟ್ ಎಂದು ಟ್ರೀಟ್ ಮಾಡು ತ್ತೇವೆ. ಅವರು ಮೊಯಿಲಿಯವರನ್ನಾಗಲೀ, ಭೀಮಣ್ಣ ಖಂಡ್ರೆಯವರನ್ನಾಗಲೀ, ಮಾಣಿಕ್‌ರಾವ್ ಪಾಟೀಲರನ್ನಾಗಲೀ, ಕೆ.ಎಚ್. ಪಾಟೀಲರನ್ನಾಗಲೀ ಭೇಟಿಯಾಗುವುದಿಲ್ಲವೆ? ಅದಕ್ಕೇನಾದರೂ ನಿರ್ಬಂಧ ಇರುತ್ತದೆಯೆ ? ಒಂದು ಸೋಜಿಗದ ಸಂಗತಿ ಎಂದರೆ ಬೆಂಗಳೂರಿಗೆ ದಮ್ಮಿನ ನಿವಾರಣೆಗಾಗಿ ಯಾರೂ ಬರುವುದಿಲ್ಲ. ಬೆಂಗಳೂರು ದಮ್ಮಿನ ಹುಟ್ಟೂರು. ಇದು ಇಡೀ ಪ್ರಪಂಚಕ್ಕೇ ಗೊತ್ತು. ಅನೇಕ ಜನ ಡೆಲ್ಲಿ, ಬಾಂಬೆ ಮುಂತಾದ ಕಡೆಗಳಿಂದ ಇಲ್ಲಿಗೆ ಬಂದರೆ ಎರಡು ತಿಂಗಳಲ್ಲೇ ಅವರಿಗೆ ದಮ್ಮು ಬರುತ್ತದೆ. ಬೆಂಗಳೂರಿನ ಹವೆ ಅಂಥದ್ದು. ಹೀಗಿರುವಾಗ ......

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ವಿಷಯ ಎರಡು ದಿವಸ ಬೇಕಾದರೂ ಚರ್ಚೆ ಮಾಡೋಣ. ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳುವ ಅಸತ್ಯಕ್ಕೂ ಒಂದು ಮಿತಿ ಇರಬೇಕು. ರಾಜಕೀಯ ಮಾತ ನಾಡುವುದಿಲ್ಲ ಎಂದು ಹೇಳಿ 5 ನಿಮಿಷಗಳಲ್ಲಿ ಏನೇನು ರಾಜಕೀಯ ಮಾನಾಡಬೇಕೋ ಅದನ್ನೆಲ್ಲಾ ಮಾತನಾಡುತ್ತಿದ್ದಾರೆ. ನಿಮ್ಮ ಅಸತ್ಯವನ್ನು ಮೆಚ್ಚುವವರೂ ಕರ್ನಾಟಕ ರಾಜ್ಯದಲ್ಲಿದ್ದರೆ ಶಹಭಾಸ್ ಗಿರಿ ಕೊಡೋಣ.

ಶ್ರೀ ರಾಮಕೃಷ್ಣ ಹೆಗಡೆ.—ಪತ್ರಿಕೆಯಲ್ಲಿ ಹೇಳಿರುವುದನ್ನು ನಾನು ಹೇಳಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ರಾಜಕೀಯ ಕುಯುಕ್ತಿಯ ಮೂರ್ತಿಯಾಗಿ ಬೆಳೆದ ಮುಖ್ಯ ಮಂತ್ರಿಗಳು ಅಸತ್ಯವಾಗಿ ಕುಯುಕ್ತಿಯಿಂದ ಮಾತನಾಡುವವರು.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಒಂದು ಸೋಜಿಗದ ವಿಚಾರ, ಇದಾದರೆ ಇನ್ನೊಂದು ವಿಚಾರ, ಅವರು ಇಲ್ಲಿ ಬಂದಾಗ ತಮ್ಮ ಸ್ವಂತ ಹೆಸರಿನಲ್ಲಿ ಹೋಟೆಲ್‌ನಲ್ಲಿ ಉಳಿಯಲಿಲ್ಲ. ಬೇರೆಯವರ ಹೆಸರಿನಲ್ಲಿ ಉಳಿದಿದ್ದಾರೆ.

Sri M. Veerappa Moily.—This is too much.

ಶ್ರೀ ರಾಮಕೃಷ್ಣ ಹೆಗಡೆ.—ಇದು ಸುಳ್ಳೆ ?

ಶ್ರೀ ಎಂ. ವೀರಪ್ಪ ಮೊಯಿಲಿ.— ಮಹಾರಾಷ್ಟ್ರ ವಿಧಾನಸಭೆಯಲ್ಲಿ ಕರ್ನಾಟಕದ ಮುಖ್ಯಮಂತ್ರಿ ಗಳ ಧರ್ಮಪತ್ನಿಯವರ ವಿಚಾರ ಚರ್ಚೆ ಮಾಡಿದರೆ ಅದಕ್ಕೆ ಅವಕಾಶ ಕೊಡುತ್ತಾರೆಯೇ ? ಎಲ್ಲಿಯವರೆಗೆ ಇದನ್ನು ಕೊಂಡೊಯ್ಯುತ್ತೀರಿ ? is it proper ?

(ಗೊಂದಲ)

ಶ್ರೀ ಮೈಕೇಲ್ ಫರ್ನಾಂಡಿಸ್.— ಅವರು ಸರ್ಕಾರ ಉರುಳಿಸುವುದಕ್ಕೆ ಬಂದಿದ್ದರಿಂದ ಮಾತನಾ

ಡುತ್ತಾರೆ. ಇವರು ಅಲ್ಲಿ ಸರ್ಕಾರವನ್ನು ಉರುಳಿಸುವುದಕ್ಕೆ ಹೋದರೆ ಅವರೂ ಮಾತನಾಡಲಿ. ಬೇಡ ಎನ್ನುವುದಕ್ಕೆ ನಾವು ಯಾರು ?

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ರಾಜಕೀಯವನ್ನು ಮಾತನಾಡುವುದಿಲ್ಲ ಎಂದು ಹೇಳಿ...............

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಾದ ಮೈಕೇಲ್ ಫರ್ನಾಂಡಿಸ್ ಅವರು ಹೇಳಿದಹಾಗೆ, ನಾಳೆ ನನ್ನ ಪತ್ನಿ ಅಲ್ಲಿ ಆ ತರಹ ರಾಜಕೀಯ ಮಾಡುವುದಕ್ಕೆ ಹೋದರೆ ಅಲ್ಲೂ ಚರ್ಚೆ ಮಾಡಲಿ. ಅಲ್ಲೂ ಎರಡು ಜನ ಕನ್ನಡ ಮಾತನಾಡತಕ್ಕ ಮಂತ್ರಿಗಳಿದ್ದಾರೆ. ಅಲ್ಲಿ ಅವರು ವಿಚಾರ ತೆಗೆದುಕೊಂಡರೆ ನನ್ನ ಆತಂಕವೇನೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಇದು ರಾಜಕೀಯವಲ್ಲದೆ ಮತ್ತೇನು ? There must be some limit for all these things.

ಶ್ರೀ ರಾಮಕೃಷ್ಣ ಹೆಗಡೆ.—ನಿನ್ನೆ ದಿವಸ ಮತ್ತೊಂದು ವಿಚಾರ ಬಂತು. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಮಾತನ್ನು ಹೇಳಿದರು. ಅದು ರೆಕಾರ್ಡ್‌ಗೆ ಹೋಗಿದೆ. ಮಾನ್ಯ ರಾಮ ಕೃಷ್ಣ ಹೆಗಡೆಯವರು 15 ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಿದ್ದಾರೆಂದು ಹೇಳಿದರು. ತುಂಬಾ ಸಂತೋಷ. ಅವರ ಪಕ್ಕದ ಒಬ್ಬ ಸದಸ್ಯರು 7 ಕೋಟಿ ರೂಪಾಯಿ ಎಂದೂ ಮತ್ತೊಬ್ಬ ಸದಸ್ಯರು 28 ಕೋಟಿ ಎಂದು, ಮತ್ತೊಬ್ಬರು 25 ಕೋಟಿ ರೂಪಾಯಿ ಎಂದೂ ಹೇಳಿದರು. ಈ ಕೋಟಿ ಕೋಟಿ ರೂಪಾಯಿಗಳ ಬಗ್ಗೆ ಅವರು ಮೊದಲೇ ಪ್ರಸ್ತಾಪ ಮಾಡಿ ವಿಚಾರ ಮಾಡಿಕೊಂಡು ಬಂದಿರಲಿಲ್ಲ. ನಾನು ಈಗ ಟೆಕ್ನಿಕಲ್ ನೋಹೌ ಅನ್ನು ತಿಳಿದುಕೊಳ್ಳಲು ಅವರ ಹತ್ತಿರ ಹೋಗಬೇಕೆಂದು ಇದ್ದೇನೆ. ಆದರೆ ನಾನು ಒಂದು ಮಾತನ್ನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.— ತಾವು ಫೈನಾನ್ಸ್ ಮಿನಿಸ್ಟರ್ ಆಗಿದ್ದಾಗ ನಿಮ್ಮ ಟೆಕ್ನಿಕಲ್ ನೋಹೌ ಎಷ್ಟು ಇತ್ತು ಎಂಬುದನ್ನು ಸುಪ್ರೀಮ್ ಕೋರ್ಟ್‌ನವರು ಬರೆದು ಇಟ್ಟಿದ್ದಾರೆ. you are the person who has institutionalised corruption.

ಶ್ರೀ ಸಿ. ಬೈರೇಗೌಡ.—ನಿಮ್ಮ ವಿಷಯವನ್ನು ಪ್ರಪಂಚವೇ ಹೇಳುತ್ತದೆ. ಏಕೆ ಮಾತನಾಡುತ್ತೀರಿ ಸ್ವಾಮಿ ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಈ ಮನೆಯ ಮುಂದೆ ಒಂದು ಮಾತನ್ನು ಹೇಳು ತ್ತೇನೆ. ಯಾವುದೇ ತಪ್ಪನ್ನು ಮಾಡಿದ್ದರೆ, ಮುಖ್ಯ ಮಂತ್ರಿಯವರನ್ನು ಒಳಗೊಂಡು ವಿಚಾರಣೆ ಮಾಡುವ ಬಗ್ಗೆ ಲೋಕ ಆಯುಕ್ತ ಮಸೂದೆ ಬರುತ್ತದೆ, ಯಾವುದೇ ಲಂಚದ ಛಾರ್ಜಸ್ ಇರಲಿ........

ಶ್ರೀ ಎಂ. ವೀರಪ್ಪಮೊಯಿಲಿ.— ತಾವು ಮಿನಿಸ್ಟರ್ ಆದಾಗಿನಿಂದಲೂ ಇದನ್ನು ರೆಟ್ರಾಸ್ಪೆಕ್ಟೀವ್ ಎಫೆಕ್ಟ್‌ಗೆ ಕೊಡಿ, ಆಗಿನಿಂದಲೂ ತನಿಖೆ ಆಗಲಿ. ಈ ಬಗ್ಗೆ ತಮಗೆ ಧೈರ್ಯ ಇದ್ದರೆ 1956ನೇ ಇಸವಿಯಿಂದ ಚರ್ಚೆಯಾಗಲಿ. ಆಗಿನಿಂದ ಯಾವ ಯಾವ ಮಂತ್ರಿಗಳು ಏನೇನು ಆಸ್ತಿ ಮಾಡಿದ್ದಾರೆ. ಎಲ್ಲೆಲ್ಲಿ ಮನೆ ಮಾಡಿದ್ದಾರೆ ಅದೆಲ್ಲಾ ಹೊರಕ್ಕೆ ಬರುತ್ತದೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ಈ ಸಂದರ್ಭದಲ್ಲಿ ಇದರ ಬಗ್ಗೆ ಇಷ್ಟೊಂದು ಗಲಾಟೆ ಅಗತ್ಯವಿರಲಿಲ್ಲ. ಅವರು ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡಿ ಎಂದು ಹೇಳಿದರು. ಇದನ್ನು ರೆಟ್ರಾಸ್ಪೆಕ್ಟೀವ್ ಎಫೆಕ್ಟ್‌ಗೆ ಕೊಡದೇ ಇದ್ದರೆ ಈ ಕಾಯ್ದೆಯನ್ನು ತಂದು ಪ್ರಯೋಜನವೇನು ? ಈ ಕಾಯ್ದೆ ಯಲ್ಲಿ 5 ವರ್ಷಗಳ ಹಿಂದಿನ ಅವಧಿಯ.... ....

ಶ್ರೀ ಎಂ. ವೀರಪ್ಪಮೊಯಿಲಿ.—1956ನೇ ಇಸವಿಯಿಂದಲೂ ಇದನ್ನು ಜಾರಿಗೆ ಕೊಡಿ.

ಶ್ರೀ ರಾಮಕೃಷ್ಣ ಹೆಗಡೆ — ಇದಕ್ಕೆ 5 ವರ್ಷಗಳ ಅವಧಿ ಇದೆ. 1956 ರಿಂದಲಾದರೂ ಮಾಡಿ, ಇಲ್ಲಾ 1947 ರಿಂದಲಾದರೂ ಮಾಡಿ. ಯಾವಾಗಲಿಂದಲಾದರೂ ಆಗಬಹುದು. ಈ ಬಗ್ಗೆ ನಮ್ಮದೇನೂ ಆತಂಕ ಇಲ್ಲ. ಯಾರ ವಿರುದ್ಧವೇ ಆಗಲಿ, ನನ್ನ ವಿರುದ್ಧವೇ ಆಗಲೀ, ನನ್ನ ಸಹೋದ್ಯೋಗಿಗಳ ವಿರುದ್ಧವೇ ಆಗಲಿ, ನಮ್ಮ ಪಕ್ಷದ ಸದಸ್ಯರ ವಿರುದ್ಧವೇ ಆಗಲಿ ಲಂಚದ ಆರೋಪ, ಭ್ರಷ್ಟಾಚಾರ ಆರೋಪ ಇದ್ದರೆ ಅದನ್ನು ಅವರು ಲೋಕ ಆಯುಕ್ತ ಜಾರಿಗೆ ಬಂದಮೇಲೆ ಅದರ ಮುಂದೆ ತೆಗೆದುಕೊಂಡು ಹೋಗಲಿ ಎಂದು ನಾನು ಹೇಳುತ್ತೇನೆ. ಒಂದು ವೇಳೆ ಇವರು ಮಾಡಿ ದಂತಹ ಆರೋಪಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗದಿದ್ದರೆ ಅವರು ಹೇಳಿದ್ದೆಲ್ಲಾ ಅಸತ್ಯವೆಂದು ರುಜುವಾತು ಆದಂತಾಗುತ್ತದೆ.

ಶ್ರೀ ಜೆ. ಎಚ್. ಪಟೇಲ್.— ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಹಾಗೂ ಅನೇಕ ದಸ್ಯರು ವಿದ್ಯುತ್ ಕೊರತೆ, ವಿದ್ಯುತ್ ಸರಬರಾಜಿನಲ್ಲಿನ ಕಡಿತ ಹಾಗೂ ನಿರೀಕ್ಷಿತ ಕಡಿತ ಹಾಗೂ

ಅನಿರೀಕ್ಷಿತ ಕಡಿತದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ಬಗ್ಗೆ ನಾನು ಸಂಕ್ಷಿಪ್ತವಾಗಿ ಉತ್ತರ ಕೊಡ ಬಯಸುತ್ತೇನೆ. ವಿದ್ಯುತ್ ಕಡಿತದಿಂದಾಗಿ ರಾಜ್ಯದ ಹಲವಾರು ಕಡೆ, ಅದರಲ್ಲೂ ದೊಡ್ಡಬಳ್ಳಾಪುರ ಹಾಗೂ ಬಿಜಾಪುರ ಹಾಗೂ ಉಡುಪಿಯಲ್ಲಿ ನಡೆದಂತಹ ಗಲಭೆ ಬಗ್ಗೆ ನಾವು ಈಗಾಗಲೇ ತಿಳಿದುಕೊಂಡಿದ್ದೇವೆ. ರಾಜ್ಯದ ಜನರಿಗೆ ಈ ವಿದ್ಯುತ್ ಸಮಸ್ಯೆ ಬಗ್ಗೆ ಮನವಿ ಮಾಡಿಕೊಳ್ಳುವುದಕ್ಕೆ ಪರಿಸ್ಥಿತಿಯನ್ನು ಸಂಕ್ಷಿಪ್ತವಾಗಿ ಹೇಳಬಯಸುತ್ತೇನೆ. ನಮ್ಮ ಇಡೀ ರಾಜ್ಯದ ಬಗ್ಗೆ ಪೂರ್ಣ ಚಿತ್ರವನ್ನು, ಹಾಗೂ ಜಿಲ್ಲಾವಾರು ಏನು ಕೊರತೆ ಇದೆ ಹಾಗೂ ಅದನ್ನು ನೀಗಿಸಲು ಏನು ಕಾರ್ಯಕ್ರಮ ಹಾಕಿಕೊಂಡಿದ್ದೇವೆನ್ನುವ ಬಗ್ಗೆ ಸಂಪೂರ್ಣ ಚಿತ್ರವನ್ನು ಇನ್ನು ಎರಡು ಮೂರು ದಿವಸಗಳಲ್ಲಿ ಹೇಳುತ್ತೇನೆ. ಆದರೆ ಇಷ್ಟು ಮಾತ್ರ ಹೇಳಬಯಸುತ್ತೇನೆ. ಜೂನ್ 17 ರಂದು ಶರಾವತಿ ವಿದ್ಯುದಾಗಾರದಲ್ಲಿ ಒಂದು ಯೂನಿಟ್ ಕೆಟ್ಟು ಹೋಯಿತು. ಇದರಿಂದಾಗಿ 90 ಮೆಗಾವಾಟ್ ವಿದ್ಯುತ್ ಬರುವುದು ಕಡಿಮೆಯಾಯಿತು. ನಮಗೆ ಮೊದಲೇ 200 ಮೆಗಾವಾಟ್ ವಿದ್ಯುತ್ ಕೊರತೆ ಇದ್ದು ಇದರ ಜೊತೆ ಈ 90 ಮೆಗಾವಾಟ್ ಸಹಾ ಸೇರಿಕೊಂಡಿತು. ವಿದ್ಯುತ್ ಸರಬರಾಜಿನಲ್ಲಿ ರಾಜ್ಯದ ಹಲವು ಕಡೆ ಅನಿರೀಕ್ಷಿತವಾಗಿ ಸಿಸ್ಟಮ್ ಫೈಲ್ ಆಗಿದೆ. ಶರಾವತಿಯಲ್ಲಿ ಸದ್ಯಕ್ಕೆ ಕೆಟ್ಟಿರುವ 2 ಯೂನಿಟ್‌ಗಳ ರಿಪೇರಿ ಆಗಬೇಕಾಗಿದೆ. ಅದರಲ್ಲಿ ಒಂದು ಯೂನಿಟ್ ಮೇ ತಿಂಗಳವರೆಗೆ ರಿಪೇರಿ ಆಗುವ ಸಾಧ್ಯತೆ ಇಲ್ಲ. ಇನ್ನೊಂದು ಮುಂದಿನ ತಿಂಗಳ ಮಧ್ಯಭಾಗದೊಳಗೆ ರಿಪೇರಿ ಮಾಡಿ ನಮ್ಮ ಕೆಪಾಸಿಟಿಯನ್ನು ಹೆಚ್ಚು ಮಾಡಿಕೊಳ್ಳಬಹುದಾಗಿದೆ. ಈ ಕಾರಣಗಳಿಂದಾಗಿ ಗ್ರಾಹಕರು ಏನು ತೊಂದರೆ ಅನುಭವಿಸುತ್ತಿದ್ದಾರೆ ಅದನ್ನು ಕಡಿಮೆ ಮಾಡಲು ಪ್ರಯತ್ನ ಮಾಡುತ್ತೇವೆ. ಅಲ್ಲಿಯವರೆಗೆ ರಾಜ್ಯದ ಜನತೆ ಸಹಕರಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.— ಮಾನ್ಯ ಮುಖ್ಯಮಂತ್ರಿಯವರಿಂದ ದಳಪತಿಗಳ ಬಗ್ಗೆ ಉತ್ತರ ಬರಲಿಲ್ಲ. 20 ಸಾವಿರ ಜನ ಸತತವಾಗಿ ತಿರುಗುತ್ತಿದ್ದಾರೆ ಇವರ ಬಗ್ಗೆ ಸರ್ಕಾರಿ ಪಾಲಿಸಿ ಮಾಡುತ್ತೇವೆಂದು ಹಿಂದೆ ಹೇಳಿದರು. ಅದು ಇನ್ನೂ ಆಗಿಲ್ಲ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಏನು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡುತ್ತಿದ್ದಾರೆ ಅವರ ಬಗ್ಗೆ ಮುಖ್ಯಮಂತ್ರಿಗಳು ಏನೂ ಹೇಳಿಲ್ಲ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಷಯ. ಇನ್ನು ಮಹಾಜನ್ ಕಮೀಷನ್ ರಿಪೋರ್ಟ್ ಬಗ್ಗೆ ಈ ಸಭೆಯಲ್ಲಿ ಎರಡು ಸಾರಿ ಚರ್ಚೆಯಾಗಿದ್ದು ಇದನ್ನು ಇನ್ ಟೋಟೋ ಇಂಪ್ಲಿಮೆಂಟ್ ಮಾಡಬೇಕೆಂದು ಆಯಿತು. ಆದರೂ 15 ವರ್ಷದಿಂದ ಇಂಪ್ಲಿಮೆಂಟ್ ಆಗಿಲ್ಲ. ಮಾನ್ಯ ನಿಜಲಿಂಗಪ್ಪನವರು ಗೋಕಾಕ್‌ನಲ್ಲಿ ಮಾತಾಡುವಾಗ ಇದು ಸತ್ತ ವಿಷಯ ಎಂದು ಹೇಳಿದ್ದಾರೆ ಇದು ಹೀಗಾದರೆ ಇಡೀ ಕರ್ನಾಟಕ ರಾಜ್ಯದ ಪ್ರತಿಷ್ಟೆ ಮಣ್ಣುಪಾಲಾದಂತೆ. ಇದು ನಾಲ್ಕು ಕೋಟಿ ಕನ್ನಡಿಗರ ಪ್ರಶ್ನೆಯಾಗಿದೆ. ಈ ವಿಷಯುವನ್ನು ಮತ್ತೆ ಎತ್ತಿ ಪ್ರತಿಷ್ಠೆಗೆ ಧಕ್ಕೆಯಾದಂತಾಗುತ್ತದೆ. ಹೀಗೇ ಬಿಟ್ಟರೆ ಮಹಾರಾಷ್ಟ್ರದವರು ನಮ್ಮನ್ನು ತೋಳಗಳಂತೆ ತಿಂದುಹಾಕುತ್ತಾರೆ ಆದ್ದರಿಂದ ಈ ವಿಷಯವನ್ನು ರಾಜಕೀಯವಾಗಿ ಮಾಡುವುದು ಬೇಡ. ಹಾಗೆ ನೋಡಿದರೆ ನಮಗೆ ಬರಬೇಕಾದ ನೂರಾರು ಹಳ್ಳಿಗಳು ತಮಿಳುನಾಡಿನಲ್ಲಿ, ಕೇರಳದಲ್ಲಿ, ಆಂಧ್ರಪ್ರದೇಶದಲ್ಲಿ ಇವೆ. ಇದನ್ನು ತಂದು ಕನ್ನಡ ರಾಜ್ಯಕ್ಕೆ ದ್ರೋಹ ಮಾಡತಕ್ಕದ್ದು ಬೇಡ. ಈ ರೀತಿ ವಿಷಯವನ್ನು ಮತ್ತೆ ತಂದು ರಾಜ್ಯದ ಜನತೆಗೆ ದ್ರೋಹ ಮಾಡುತ್ತಿದ್ದೀರಿ ಎಂದು ಹೇಳುತ್ತೇನೆ

ಶ್ರೀ ಭೀಮಣ್ಣ ಖಂಡ್ರೆ.— ಮುಖ್ಯಮಂತ್ರಿಗಳಿಗೆ ಅಧಿಕಾರ ಇಲ್ಲ.

(ಗೊಂದಲ)

ಅಧ್ಯಕ್ಷರು.— ಉತ್ತರ ಹೇಳಿ ಆಯಿತು, ಕ್ಲಾರಿಫಿಕೇಷನ್ ಆಯಿತು.

ಶ್ರೀ ಎಂ. ವೀರಪ್ಪಮೊಯಿಲಿ.— ಅಧ್ಯಕ್ಷರೆ, ಅವರು ಒಂದು ಕರೆ ಕೊಟ್ಟಿದ್ದಾರೆ. ಆರ್ಥಿಕ ಮತ್ತು ಸಾಮಾಜಿಕ ಕಾರ್ಯಕ್ರಮ, ಕರ್ನಾಟಕ ರಾಜ್ಯದ ಹಿತಾಸಕ್ತಿಯ ಬಗ್ಗೆ ನಾವು ಆದಷ್ಟು ಜಾಸ್ತಿ ಆಲೋಚನೆ ಮಾಡೋಣ, ರಾಜಕೀಯ ಈ ಬಗ್ಗೆ ಹೆಚ್ಚು ಬೆರೆಸುವುದು ಬೇಡ ಎಂದು ಹೇಳಿದ್ದಾರೆ ಅದನ್ನು ಸ್ವಾಗತ ಮಾಡುತ್ತೇನೆ. ಅದೇ ದೃಷ್ಟಿಯಲ್ಲಿ ರಾಜಕೀಯ ಕಲುಷಿತವಾಗಿದೆ, ಕೆಲವು ಮಾತುಗಳಿಂದ, ಆಪಾದನೆಗಳಿಂದ, ಪ್ರತಿ ಆಪಾದನೆಗಳಿಂದ ಆಗಿದೆ ಅದಕ್ಕೂ ಕೂಡ ಇತಿಶ್ರೀ ಆಗಬೇಕಾಗುತ್ತದೆ ಅದಕ್ಕೆ ಆಗದೇ ಮುಂದುವರಿಸಿಕೊಂಡು ಹೋದರೆ ಬಹಳ ಕಷ್ಟವಾಗುತ್ತದೆ ಮುಖ್ಯಮಂತ್ರಿಗಳಾಗಿ, 3 ಕೋಟಿ ರೂಪಾಯಿ ಇಲ್ಲಿ ಟ್ಯಾಪಿಂಗ್‌ಗೆ ಉಪಯೋಗವಾಗಿದೆ ಎಂದು ಏನು ಹೇಳಿದ್ದಾರೆ ಮತ್ತು ಅದರಲ್ಲಿ 2 ಲಕ್ಷ ರೂಪಾಯಿ ಬೈರೇಗೌಡರಿಗೆ ಕೊಟ್ಟಿದೆ ಎಂದು ಏನು ಹೇಳಿದ್ದಾರೆ ಅದನ್ನು ಅವರು ಜವಾಬ್ದಾರಿಯುತವಾಗಿ ಮಾಡಿದ್ದಾರೆಂದು ತಿಳಿದುಕೊಂಡಿದ್ದೇನೆ. ಅವರು ಜವಾಬ್ದಾರಿಯುಳ್ಳವರು. ವಿವೇಚನೆಯುಳ್ಳವರು, ಏನು ಮಾತನಾಡಿದ್ದಾರೆ, ಹಾಗೆ ಹೇಳುತ್ತಾರೆಂದು ತಿಳಿದುಕೊಂಡಿದ್ದೇವೆ. ಏಕೆಂದರೆ, ಈ ಆಪಾದನೆಯನ್ನು ಸಾಬೀತುಗೊಳಿಸಬೇಕಾಗುತ್ತದೆ. ಈ ಟೇಪ್ ವ್ಯವಹಾರದ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವಯರಿ ಮಾಡಿದ್ದೀರಿ ಸ್ವಾಗತ. ಆದರ ಜೊತೆಯಲ್ಲಿ ಜವಾಬ್ದಾರಿಯಿಂದ ತಾವು ಮಾಡಿದ ಆಪಾದನೆಯನ್ನು ಸಾಬೀತು ಮಾಡಿ ತೋರಿಸಬೇಕಾಗುತ್ತದೆ. ತಾವು ಬಹಳ ಧೈರ್ಯ

ವಂತರು; ಉಗ್ರನರಸಿಂಹಪ್ಪನವರ ಧರ್ಮಪತ್ನಿಯನ್ನು ಅಕ್ರಮ ಬಂಧನದಲ್ಲಿ ಇಟ್ಟಿದ್ದರು, ಕಿಡ್‌ನ್ಯಾಪ್ ಮಾಡಿದರು ಎಂದು ಬಂದಿತ್ತು.

(ಗೊಂದಲ)

ಪೋಲೀಸ್ ಅಧಿಕಾರಿಗಳು ಇನ್‌ವಾಲ್ವ್ ಆಗಿದ್ದಾರೆ, ಇಬ್ಬರು ಸಚಿವ ಸಂಪುಟದ ಮಂತ್ರಿಗಳ ಮೇಲೆ ಆಪಾದನೆ ಇದೆ. ಆದರಲ್ಲಿ ನಿಷ್ಪಕ್ಷಪಾತವಾದ ವಿಚಾರಣೆ ಆಗುವುದಿಲ್ಲ. ಅವರು ರಾಜೀನಾಮೆ ಕೊಡತಕ್ಕ ವಿಚಾರದಲ್ಲಿ ಇವರು ಹಾರಿಕೆ ಉತ್ತರ ಕೊಟ್ಟಿದ್ದಾರೆ........ಅವರಿಗೆ ನಾಚಿಕೆ ಆಗಬೇಕು.

(ಗೊಂದಲ)

ಶ್ರೀ ಎಂ. ರಘುಪತಿ.— ನಿಮಗೆ ನಾಚಿಕೆಯಾಗಬೇಕು. ನಿಮಗೆ ನಾಚಿಕೆ ಇಲ್ಲ.

(ಗೊಂದಲ)

ಶ್ರೀ ವೈ. ಕೆ. ರಾಮಯ್ಯ.— ನಿಮಗೆ ನಾಚಿಕೆ ಇದೆಯೇ ? ಯಾರಿಗೆ ನಾಚಿಕೆ ಇಲ್ಲ ಎಂದು ದೇಶದ ಜನ ಹೇಳಬೇಕು. ವಿರೋಧ ಪಕ್ಷದ ನಾಯಕರಾಗಿದ್ದಾರೆ; ಇವರಿಗೆ ನಾಚಿಕೆ ಇಲ್ಲ, ಯಾರಿಗೆ ಮರ್ಯಾದೆ ಇರುವುದು.

(ಗೊಂದಲ)

ಇವರಲ್ಲಿ ಯಾರಿಗೆ ಮರ್ಯಾದೆ ಇರುವುದು ? ಮರ್ಯಾದೆ ಯಾರಿಗೆ ಇಲ್ಲ ಎಂದು ಕೇಳುತ್ತೇನೆ. ಇದಕ್ಕೂ ಒಂದು ಮಿತಿ ಇದೆ.

(ಗೊಂದಲ)

(ಗೊಂದಲಮಯ ವಾತಾವರಣದಲ್ಲಿ ವಿರೋಧ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.— ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಜನವರಿ 16, 1984 ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ.

ಪ್ರಸ್ತಾವವು ಅಂಗೀಕೃತವಾಯಿತು.

3. ANNOUNCEMENT

Mr. Speaker.— I have received the following message from the Deputy Chairman, Legislative Cauncil :—

The Karnataka Advocates Welfare Fund Bill 1983 as passed by the Legislative Assembly was laid before the Legislative Council on 23rd January 1984 and the cansideration motion of the Bill when put to vote rejected by the Legislative Council to-day.

XXX XXX XXX XXX

4. LEGISLATIVE BUSINESS

The Karnataka Forest (Amendment) Bill, 1984

Leave to introduce

Sri B. A. Jivijaya (Minister of State for Forest).— Sir, I beg to move : " That leave be granted to introduce the Karnataka Forest (Amendment) Bill, 1984.

Mr. Speaker.— The question is : " That leave be granted to introduce the Karnataka Forest (Amendment) Bill, 1984 ".

The motion was adopted and leave was granted.

Sri B. A Jivijaya (Minister of State for Forest) — Sir, I introduce the Karnataka Forest (Amendment) Bill, 1984.